ಮಾನವಿಕ ಕರ್ನಾಟಕ

ಸಂಪುಟ ೩೨ ಸಂಚಿಕೆ ೨



ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ
ಮಾನಸಗಂಗೋತ್ರಿ, ಮೈಸೂರು

ಮಾನವಿಕ ಕರ್ಣಾಟಕ

ಸಂಪುಟ ೩೭ - ಸಂಚಿಕೆ ೨

ಪ್ರಸಾರಾಂಗ

ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

೨೦೦೯

manavika karnataka : A Kannada Quarterly of the University of Mysore, Volume 37, No. 2, Edited by Prof. V.N. Sheshagiri Rao, Prof. Aravindamalagatti, and Prof. R. Ramakrishna, Published by the Director, Prasaranga, University of Mysore, Manasagangotri, Mysore - 570 006. Pp v+106

ಪ್ರಧಾನ ಸಂಪಾದಕರು

ಪ್ರೊ. ಸಿ. ನಾಗಣ್ಣ

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ

ಮೈಸೂರು ೫೭೦ ೦೦೬

ಸಂಪಾದಕರು

ಪ್ರೊ. ವಿ.ಎನ್. ಶೇಷಗಿರಿರಾವ್

ಪ್ರೊ. ಅರವಿಂದ ಮಾಲಗತ್ತಿ

ಪ್ರೊ. ಆರ್. ರಾಮಕೃಷ್ಣ

ಪ್ರಕಾಶಕರು ಮತ್ತು ಮುದ್ರಕರು

ಪ್ರೊ. ಸಿ. ನಾಗಣ್ಣ

ನಿರ್ದೇಶಕರು

ಪ್ರಸಾರಾಂಗ ಮತ್ತು ವಿಶ್ವವಿದ್ಯಾನಿಲಯ ಮುದ್ರಣಾಲಯ

ಮಾನಸಗಂಗೋತ್ರಿ, ಮೈಸೂರು - ೫೦೦ ೦೦೬

ಪ್ರಕಾಶಕರ ಮಾತು

ಮೈಸೂರು ವಿಶ್ವವಿದ್ಯಾನಿಲಯ ನಿರಂತರ ಜ್ಞಾನ ಪ್ರಸಾರಕ್ಕಾಗಿ ಕೈಗೊಂಡ ಹಲವು ಪ್ರತಿಷ್ಠಿತ – ಮೌಲಿಕ ಯೋಜನೆಗಳಲ್ಲಿ ನಿಯತ ಕಾಲಿಕೆಗಳ ಸಂಪಾದನೆ ಹಾಗೂ ಪ್ರಕಟಣೆಯೂ ಒಂದು. 'ಮಾನವಿಕ ಕರ್ನಾಟಕ'ದ ೩೦ನೇ ಸಂಪುಟದ ೨ನೆಯ ಸಂಚಿಕೆ ಮುದ್ರಣವಾಗಿದೆ. ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಉಪಯುಕ್ತ ಶೋಧಿತ ವಿವರಣಾತ್ಮಕ ಲೇಖನಗಳು ಈ ಸಂಚಿಕೆಯಲ್ಲಿವೆ.

'ಪ್ರಬುದ್ಧ ಕರ್ನಾಟಕ' ಮತ್ತು 'ಮಾನವಿಕ ಕರ್ನಾಟಕ' ನಾಡಿನ ಶ್ರೇಷ್ಠ ನಿಯತ ಕಾಲಿಕಗಳೆಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಈ ಪತ್ರಿಕೆಗಳನ್ನು ಹೊರತರುವಲ್ಲಿ ಮಾನ್ಯ ಕುಲಪತಿಗಳಾದ ಪ್ರೊ. ವಿ.ಜಿ. ತಳವಾರ್ ಮತ್ತು ಕುಲಸಚಿವರಾದ ಡಾ. ಪಿ.ಎಸ್. ನಾಯಕ್ ಅವರು ವಿಶೇಷ ಆಸಕ್ತಿ ತೋರಿದ್ದಾರೆ. ಈ ಸಂಚಿಕೆಯನ್ನು ಪ್ರೊ. ಅರವಿಂದ ಮಾಲಗತ್ತಿ, ಪ್ರೊ. ವಿ.ಎನ್. ಶೇಷಗಿರಿರಾವ್ ಮತ್ತು ಪ್ರೊ. ಆರ್. ರಾಮಕೃಷ್ಣರವರು ಅಚ್ಚುಕಟ್ಟಾಗಿ ಸಂಪಾದಿಸಿ ಕೊಟ್ಟಿದ್ದಾರೆ. ಇವರೆಲ್ಲರಿಗೂ ಈ ಸಂಚಿಕೆಯ ಲೇಖಕರಿಗೂ ನಮ್ಮ ಧನ್ಯವಾದಗಳು. ಇದರ ಅಕ್ಷರಜೋಡಣೆ ಕೆಲಸವನ್ನು ಮಾಡಿಕೊಟ್ಟ ಪ್ರಸಾರಾಂಗದ ಅಕ್ಕರಮನೆಯ ಸಿಬ್ಬಂದಿಗೂ ಶುದ್ಧವಾಗಿ ಕರಡನ್ನು ನೋಡಿದ ಕರಡು ಪರಿಶೀಲಕರಾದ ಶ್ರೀಮತಿ ಟಿ. ಕಮಲಮ್ಮ ಅವರಿಗೂ ಮುದ್ರಿಸಿಕೊಟ್ಟಿರುವ ಮೈಸೂರು ವಿಶ್ವವಿದ್ಯಾನಿಲಯ ಮುದ್ರಣಾಲಯದ ಸಿಬ್ಬಂದಿ ವರ್ಗದವರಿಗೂ ಈ ಎಲ್ಲ ಕಾರ್ಯಗಳಲ್ಲಿ ಸಹಕರಿಸುತ್ತಿರುವ ಪ್ರಸಾರಾಂಗದ ಸಿಬ್ಬಂದಿ ವರ್ಗದವರಿಗೂ ನನ್ನ ಹಾರ್ದಿಕ ವಂದನೆಗಳು.

ಪ್ರೊ. ಸಿ. ನಾಗಣ್ಣ

ಸಂಪಾದಕರ ಮಾತು

ಈ ಸಂಚಿಕೆಯಲ್ಲಿ ಒಟ್ಟು ೧೧ ಲೇಖನಗಳಿವೆ. ವಸ್ತುವೈವಿಧ್ಯ ಈ ಸಂಚಿಕೆಯಲ್ಲಿ ಎದ್ದು ಕಾಣುತ್ತದೆ. ರಾಜಕೀಯ, ಚರಿತ್ರೆ, ಆಡಳಿತ, ಅರ್ಥಶಾಸ್ತ್ರ, ಸಾಹಿತ್ಯ, ಭಾಷಾಶಾಸ್ತ್ರ ಮೂಗಿನ ಮಹಿಮೆ, ಹರಿವಾಸಿನಿಯರು, ಗೋಪಿಕಾ ವಸ್ತ್ರಾಪಹರಣ, ಪತ್ರಿಕಾ ಸ್ವಾತಂತ್ರ್ಯ, ದಲಿತ ಮಹಿಳೆ ಮುಂತಾದವುಗಳನ್ನು ಕುರಿತ ವಿಚಾರಪೂರ್ಣವೂ ಮತ್ತು ಬೋಧಪ್ರದವೂ ಆದ ಲೇಖನಗಳಿವೆ.

ಪ್ರೊ. ವಿ.ಎನ್. ಶೇಷಗಿರಿರಾವ್
ಪ್ರೊ. ಅರವಿಂದ ಮಾಲಗತ್ತಿ
ಪ್ರೊ. ಆರ್. ರಾಮಕೃಷ್ಣ

ಪರಿವಿಡಿ

೧. ನಳಂದ ವಿಶ್ವವಿದ್ಯಾನಿಲಯ - ಭಾರತೀಯ ಶೈಕ್ಷಣಿಕ, ಐತಿಹಾಸಿಕ ಮತ್ತು ಸಾಂಸ್ಕೃತಿಕ ಪರಂಪರೆಯ ಪ್ರತೀಕ

-ಡಾ. ನಿರ್ಮಲ್‌ರಾಜು

ಭಾರತೀಯ ಸಾಂಸ್ಕೃತಿಕ ಮತ್ತು ಚಾರಿತ್ರಿಕ ಪರಂಪರೆಯು ಅತಿ ಪ್ರಾಚೀನವಾದುದು. ಭಾರತದ ವೈವಿಧ್ಯಮಯ ಹಾಗೂ ವೈಶಿಷ್ಟ್ಯಪೂರ್ಣ ಸಾಂಸ್ಕೃತಿಕ ಪರಂಪರೆಯ ಬೆಳೆವಣಿಗೆಗೆ ಅನೇಕ ಐತಿಹಾಸಿಕ ವ್ಯಕ್ತಿಗಳು, ಘಟನಾವಳಿಗಳು, ಸಂಘಸಂಸ್ಥೆಗಳು, ಶೈಕ್ಷಣಿಕ ಕೇಂದ್ರಗಳು, ಚಾರಿತ್ರಿಕ ಸ್ಥಳಗಳು ಮೊದಲಾದವುಗಳು ತಮ್ಮದೇ ಆದ ಪಾತ್ರ ವಹಿಸಿ ಅಮೂಲ್ಯ ಕೊಡುಗೆಗಳನ್ನು ನೀಡಿವೆ. ಅಂಥವುಗಳಲ್ಲಿ ನಳಂದ ವಿಶ್ವವಿದ್ಯಾನಿಲಯವೂ ಒಂದು. ನಳಂದ ವಿಶ್ವವಿದ್ಯಾನಿಲಯದ ಸ್ಥಾಪನೆ, ರಚನೆ, ಅದರ ಸ್ವರೂಪ, ಕಾರ್ಯವೈಖರಿ, ಅಲ್ಲಿನ ಅಧ್ಯಾಪಕ ವರ್ಗ ಮತ್ತು ವಿದ್ಯಾರ್ಥಿಗಳಲ್ಲಿದ್ದ ಶಿಸ್ತು ಸಂಯಮ, ಸಾಮರಸ್ಯ ಮತ್ತು ಅಧ್ಯಯನದ ರೀತಿನೀತಿಗಳು ಸರ್ವಕಾಲಕ್ಕೂ ಆದರ್ಶಪ್ರಾಯವಾದುದು ಮಾತ್ರವಲ್ಲದೆ ಭಾರತೀಯ ಶಿಕ್ಷಣ ಕ್ಷೇತ್ರಕ್ಕೆ ಕಳಸಪ್ರಾಯವೂ ಹೌದು. ಮಿಗಿಲಾಗಿ ಈ ವಿಶ್ವವಿದ್ಯಾನಿಲಯದಲ್ಲಿ ಅಧ್ಯಯನ ಮಾಡಲು ದೇಶದ ವಿವಿಧ ಭಾಗಗಳಿಂದಲೂ ಮತ್ತು ವಿದೇಶಗಳಿಂದಲೂ ವಿದ್ಯಾರ್ಥಿಗಳು ಬರುತ್ತಿದ್ದರು. ಇದು ರಾಷ್ಟ್ರೀಯ ಐಕ್ಯತೆಗೆ ಸಹಕಾರಿಯಾಗಿತ್ತಲ್ಲದೆ, ನಮ್ಮ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪ್ರಸಾರ ಮಾಡಿದ ಸಾಂಸ್ಕೃತಿಕ ರಾಯಭಾರಿಯಾಗಿತ್ತೆಂಬುದೂ ಗಮನಾರ್ಹ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಸಂಶೋಧನಾ ಲೇಖನವನ್ನು ರಚಿಸಲಾಗಿದೆ.

ಕ್ರಿ.ಶ. ೪ ರಿಂದ ೧೦ನೇ ಶತಮಾನದ ನಡುವಣ ಅವಧಿಯಲ್ಲಿ, ಭಾರತದ ನಾನಾ ಭಾಗಗಳಲ್ಲಿ ಅನೇಕ ವಿದ್ಯಾ ಕೇಂದ್ರಗಳಿದ್ದವು. ಅವುಗಳಲ್ಲಿ ತಕ್ಷಶಿಲ, ಕಾಶಿ, ಪಾಂಚಾಲ, ಉಜ್ಜೈನಿ, ಪಾಟಲಿಪುತ್ರ, ಕಂಚಿ, ಮಧುರೆ, ಬಳ್ಳಿಗಾಮೆ, ಓದಂಡಪುರಿ,

ವಿಕ್ರಮಶೀಲ ನಳಂದ ಮೊದಲಾದ ಶೈಕ್ಷಣಿಕ ಕೇಂದ್ರಗಳು ಉಚ್ಛ್ರಾಯ ಮಟ್ಟದಲ್ಲಿದ್ದವು. ಇವುಗಳಲ್ಲೆಲ್ಲ ನಳಂದ ವಿಶ್ವವಿದ್ಯಾನಿಲಯವು ಹನ್ನೆರಡನೇ ಶತಮಾನದ ಅಂತ್ಯದವರೆಗೂ ಅತ್ಯಂತ ಪ್ರಭಾವಶಾಲಿ ಹಾಗೂ ಪ್ರಸಿದ್ಧವಾದ ವಿಶ್ವವಿದ್ಯಾನಿಲಯವಾಗಿತ್ತು. ಇಂತಹ ಪ್ರಸಿದ್ಧ ವಿಶ್ವವಿದ್ಯಾನಿಲಯದ ಬಗ್ಗೆ ಸಮಕಾಲೀನ ಶಾಸನಗಳು, ಜೈನ-ಬೌದ್ಧ ಧರ್ಮಗ್ರಂಥಗಳು, ಚೀನಾದೇಶದ ಯಾತ್ರಿಕರಾದ ಹುಯ್ಯನ್‌ತ್ಸಾಂಗ್ ಮತ್ತು ಇತ್ಸಿಂಗ್‌ರವರ ಬರವಣಿಗೆಗಳು ಹಾಗೂ ಟಿಬೆಟ್ಟಿನ ತಾರನಾಥನ ಬರವಣಿಗೆಯೂ ಸಹ ಹೆಚ್ಚಿನ ಮಾಹಿತಿಗಳನ್ನೊದಗಿಸುತ್ತವೆ. ಇವುಗಳಲ್ಲಿ ಹುಯ್ಯನ್‌ತ್ಸಾಂಗ್ ರಚಿಸಿದ ಸಿ-ಯೂ-ಕಿ ಗ್ರಂಥವು ಬಹಳ ಮುಖ್ಯವಾದವು. ಏಕೆಂದರೆ ಹುಯ್ಯನ್‌ತ್ಸಾಂಗ್ ಈ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಯಾಗಿ ಅಧ್ಯಯನ ನಡೆಸಿದ್ದುದರಿಂದ ಅದರ ಬಗೆಗೆ ಸವಿಸ್ತಾರವಾದ ವರ್ಣನೆಯನ್ನು ನೀಡಿದ್ದಾನೆ.

ಇಂದಿನ ಬಿಹಾರ ರಾಜ್ಯದ ರಾಜಗೃಹದ ಉತ್ತರ ದಿಕ್ಕಿಗೆ ಎಂಟುಮೈಲಿ ದೂರದಲ್ಲಿರುವ ಬರಗಾವನ್ (ಬರಗಾಂವ್) ಗ್ರಾಮವೇ ನಳಂದ ವಿಶ್ವವಿದ್ಯಾನಿಲಯದ ನಿವೇಶನವಾಗಿತ್ತು. ಈ ವಿದ್ಯಾಪೀಠದ ಅಸ್ತಿತ್ವವು ಬುದ್ಧನಕಾಲದಲ್ಲೇ ಇದ್ದಿತೆಂದೂ, ಆ ಪ್ರದೇಶದ ಸುತ್ತಮುತ್ತಲಿನ ಸುಮಾರು ಐನೂರು ಮಂದಿ ವರ್ತಕರು ಈ ನಿವೇಶನವನ್ನು ಕೊಂಡು ಅಲ್ಲಿ ಬೌದ್ಧ ವಿಹಾರವೊಂದನ್ನು ಕಟ್ಟಿಸಿ, ಅದನ್ನು ಬುದ್ಧನಿಗೆ ಅರ್ಪಿಸಿದರೆಂದೂ ಹ್ಯೂಯನ್‌ತ್ಸಾಂಗ್‌ನ ಬರವಣಿಗೆಯಿಂದ ತಿಳಿದುಬರುತ್ತದೆ.

ಬೌದ್ಧ ಸಂಪ್ರದಾಯದ ಪ್ರಕಾರ ಕ್ರಿ.ಶ. ೫ನೇ ಶತಮಾನದಲ್ಲಿ ಗುಪ್ತಸಂತತಿಯ ದೊರೆಯಾದ ಕುಮಾರಗುಪ್ತನ ಕಾಲದಲ್ಲಿ ಸಖರಾದಿತ್ಯನೆಂಬ ಶ್ರೀಮಂತ ವ್ಯಾಪಾರಿಯ ನಳಂದದಲ್ಲಿ ಒಂದು ಮಹಾವಿಹಾರವನ್ನ ಕಟ್ಟಿಸಿ ಹೇರಳ ಧನಸಹಾಯ ನೀಡಿ ಅದರ ಪುರೋಭಿವೃದ್ಧಿಗೆ ಕಾರಣನಾದನು. ಅನಂತರ ರಾಜ್ಯವಾಳಿದ ಗುಪ್ತದೊರೆಗಳಾದ ಬುಧಗುಪ್ತ, ಬಾಲಾದಿತ್ಯ, ತಥಗತಗುಪ್ತ ಮೊದಲಾದವರು ಈ ವಿಶ್ವವಿದ್ಯಾನಿಲಯಕ್ಕೆ ಹೆಚ್ಚಿನ ಪ್ರೋತ್ಸಾಹವನ್ನೂ, ಧನ ಸಹಾಯವನ್ನೂ ಮಾಡಿದರು. ತದನಂತರ ಪುಷ್ಯಭೂತಿಮನೆತನದ ಸ್ಥಾನೇಶ್ವರದ ದೊರೆಯಾದ ಹರ್ಷವರ್ಧನನ ಪ್ರೋತ್ಸಾಹದಿಂದ ಇದು ಅಂತಾರಾಷ್ಟ್ರೀಯ ಪ್ರಖ್ಯಾತಿಯನ್ನು ಪಡೆದುಕೊಂಡು ಪ್ರಪಂಚದಾದ್ಯಂತ ವಿದ್ಯಾರ್ಥಿಗಳನ್ನು ತನ್ನೆಡೆ ಆಕರ್ಷಿಸಿತು.

ಸಾಮಾನ್ಯವಾಗಿ ಒಂದು ವಿಶ್ವವಿದ್ಯಾನಿಲಯದ ಘನತೆಗೌರವಗಳು ಅಲ್ಲಿ ವ್ಯಾಸಂಗಕ್ಕೆ ಲಭ್ಯವಿರುವ ವಿಷಯಗಳು, ಸಿಬ್ಬಂದಿ, ಸೌಲಭ್ಯ ಸಲಕರಣೆಗಳು, ಉಪಾಧ್ಯಾಯ ವರ್ಗದ ದಕ್ಷತೆ, ವಿದ್ಯಾರ್ಥಿಗಳ ನಿಷ್ಠೆಯಿಂದ ಕೂಡಿದ ಅಧ್ಯಯನ, ಶಿಸ್ತು ಸಂಯಮ ಮತ್ತು ಅಲ್ಲಿನ ಪುಸ್ತಕ ಭಂಡಾರ ಮೊದಲಾದವುಗಳನ್ನು ಅವಲಂಬಿಸಿರುತ್ತದೆ. ಈ ಅಂಶಗಳ ಹಿನ್ನೆಲೆಯಲ್ಲಿ ನಳಂದ ವಿಶ್ವವಿದ್ಯಾನಿಲಯದ

ಸಾಧನೆಗಳು ಇಂದಿಗೂ ಆಶ್ಚರ್ಯಕರ ಸಂಗತಿಗಳಾಗಿವೆ. ನಳಂದ ವಿಶ್ವವಿದ್ಯಾನಿಲಯವು ಅನೇಕ ಭವ್ಯಕಟ್ಟಡಗಳನ್ನೊಳಗೊಂಡಿತ್ತು. ಸುತ್ತಲೂ ಇಟ್ಟಿಗೆಗಳಿಂದ ಕಟ್ಟಿದ ಆವರಣದ ಗೋಡೆಯಿತ್ತು. ಆವರಣದ ಒಳಗಡೆ ಮತ್ತು ಹೊರಗಡೆ ಮಾವಿನತೋಪುಗಳನ್ನು ಬೆಳೆಸಲಾಗಿತ್ತು. ಅಲ್ಲಲ್ಲಿ ತಾವರೆ ಹೂವಿನಿಂದ ಕೂಡಿದ ಪುಷ್ಕರಣಿಗಳಿದ್ದವು. ವಿಶಾಲವಾದ ಕಟ್ಟಡಗಳ ಕಂಬಗಳನ್ನು ಸುಂದರವಾದ ಕೆತ್ತನೆ ಕೆಲಸಗಳಿಂದ ಅಲಂಕೃತಗೊಳಿಸಲಾಗಿತ್ತು. ಕಟ್ಟಡಗಳ ಮೇಲ್ಛಾವಣಿಗಳಿಗೆ ಬಣ್ಣಬಣ್ಣದ ಹೆಂಚುಗಳನ್ನು ಹೊದಿಸಲಾಗಿತ್ತು. ವ್ಯಾಸಂಗ, ಪೂಜೆ, ಪ್ರಾರ್ಥನೆ, ವಾಸ ಮತ್ತು ಗ್ರಂಥಭಂಡಾರಕ್ಕೆ ಪ್ರತ್ಯೇಕ ಕಟ್ಟಡಗಳಿದ್ದವು. ಕಟ್ಟಡಗಳು ಅನೇಕ ಅಂತಸ್ತುಗಳಿಂದ ಕೂಡಿದ್ದವು. ಪ್ರಯೋಗಶಾಲೆಯನ್ನು ಕಟ್ಟಡದ ಎರಡನೇ ಅಂತಸ್ತಿನಲ್ಲಿ ವ್ಯವಸ್ಥೆ ಮಾಡಲಾಗಿದ್ದರೆ, ಖಗೋಳ ಶಾಸ್ತ್ರಾಭ್ಯಾಸಕ್ಕಾಗಿ ಅತಿ ಎತ್ತರವಾದ ವೀಕ್ಷಣಾಲಯ ಗಳನ್ನು ಕಟ್ಟಲಾಗಿತ್ತು. ಧರ್ಮಚಕ್ರವು ಈ ವಿಶ್ವವಿದ್ಯಾನಿಲಯದ ಚಿಹ್ನೆಯಾಗಿತ್ತು.

ನಳಂದ ವಿದ್ಯಾಪೀಠದಲ್ಲಿ ಸುಸಜ್ಜಿತವಾದ ಪುಸ್ತಕ ಭಂಡಾರವಿದ್ದಿತು. ಗ್ರಂಥಾಲಯಕ್ಕಾಗಿ ಮೂರು ದೊಡ್ಡ ಕಟ್ಟಡಗಳಿದ್ದವು. ಪ್ರತಿಯೊಂದು ಕಟ್ಟಡವೂ ಮೂರು ಅಂತಸ್ತಿನಿಂದ ಕೂಡಿದ್ದಿತು. ಈ ಕಟ್ಟಡಗಳಲ್ಲಿ ಸಹಸ್ರಾರು ಓಲೆಗರಿಗಳು ಹಾಗೂ ಪ್ರೌಢಗ್ರಂಥಗಳಿದ್ದವು. ಈ ಕಟ್ಟಡಗಳಿಗೆ 'ರತ್ನೋದಧಿ' 'ರತ್ನರಂಜಕ' 'ರತ್ನಸಾಗರ' ಹೀಗೆ ಗ್ರಂಥಾಲಯದ ವ್ಯವಸ್ಥೆಯು ಆಧುನಿಕ ಹಾಗೂ ವೈಜ್ಞಾನಿಕವಾಗಿದ್ದು, ಅದು ಪಡೆದಿದ್ದ ಚಾರಿತ್ರಿಕ ಮಹತ್ವವು ಆಧುನಿಕ ಕಾಲದಲ್ಲೂ ಆದರ್ಶಪ್ರಾಯವೂ, ಅನುಕರಣೀಯವೂ ಆಗಿ ಕಂಡುಬರುತ್ತದೆ.

ಈ ವಿಶ್ವವಿದ್ಯಾಲಯುದಲ್ಲಿ ಬೋಧಿಸಲಾಗುತ್ತಿದ್ದ ವಿಷಯುಗಳು ಗಮನಾರ್ಹವಾದವು. ಬೌದ್ಧ ಧರ್ಮಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಮುಖವಾಗಿ ಬೋಧಿಸಲಾಗುತ್ತಿತ್ತಲ್ಲದೆ, ವೈದಿಕ ಸಾಹಿತ್ಯ, ತರ್ಕಶಾಸ್ತ್ರ, ವ್ಯಾಕರಣ, ಛಂದಸ್ಸು, ಅಲಂಕಾರಶಾಸ್ತ್ರ, ವಾಸ್ತುಶಿಲ್ಪ, ಶಿಲ್ಪಶಾಸ್ತ್ರ, ಆಯುರ್ವೇದ, ಖಗೋಳಶಾಸ್ತ್ರ, ತತ್ವಶಾಸ್ತ್ರ, ರಸಾಯನಶಾಸ್ತ್ರ, ಲೋಹಶಾಸ್ತ್ರ ಹೀಗೆ ಪ್ರಾಚೀನಕಾಲದಲ್ಲಿ ವ್ಯಾಸಂಗ ಮಾಡಬಹುದಾಗಿದ್ದ ವಿಷಯಗಳೆಲ್ಲವನ್ನೂ ಈ ವಿದ್ಯಾಕೇಂದ್ರದಲ್ಲಿ ಕಲಿಸಲಾಗುತ್ತಿತ್ತು. ಮೂಲಭೂತವಾಗಿ ಈ ವಿಶ್ವವಿದ್ಯಾನಿಲಯವು ಬೌದ್ಧಧರ್ಮದ ಮಹಾವಿದ್ಯಾಕೇಂದ್ರವಾಗಿದ್ದರೂ ಹಿಂದೂಧರ್ಮ, ಸಂಸ್ಕೃತ, ಸಾಹಿತ್ಯ ಹಾಗೂ ವೈಜ್ಞಾನಿಕ ವಿದ್ಯಾಭ್ಯಾಸಕ್ಕೆ ನೀಡಿದ್ದ ಆದ್ಯತೆಯು ಇದರ ಆದರ್ಶ ಮತ್ತು ದಾರ್ಶನಿಕ ಹೃದಯ ವೈಶಾಲ್ಯತೆಗೆ ಸಾಕ್ಷಿಯಾಗಿದೆ.

ಈ ವಿದ್ಯಾಪೀಠದಲ್ಲಿ ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವೆ ಸುಮಧುರವಾದ ಬಾಂಧವ್ಯವಿತ್ತು. ಇಲ್ಲಿನ ಅಧ್ಯಾಪಕರು ಆಳವಾದ ಪಾಂಡಿತ್ಯ, ಹಿರಿಮೆ ಮತ್ತು

ಆದರ್ಶಗಳಂತಹ ಮೌಲ್ಯಗಳನ್ನು ಹೊಂದಿದ್ದರು. ಅಂತಹವರಲ್ಲಿ ವಸುಬಂಧು, ಗುಣಮತಿ, ಧರ್ಮಪಾಲ, ಶೀಲಭದ್ರ, ಚಂದ್ರಪಾಲ, ಜಿನಮಿತ್ರ, ಸ್ಥಿರಮತಿ, ಪ್ರಭಾಮಿತ್ರ ಮೊದಲಾದ ಆಚಾರ್ಯರು ಪ್ರಮುಖರು. ಈ ವಿದ್ಯಾಪೀಠ ಶೀಲ, ಅರ್ಹತೆ, ಪಾಂಡಿತ್ಯ ಮತ್ತು ದಕ್ಷತೆಗಳಿಂದ ಕೂಡಿದ ಮಹಾಪಂಡಿತರುಗಳನ್ನು ದೇಶದ ನಾನಾ ಮೂಲೆಗಳಿಂದ ಆಹ್ವಾನಿಸುತ್ತಿತ್ತು. ಉದಾ: ಆಚಾರ್ಯ ಧರ್ಮಪಾಲನು, ದಕ್ಷಿಣ ಭಾರತದ ಕಾಂಚಿಪುರದವನು, ಈತನು ತನ್ನ ಪಾಂಡಿತ್ಯದಿಂದ ನಳಂದ ವಿದ್ಯಾಪೀಠದ ಕುಲಪತಿಯಾಗಿದ್ದನು. ಇತರ ಪ್ರಾಧ್ಯಾಪಕರಾದ ಸ್ಥಿರಮತಿ ದಂಡಕಾರಣ್ಯದಿಂದಲೂ ಗುಣಮತಿವಲ್ಲಭಿಯಿಂದಲೂ, ಹ್ಯುಯೆನ್‌ತ್ಸಾಂಗ್‌ನ ಗುರುವಾಗಿದ್ದ ಶೀಲಭದ್ರನು ಪೂರ್ವ ಬಂಗಾಳದಿಂದಲೂ ಬಂದವರಾಗಿದ್ದರು. ಹರ್ಷವರ್ಧನನ ಕಾಲದಲ್ಲಿ ಶೀಲಭದ್ರನು ಈ ವಿಶ್ವವಿದ್ಯಾನಿಲಯದ ಕುಲಪತಿಯೂ ಆಗಿದ್ದನು. ಹೀಗೆ ಭಾರತದ ಯಾವ ಪ್ರದೇಶಕ್ಕೆ ಸೇರಿದವರಾದರೂ ಪಾಂಡಿತ್ಯ ಮತ್ತು ಅರ್ಹತೆಯ ಆಧಾರದ ಮೇಲೆ ನಳಂದ ವಿಶ್ವವಿದ್ಯಾನಿಲಯದಲ್ಲಿ ಬೋಧಕರಾಗಿ ಸೇವೆಸಲ್ಲಿಸುವ ಹಿರಿಮೆಗೆ ಪಾತ್ರವಾಗಿದೆ. ಜ್ಞಾನವು ಜಾತಿ, ಎಲ್ಲೆ ಮತ್ತು ಪ್ರಾಂತ್ಯಗಳನ್ನು ಮೀರಿದುದೆಂಬ ಅಂಶವನ್ನು ನಳಂದಪೀಠದ ಅಧಿಕಾರವೃಂದ ಮನವರಿಕೆ ಮಾಡಿಕೊಂಡಿತ್ತೆಂಬುದಕ್ಕೆ ಇದು ಆಧಾರವಾಗಿದೆ.

ಜ್ಞಾನಾಕಾಂಕ್ಷಿಗಳಾದ ವಿದ್ವಾಂಸರೂ ವಿದ್ಯಾರ್ಥಿಗಳೂ ದೇಶವಿದೇಶಗಳಿಂದ ಈ ವಿಶ್ವವಿದ್ಯಾನಿಲಯಕ್ಕೆ ವಿಶೇಷ ವ್ಯಾಸಂಗಕ್ಕಾಗಿ ಬರುತ್ತಿದ್ದರು. ಆದರೆ ಪ್ರವೇಶಕೋರಿ ಬಂದವರಿಗೆಲ್ಲರಿಗೂ ಇಲ್ಲಿ ಅವಕಾಶ ಸುಲಭವಾಗಿ ಸಿಗುತ್ತಿರಲಿಲ್ಲ. ಪ್ರವೇಶವನ್ನು ದೊರಕಿಸಿಕೊಳ್ಳುವುದು ತುಂಬಾ ಕಷ್ಟವಾಗಿತ್ತು. ಪ್ರವೇಶ ಪಡೆಯಲಿಚ್ಛಿಸುವ ಪ್ರತಿಯೊಬ್ಬ ವಿದ್ಯಾರ್ಥಿಯೂ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕಿತ್ತು. ಅಭ್ಯರ್ಥಿಗಳನ್ನು ಆರಿಸಿಕೊಳ್ಳಲು ಕೆಲವು ನಿಯಮಾವಳಿಗಳಿದ್ದವು. ಪ್ರವೇಶ ಕೋರಿ ಬಂದ ಅಭ್ಯರ್ಥಿಗಳು ವಿದ್ಯಾಪೀಠದ ಹೊರವಲಯದಲ್ಲಿ ನಿರ್ಮಿಸಲಾಗಿದ್ದ ಕಟ್ಟಡದಲ್ಲಿ ಸುಮಾರು ಮೂರು ತಿಂಗಳ ಕಾಲ ವಾಸಿಸಬೇಕಾಗಿತ್ತು. ಅಲ್ಲಿ ಅವರಿಗೆ ಸಂಕ್ಷಿಪ್ತವಾಗಿ ಕೆಲವು ವಿಷಯಗಳನ್ನು ಬೋಧಿಸಲಾಗುತ್ತಿತ್ತು. ಆ ಸಮಯದಲ್ಲಿ ಅಭ್ಯರ್ಥಿಗಳ ನಡೆ, ನುಡಿ, ಶಿಸ್ತು, ಸಂಯಮ ಮತ್ತು ಗ್ರಹಣ ಸಾಮರ್ಥ್ಯವನ್ನು ಪರೀಕ್ಷಿಸಲಾಗುತ್ತಿತ್ತು. ಅನಂತರ ಪ್ರಸಿದ್ಧ ವಿದ್ವಾಂಸರ ಮಾರ್ಗದರ್ಶನದಲ್ಲಿ ಆಯ್ಕೆ ನಡೆಸುತ್ತಿದ್ದರು. ಈ ವಿದ್ವಾಂಸರಿಗೆ 'ದ್ವಾರಪಂಡಿತ'ರೆಂದು ಕರೆಯಲಾಗುತ್ತಿತ್ತು. ಪ್ರವೇಶಪರೀಕ್ಷೆಯಲ್ಲಿ ನೂರರಲ್ಲಿ ಕೇವಲ ಇಪ್ಪತ್ತು ಅಥವಾ ಮೂವತ್ತು ಮಂದಿ ವಿದ್ಯಾರ್ಥಿಗಳು ಮಾತ್ರ ತೇರ್ಗಡೆಯಾಗುತ್ತಿದ್ದರು. ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯವಿದ್ದಿತು. ಅವರಿಂದ ಯಾವುದೇ ರೀತಿಯ ಫೀಜನ್ನು ವಸೂಲಿ ಮಾಡುತ್ತಿರಲಿಲ್ಲ.

ಈ ವಿಶ್ವವಿದ್ಯಾನಿಲಯವು ತನ್ನ ಖರ್ಚು ವೆಚ್ಚಗಳಿಗಾಗಿ ರಾಜರು, ಶ್ರೀಮಂತರು, ವರ್ತಕರು, ಅಧಿಕಾರಿಗಳು ಮೊದಲಾದವರಿಂದ ಉದಾರ ಸಹಾಯವನ್ನು ಪಡೆಯುತ್ತಿತ್ತು. ಆದುದರಿಂದ ಈ ವಿಶ್ವವಿದ್ಯಾನಿಲಯದ ಆದಾಯದ ಮೂಲಗಳು ಹೇರಳವಾಗಿದ್ದವು. ಧನಧಾನ್ಯಗಳು ಕೊಡುಗೆಯ ಮೂಲಕ ದೊರಕುತ್ತಿತ್ತಲ್ಲದೆ ಅನೇಕ ಗ್ರಾಮಗಳ ಹುಟ್ಟುವಳಿಯೂ ಸಹ ಲಭ್ಯವಾಗಿತ್ತು, ಗುಪ್ತ ಸಂತತಿಯ ಅನೇಕ ಚಕ್ರವರ್ತಿಗಳು ಈ ಮಹಾ ವಿದ್ಯಾಪೀಠವನ್ನು ಪೋಷಿಸಿ, ಪ್ರೋತ್ಸಾಹಿಸಿದ್ದರು. "ನಳಂದ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಪಾದಸೇವಕ"ನೆಂದು ತನ್ನನ್ನು ತಾನೇ ಕರೆದುಕೊಂಡ ಸಾಮ್ರಾಟ್ ಶ್ರೀ ಹರ್ಷವರ್ಧನನು ತನ್ನ ತನುಮನಧನಗಳನ್ನು ಸಂಪೂರ್ಣವಾಗಿ ಧಾರೆಯೆರೆದಿದ್ದು ಈ ವಿಶ್ವವಿದ್ಯಾನಿಲಯದ ಯಶಸ್ಸಿಗೆ ಬಹುಮಟ್ಟಿಗೆ ಸಹಕಾರಿಯಾಗಿದ್ದವು. ಹರ್ಷವರ್ಧನ ತನ್ನ ಸಾಮ್ರಾಜ್ಯದ ನೂರು ಗ್ರಾಮಗಳ ಹುಟ್ಟುವಳಿಯನ್ನು ಈ ವಿದ್ಯಾಸಂಸ್ಥೆಯ ವೆಚ್ಚಕ್ಕಾಗಿ ನೀಡಿದ್ದನು. ಇದರಿಂದ ಈ ವಿಶ್ವವಿದ್ಯಾನಿಲಯಕ್ಕೆ ಒಟ್ಟು ಇನ್ನೂರು ಗ್ರಾಮಗಳ ಹುಟ್ಟುವಳಿ ಲಭ್ಯವಾಗಿತ್ತು. ಇದಲ್ಲದೆ ಹರ್ಷನು ಈ ವಿದ್ಯಾಲಯದ ಎಲ್ಲಾ ವಿದ್ಯಾರ್ಥಿಗಳ ಹಿತಕ್ಕೋಸ್ಕರ ವಿದ್ಯಾರ್ಥಿನಿಲಯವನ್ನು ಕಟ್ಟಿಸಿಕೊಟ್ಟಿದ್ದನಲ್ಲದೆ, ಕನೂಜಿನಲ್ಲಿ ತಾನು ಆಯೋಜಿಸಿದ್ದ ಸರ್ವಧರ್ಮ ಸಮ್ಮೇಳನಕ್ಕೆ ನಳಂದ ವಿಶ್ವವಿದ್ಯಾನಿಲಯದ ಸಾವಿರ ವಿದ್ವಾಂಸರನ್ನು ಆಹ್ವಾನಿಸಿ ಅವರನ್ನು ಗೌರವಿಸಿದ್ದನೆಂಬುದಾಗಿ ತಿಳಿದುಬರುತ್ತದೆ. ಹರ್ಷನ ಸಾಮ್ರಾಜ್ಯದ ಸಾಮಾನ್ಯ ಪ್ರಜೆಗಳೂ ಸಹ ಪ್ರತಿದಿನವೂ ಅಕ್ಕಿ, ಹಾಲುತುಪ್ಪ, ಹಣ್ಣುತರಕಾರಿ ಮೊದಲಾದವುಗಳನ್ನು ಈ ವಿದ್ಯಾ ಕೇಂದ್ರಕ್ಕೆ ಒದಗಿಸುತ್ತಿದ್ದರು. ಹರ್ಷನ ನಂತರ ಯಶೋವರ್ಮಸೇನ, ಪಾಲ ಸಂತತಿಯ ಗೋಪಾಲ ಮತ್ತು ಧರ್ಮಪಾಲ ಮೊದಲಾದವರು ಈ ವಿದ್ಯಾಕೇಂದ್ರಕ್ಕೆ ವಿಶೇಷವಾಗಿ ಪ್ರೋತ್ಸಾಹ ನೀಡಿದರು. ವಿಪುಲ ಶ್ರೀಮಿತ್ರ ಎಂಬುವವನು ನಳಂದದಲ್ಲಿನ ಹಲವು ಶಿಥಿಲವಾದ ಕಟ್ಟಡಗಳನ್ನು ಪುನರುಜ್ಜೀವನಗೊಳಿಸಿ, ಕೆಲವು ಹೊಸ ಕಟ್ಟಡಗಳನ್ನು ಹಾಗೂ ತಾರಾಭಗವತಿಯ ಪೂಜಾಮಂದಿರವನ್ನು ಕಟ್ಟಿಸಿದನೆಂಬುದಾಗಿ ಅಲ್ಲಿನ ಶಾಸನವೊಂದರಿಂದ ತಿಳಿದುಬರುತ್ತದೆ. ನಳಂದ ವಿಶ್ವವಿದ್ಯಾನಿಲಯಕ್ಕೆ ದೇಶೀಯ ರಾಜರಿಂದ ಮಾತ್ರವಲ್ಲದೆ ಏಷ್ಯಾಖಂಡದ ಇತರ ರಾಷ್ಟ್ರಗಳಿಂದಲೂ ಕಾಣಿಕೆ ಬರುತ್ತಿತ್ತು. ಉದಾ: ಒಂಬತ್ತನೇ ಶತಮಾನದಲ್ಲಿ ಸುವರ್ಣದ್ವೀಪದ (ಸುಮಾತ್ರ) ಮಹಾರಾಜ ಬಲಪುಷ್ಪದೇವ ಬಂಗಾಳದ ದೇವಪುತ್ರನೆಂಬ ಸಾಮ್ರಾಟನ ಅಪ್ಪಣೆ ಪಡೆದು ನಳಂದದಲ್ಲಿ ಹೊಸ ಭವನಗಳನ್ನು ನಿರ್ಮಿಸಿ ಕೊಟ್ಟನಲ್ಲದೆ ತನ್ನ ರಾಜ್ಯದ ಐದು ಗ್ರಾಮಗಳ ಹುಟ್ಟುವಳಿ ಸಂದಾಯವಾಗುವಂತೆ ಏರ್ಪಾಡು ಮಾಡಿದನು.

ನಳಂದ ವಿಶ್ವವಿದ್ಯಾನಿಲಯದ ಶಿಕ್ಷಣ ಪದ್ಧತಿಯು ಮುಂದುವರಿದ ರಾಷ್ಟ್ರಗಳ ಶಿಕ್ಷಣದ ವಿಧಾನವನ್ನು ನೆನಪಿಗೆ ತರುತ್ತದೆ. ಇಲ್ಲಿ ಬೋಧನೆ, ಸಂಶೋಧನೆ ಹಾಗೂ ಪ್ರಸಾರ ಇವುಗಳಿಗೆ ಅವಕಾಶವಿತ್ತೆಂದು ತಿಳಿದುಬರುತ್ತದೆ. ವಿಚಾರವಿಮರ್ಶೆ ಮತ್ತು ಬಹಿರಂಗ ಚರ್ಚೆಯು ಇಲ್ಲಿನ ಶಿಕ್ಷಣದ ಪ್ರಮುಖ ಲಕ್ಷಣವಾಗಿತ್ತು. ಪಾಂಡಿತ್ಯ ಪ್ರತಿಭೆಯ ಪ್ರದರ್ಶನವು ಇದರ ಮುಖ್ಯ ಉದ್ದೇಶವಾಗಿತ್ತು. ಸರ್ವೋಚ್ಚ ಸಂಶೋಧನಾ ವ್ಯಾಸಂಗದಲ್ಲಿ ನಿರತರಾಗಿದ್ದ ಪ್ರತಿ ವಿದ್ಯಾರ್ಥಿಗಳಿಗೊಬ್ಬರಂತೆ ಮಾರ್ಗದರ್ಶಕ ಪ್ರಾಧ್ಯಾಪಕರಿರುತ್ತಿದ್ದರು. ಪರೀಕ್ಷೆಯಲ್ಲಿ ತೇರ್ಗಡೆಯಾದ ಅನಂತರ ವಿದ್ಯಾರ್ಥಿಗಳಿಗೆ ಪ್ರಶಸ್ತಿಪತ್ರಗಳನ್ನು ನೀಡಲಾಗುತ್ತಿತ್ತು. ಈ ವಿಶ್ವವಿದ್ಯಾನಿಲಯದಲ್ಲಿ ಪ್ರಶಸ್ತಿ ಪಡೆದ ವಿದೇಶಿ ಗಣ್ಯ ವಿದ್ಯಾರ್ಥಿಗಳಲ್ಲಿ ಹ್ಯುಯೆನ್‌ತ್ಸಾಂಗನೂ ಒಬ್ಬ. ಹ್ಯುಯೆನ್‌ತ್ಸಾಂಗ್ ಈ ವಿಶ್ವವಿದ್ಯಾನಿಲಯದಲ್ಲಿ ಐದು ವರ್ಷಗಳ ಕಾಲ ಅಧ್ಯಯನ ಮಾಡಿದನು. ಅವನ ಪ್ರಕಾರ ಈ ವಿಶ್ವವಿದ್ಯಾನಿಲಯದಲ್ಲಿ ಹತ್ತು ಸಾವಿರ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದರು ಮತ್ತು ಒಂದು ಸಾವಿರದ ಐನೂರ ಹತ್ತು ಮಂದಿ ಅಧ್ಯಾಪಕರಿದ್ದರು. ಕೆಲವು ವಿಷಯಗಳ ಬಗೆಗೆ ಹಗಲು, ರಾತ್ರಿಯೆನ್ನದೆ ಹಿರಿಯ ವಿದ್ಯಾರ್ಥಿಗಳು ಪರಸ್ಪರ ಕುಳಿತು ಚರ್ಚಿಸಿ, ಸಮಸ್ಯೆಯನ್ನು ಬಗೆಹರಿಸಿಕೊಳ್ಳುತ್ತಿದ್ದರು. ಇಷ್ಟೊಂದು ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳಿದ್ದರೂ, ಈ ವಿದ್ಯಾಲಯದ ದೀರ್ಘ ಇತಿಹಾಸದಲ್ಲಿ ಒಂದು ಸಾರಿಯಾದರೂ ವಿದ್ಯಾರ್ಥಿಗಳು ಶಿಸ್ತು ಮೀರಿದ ಘಟನೆಯ ಉಲ್ಲೇಖವಿಲ್ಲ. ವಿದ್ಯಾರ್ಥಿಗಳು ಮತ್ತು ಆಚಾರ್ಯವರ್ಗದವರ ಮಧುರ ಬಾಂಧವ್ಯ ಮತ್ತು ಸಂಯಮಗಳು ಆದರ್ಶಪ್ರಾಯವಾಗಿದ್ದು, ಕಾರ್ಯಕ್ರಮಗಳು ನಿಗದಿಯಾದಂತೆ ನಿಯತಕಾಲದಲ್ಲಿ ನಡೆಯುತ್ತಿದ್ದವು. ಕಾಲಮಾನವನ್ನು ತಿಳಿಯಲು ನೀರಿನ ಗಡಿಯಾರವಿತ್ತು.

ಈ ವಿಶ್ವವಿದ್ಯಾನಿಲಯವು ಭಾರತದ ಸಂಸ್ಕೃತಿಯನ್ನು ವಿದೇಶಗಳಲ್ಲಿ ಪ್ರಸಾರ ಮಾಡುವುದರಲ್ಲಿಯೂ ಯಶಸ್ವಿಯಾಯಿತು. ಚೀನಾ, ಜಪಾನ್, ಕೊರಿಯಾ, ಟಿಬೆಟ್ ಮತ್ತು ಆಗ್ನೇಯ ಏಷ್ಯಾ ಮೊದಲಾದ ರಾಷ್ಟ್ರಗಳಲ್ಲಿ ಭಾರತೀಯ ಸಂಸ್ಕೃತಿಯನ್ನು ಪ್ರಚಾರ ಮಾಡಿತು. ಬೌದ್ಧಧರ್ಮಗ್ರಂಥಗಳಲ್ಲದೆ, ಹಿಂದೂ ಧರ್ಮ ಹಾಗೂ ಸಂಸ್ಕೃತ ಸಾಹಿತ್ಯ ಗ್ರಂಥಗಳು ಚೀನಾ ಹಾಗೂ ಟಿಬೆಟ್ ದೇಶಗಳ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟವು. ಅನೇಕ ವಿದೇಶಿ ವಿದ್ವಾಂಸರು ಈ ವಿಶ್ವವಿದ್ಯಾನಿಲಯದಲ್ಲಿ ಪ್ರವೇಶಾವಕಾಶವನ್ನು ಪಡೆದುಕೊಂಡು ನಮ್ಮ ನಾಡಿನ ಧರ್ಮ, ಚರಿತ್ರೆ ಮತ್ತು ಸಂಸ್ಕೃತಿಯನ್ನು ಅಭ್ಯಾಸ ಮಾಡಿ, ನಮ್ಮ ದೇಶದ ಬಗೆಗೆ ಅನೇಕ ಐತಿಹಾಸಿಕ ಕೃತಿಗಳನ್ನು ರಚಿಸಿದರು. ಇವು ನಮ್ಮ ದೇಶದ ಇತಿಹಾಸವನ್ನು ಪುನರ್‌ರಚಿಸುವಲ್ಲಿ ಬಹುಮಟ್ಟಿಗೆ ಸಹಕಾರಿಯಾಗುತ್ತವೆ. ಅಂತೆಯೇ ಅನೇಕ ಗಣ್ಯ ವಿದ್ವಾಂಸರು

ಏಷ್ಯಾ ಖಂಡದ ನಾನಾ ದೇಶಗಳಿಂದ ತಮ್ಮ ಸಮಸ್ಯೆಗಳ ನಿವಾರಣೆಗಾಗಿ ನಳಂದ ವಿದ್ಯಾಲಯದ ಪ್ರಾಧ್ಯಾಪಕರಲ್ಲಿಗೆ ಬರುತ್ತಿದ್ದರು. ಪರಸ್ಪರ ಚರ್ಚೆಯ ಮೂಲಕ ತಮ್ಮ ಸಂಶಯಗಳನ್ನು ನಿವಾರಿಸಿಕೊಳ್ಳುತ್ತಿದ್ದರು ಹಾಗೂ ಇಲ್ಲಿನ ವಿದ್ವಾಂಸರನ್ನು ತಮ್ಮ ದೇಶಗಳಿಗೆ ಆಹ್ವಾನಿಸಿ ಗೌರವಿಸುತ್ತಿದ್ದರು. ಉದಾಹರಣೆಗೆ, ನಳಂದ ವಿಶ್ವವಿದ್ಯಾನಿಲಯದ ಆಚಾರ್ಯರಲ್ಲೊಬ್ಬರಾದ ಶಾಂತರಕ್ಷಿತ, ಟಿಬೆಟ್ಟಿನ ರಾಜನ ಆಹ್ವಾನದ ಮೇರೆಗೆ ಅಲ್ಲಿಗೆ ಹೋಗಿ, ಅನೇಕ ಬೌದ್ಧಮತ ಗ್ರಂಥಗಳನ್ನು ಟಿಬೆಟಿಯನ್ ಭಾಷೆಗೆ ಭಾಷಾಂತರಿಸಿ, ಕ್ರಿ.ಶ. ೭೩೨ರಲ್ಲಿ ಅಲ್ಲೇ ಮರಣ ಹೊಂದಿದನೆಂಬುದಾಗಿ ತಿಳಿದುಬರುತ್ತದೆ. ಅದೇ ಕಾಲದಲ್ಲಿ ಟಿಬೆಟಿನ ಲಾಮಾ ಪೀಠದ ಸಂಸ್ಥಾಪಕನಾದ ಪದ್ಮಸಂಭವನು ಬೌದ್ಧಧರ್ಮದ ಅನೇಕ ಕೃತಿಗಳನ್ನು ಚೀನಿ ಭಾಷೆಗೆ ಭಾಷಾಂತರ ಮಾಡಿದನು. ಹೀಗೆ ಅನೇಕ ಭಾರತೀಯ ವಿದ್ವಾಂಸರು ವಿದೇಶಗಳಲ್ಲಿ ಸಂಚರಿಸಿ ಭಾರತೀಯ ಸಾಹಿತ್ಯ, ಧರ್ಮ ಮತ್ತು ಇತಿಹಾಸ ಗ್ರಂಥಗಳನ್ನು ಆಯಾಯ ದೇಶಗಳ ಭಾಷೆಗಳಿಗೆ ತರ್ಜುಮೆ ಮಾಡಿ ಹೆಸರು ಪಡೆದುಕೊಂಡರು. ಹೀಗೆ ತರ್ಜುಮೆಯಾದ ಗ್ರಂಥಗಳಲ್ಲಿ ಪಾಣಿನಿಯ ಅಷ್ಟಾಧ್ಯಾಯಿ, ಚರಕನ ಚರಕ ಸಂಹಿತೆ, ಕಾಳಿದಾಸನ ಮೇಘದೂತ ಪ್ರಮುಖವಾದವು.

ಹೀಗೆ ಕ್ರಿ.ಶ. ಐದನೇ ಶತಮಾನದಲ್ಲಿ ಸ್ಥಾಪನೆಗೊಂಡು ಹರ್ಷಚಕ್ರವರ್ತಿಯ ಆಳ್ವಿಕೆಯ ಕಾಲದಲ್ಲಿ ಉಚ್ಛ್ರಾಯ ಸ್ಥಿತಿ ತಲುಪಿದ ನಳಂದ ವಿಶ್ವವಿದ್ಯಾನಿಲಯವು ಹನ್ನೆರಡನೇ ಶತಮಾನದ ಅಂತ್ಯದಲ್ಲಿ ಅಂದರೆ ಕ್ರಿ.ಶ. ೧೧೯೭ರ ಹೊತ್ತಿಗೆ ಮಹಮ್ಮದ್ ಘೋರಿಯ ದಂಡನಾಯಕನಾದ ಮಹಮ್ಮದ್ ಬಿನ್ ಭಕ್ತಿಯಾರ್ ಖಿಲ್ಜಿಯ ದಾಳಿಗೆ ಒಳಗಾಗಿ ಸಂಪೂರ್ಣವಾಗಿ ನಾಶವಾಯಿತೆಂದು ತಿಳಿದುಬರುತ್ತದೆ. ಅವನು ಈ ವಿದ್ಯಾಲಯದ ಗ್ರಂಥಭಂಡಾರ ಮತ್ತು ಕಟ್ಟಡಗಳಿಗೆ ಬೆಂಕಿಯಿಟ್ಟು ನಾಶಪಡಿಸಿದನು. ಈ ರೀತಿ ಪ್ರಾಚೀನ ಭಾರತೀಯ ಇತಿಹಾಸದ ಚಿರಂತನ ಸ್ಮರಣೆಗಳಲ್ಲೊಂದಾದ ನಳಂದ ವಿಶ್ವವಿದ್ಯಾನಿಲಯವು ಕೊನೆಗೊಂಡರೂ, ಅದರ ಅಧ್ಯಯನ ಆಧುನಿಕ ಯುಗದಲ್ಲಿಯೂ ಭಾರತೀಯರ ಸಂಸ್ಕೃತಿ ಮತ್ತು ಜ್ಞಾನವರ್ಧನೆಗೆ ಸ್ಫೂರ್ತಿ ಹಾಗೂ ಮಾರ್ಗದರ್ಶನ ನೀಡುವ ಚೈತನ್ಯ ಶಕ್ತಿಯಾಗಿದೆ. ಏಕೆಂದರೆ ಈಗ ನಮ್ಮ ದೇಶದಲ್ಲಿರುವ ಉನ್ನತ ಶಿಕ್ಷಣ ಕೇಂದ್ರಗಳು ಮತ್ತು ವಿಶ್ವವಿದ್ಯಾನಿಲಯಗಳು ತಮ್ಮ ಮೂಲಭೂತ ಉದ್ದೇಶ ಮತ್ತು ಕರ್ತವ್ಯಗಳನ್ನು ಸಂಪೂರ್ಣವಾಗಿ ಬದಿಗೊತ್ತಿ ಜಾತೀಯತೆ, ಸ್ವಜನ ಪಕ್ಷಪಾತ, ಅಧಿಕಾರಲಾಲಸೆ, ಲಂಚಗುಳಿತನ, ರಾಜಕೀಯ ಹಸ್ತಕ್ಷೇಪ, ಅಧಿಕಾರಿಗಳ ದೌರ್ಜನ್ಯ ಮೊದಲಾದವುಗಳಿಂದ ಸಂಪೂರ್ಣವಾಗಿ ನಶಿಸಿ ಹೋಗುತ್ತಿವೆ. ಅಧ್ಯಾಪಕರು ಮತ್ತು ವಿದ್ಯಾರ್ಥಿಗಳು, ಅಧ್ಯಾಪಕ-ಅಧ್ಯಾಪಕೇತರರ ನಡುವೆ ಮಧುರ ಬಾಂಧವ್ಯವಿಲ್ಲದೆ ಶೈಕ್ಷಣಿಕ ಸಂಸ್ಥೆಗಳ ಮಟ್ಟ

ಕುಸಿಯುತ್ತಿದೆ. ಅಧ್ಯಾಪಕರಲ್ಲಿ ನೈತಿಕಪ್ರಜ್ಞೆ ಮತ್ತು ಸಾಮಾಜಿಕ ಹೊಣೆಗಾರಿಕೆ ಕಡಿಮೆಯಾಗಿ ಅವರಲ್ಲಿ ಸೋಮಾರಿತನ, ನಿರ್ಲಕ್ಷ್ಯ, ಆಲಸ್ಯಗಳು ಹೆಚ್ಚಾಗಿ ಕಾರ್ಯದಕ್ಷತೆ, ಅಧ್ಯಯನಶೀಲತೆಯ ಪ್ರಮಾಣವು ಕಡಿಮೆಯಾಗಿ ಬೌದ್ಧಿಕವಾಗಿ ಅವರ ಸ್ಥಾನಮಾನ ದಿನೇ ದಿನೇ ಇಳಿಮುಖವಾಗಿ ಲೌಖಿಕ ಆಸೆ ಆಕಾಂಕ್ಷೆಗಳಿಗೆ ಮತ್ತು ವೈಯಕ್ತಿಕ ಬೆಳೆವಣಿಗೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ವಿದ್ಯಾರ್ಥಿಗಳಲ್ಲಿಯೂ ಸಹ ಅಶಿಸ್ತಿನ ಪರಮಾವಧಿ ತುಂಬಿ ತುಳುಕಾಡುತ್ತಿದೆ. ಅವರಲ್ಲಿ ಪ್ರಾಮಾಣಿಕ ಪ್ರಯತ್ನ, ಹೆಚ್ಚಿನ ಅಧ್ಯಯನ, ಕಠಿಣ ಶ್ರಮ ಮೊದಲಾದವುಗಳ ಕೊರತೆಯಿದೆ. ಬಹಳ ಸುಲಭವಾಗಿ ಕಷ್ಟಪಡದೆ, ಅನ್ಯಮಾರ್ಗಗಳ ಮೂಲಕ ಪದವಿಗಳನ್ನು ಅದೂ ಹೆಚ್ಚಿನ ಕಾಲ ವ್ಯಯಮಾಡಿ ಪಡೆಯುತ್ತಾರೆ. ಕೆಲವು ವಿಶ್ವವಿದ್ಯಾನಿಲಯಗಳಲ್ಲಿ, ಸ್ನಾತಕೋತ್ತರ ತರಗತಿಗಳಲ್ಲೂ ಪ್ರೌಢಶಾಲಾ ತರಗತಿಗಳಂತೆ ನೋಟ್ಸ್ ಬರೆಸುವ ಪದ್ಧತಿ ಆರಂಭವಾಗಿರುವುದು ಖಂಡನೀಯ. ಹಿಂದೆ ಇದ್ದ ಪ್ರಬಂಧಮಂಡಿಸುವಿಕೆ, ಉಪನ್ಯಾಸಗಳ ಸರಮಾಲೆ, ಸಿದ್ಧತಾಪರೀಕ್ಷೆಗಳ ವ್ಯವಸ್ಥೆ, ಪ್ರಸಿದ್ಧ ಪ್ರಾಧ್ಯಾಪಕರೊಡನೆ ಚರ್ಚೆ ಮೊದಲಾದವುಗಳನ್ನು ವಿದ್ಯಾರ್ಥಿಗಳು ಹೋರಾಟಗಳ ಮೂಲಕ ರದ್ದುಪಡಿಸಿಕೊಂಡಿರುವುದು ಅವರ ಬೌದ್ಧಿಕ ದಿವಾಳಿತನಕ್ಕೆ ಸಾಕ್ಷಿಯಾಗಿದೆ. ಜೊತೆಗೆ ಅವರಲ್ಲಿ ರಾಜಕೀಯ ಆಸಕ್ತಿ, ಗೂಂಡಾಗಿರಿ, ಹಣಸಂಪಾದನೆ, ಗುಂಪುಗಾರಿಕೆ, ಜಾತೀಯತೆ, ಕುಡಿತ, ಗಾಂಜಾ ಸೇವನೆ ಮೊದಲಾದ ದುಷ್ಟ ಪ್ರವೃತ್ತಿಗಳು ಹೆಚ್ಚೆಚ್ಚಾಗಿ ಮೈದಳೆಯುತ್ತಿವೆ. ಅಧಿಕಾರ ವರ್ಗದವರಂತೂ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳನ್ನು ಕಡುವೈರಿಗಳಂತೆ ಭಾವಿಸುತ್ತಾರೆ. ಅವರು ತಮ್ಮ ಅಧಿಕಾರವನ್ನು ಶೈಕ್ಷಣಿಕ ಪರಿಸರವನ್ನು ಉತ್ತಮವಾಗಿ ಹಾಗೂ ವ್ಯವಸ್ಥಿತವಾಗಿ ಬೆಳೆಸುವುದರ ಬದಲು ಅದನ್ನು ಹಾಳುಗೆಡವಲು ಹೆಚ್ಚಾಗಿ ಬಳಸಿಕೊಳ್ಳುತ್ತಿದ್ದಾರೆ. ನಿಧಾನ ಪ್ರವೃತಿ, ದ್ವೇಷ, ಬೇಜವಾಬ್ದಾರಿ, ಲಂಚಗುಳಿತನ, ಸ್ವಜನ ಪಕ್ಷಪಾತ, ತಮಗಾಗದವರಿಗೆ ಅನ್ಯತಾ ತೊಂದರೆ ಮಾಡುವುದು, ಕಾನೂನು ಕಾಯಿದೆಗಳನ್ನು ತಮಗೆ ಸರಿಕಂಡಂತೆ ಮತ್ತು ಅನುಕೂಲಕ್ಕೆ ತಕ್ಕಂತೆ ವಿಶ್ಲೇಷಣೆ ಮಾಡಿಕೊಂಡು ಅದನ್ನು ಬಳಸುವುದು ಇವೇ ಮೊದಲಾದವುಗಳ ಮೂಲಕ ಉನ್ನತ ಶಿಕ್ಷಣ ಕೇಂದ್ರಗಳ ಮೌಲ್ಯ ಹಾಗೂ ಮಾದರಿ ಪರಿಪಾಲನೆಗಳು ಇಂದು ಮಾಯವಾಗುತ್ತಿವೆ. ಇನ್ನು ಸರಕಾರದ ಹಸ್ತಕ್ಷೇಪ ಮತ್ತು ಮಧ್ಯಸ್ಥಿಕೆಯಿಂದಾಗಿ ಇಂದು ವಿಶ್ವವಿದ್ಯಾನಿಲಯಗಳು ಹಾಗೂ ಉನ್ನತ ಶೈಕ್ಷಣಿಕ ಕೇಂದ್ರಗಳ ಉದ್ದೇಶ, ಕರ್ತವ್ಯನಿಷ್ಠರು ಮತ್ತು ಪ್ರಾಮಾಣಿಕರ ಘನತೆಗೌರವಗಳು ಮಣ್ಣುಪಾಲಾಗಿವೆ. ಯಾವುದೇ ವಿಶ್ವವಿದ್ಯಾನಿಲಯದ ಕುಲಪತಿಯನ್ನು ನೇಮಕ ಮಾಡಬೇಕಾಗಿ ಬಂದಾಗ ಅವರ ವಿದ್ಯಾರ್ಹತೆ, ಅನುಭವ, ದಕ್ಷತೆ ವ್ಯವಹಾರ ಜ್ಞಾನ, ಬುದ್ಧವಂತಿಕೆಗಳನ್ನು

ನೋಡಬೇಕಾಗುತ್ತದೆ. ಇದರಿಂದ ಉನ್ನತ ಶಿಕ್ಷಣ ಕೇಂದ್ರಗಳು ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಈಗ ಬೋಧನೆ, ಸಂಶೋಧನೆ, ಅಧ್ಯಯನ ಮಟ್ಟ, ಸೃಜನಶೀಲತೆ, ಗಾಂಭೀರ್ಯಗೌರವಗಳು ಸಂಪೂರ್ಣವಾಗಿ ಮೇಲಕ್ಕೆ ಎತ್ತಲ್ಪಡುತ್ತವೆ. ಆದುದರಿಂದ ಈ ಸಂದರ್ಭದಲ್ಲಿ ಪ್ರತಿಯೊಬ್ಬ ನಾಗರಿಕನೂ, ಅದರಲ್ಲೂ ಮುಖ್ಯವಾಗಿ ನಮ್ಮ ಅಧ್ಯಾಪಕರು, ವಿದ್ಯಾರ್ಥಿಗಳು, ಅಧಿಕಾರಿಗಳು, ರಾಜಕೀಯದವರು ನಮ್ಮ ಪ್ರಾಚೀನ ಭಾರತದ ಸಂಸ್ಕೃತಿಯನ್ನು ಎತ್ತಿಹಿಡಿದು ಅದನ್ನು ಜಗತ್ತಿನಾದ್ಯಂತ ಪ್ರಚಾರಗೊಳಿಸಿ, ಸಂಸ್ಕೃತಿ ರಾಯಭಾರಿಯಾಗಿಯೂ ಕಾರ್ಯನಿರ್ವಹಿಸಿದ ನಳಂದ ವಿಶ್ವವಿದ್ಯಾನಿಲಯದ ಬಗ್ಗೆ ಹೆಚ್ಚಿನ ಅಧ್ಯಯನ ಮಾಡಿ, ಆ ಮೂಲಕ ಅದರ ಧ್ಯೇಯೋದ್ದೇಶಗಳು, ಆದರ್ಶ, ಪಾವಿತ್ರ್ಯತೆ, ಮಾನವೀಯತೆ, ಕಾರ್ಯಶೀಲತೆ, ಶೈಕ್ಷಣಿಕ ಮಹತ್ವ, ಪಾಂಡಿತ್ಯ ಪುರಸ್ಕಾರ, ಶಾಂತಿ, ಶಿಸ್ತು ಮೊದಲಾದವುಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ನಮ್ಮ ವಿಶ್ವವಿದ್ಯಾನಿಲಯ ಮತ್ತು ಉನ್ನತ ಶಿಕ್ಷಣ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸುವುದರ ಮೂಲಕ ನಾವು ಸಾಂಸ್ಕೃತಿಕವಾಗಿ ಮತ್ತು ಶೈಕ್ಷಣಿಕವಾಗಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿ ನಮ್ಮ ದೇಶದ ಸಮಗ್ರತೆ, ಐಕ್ಯತೆ ಮತ್ತು ಸಾರ್ಥಕತೆಯನ್ನು ಸಾಧಿಸಬಹುದಾಗಿದೆ.

ಗ್ರಂಥಋಣ

೧. ರೊಮಿಲಾ ಥಾಪರ್ – ಎ ಹಿಸ್ಟರಿ ಆಫ್ ಏನ್ಸಿಯೆಂಟ್ ಇಂಡಿಯಾ

೨. ತ್ರಿಪಾಠಿ ಆರ್.ಎಸ್. – ಹಿಸ್ಟರಿ ಆಫ್ ಏನ್ಸಿಯೆಂಟ್ ಇಂಡಿಯಾ

೩. ವಿಲ್ ಡ್ಯೂರೆಂಟ್ – ಅವರ್ ಓರಿಯೆಂಟಲ್ ಹೆರಿಟೇಜ್

೪. ಫಣಿಕ್ಕರ್ ಕೆ.ಎಮ್ – ಎ ಸರ್ವೇ ಆಫ್ ಇಂಡಿಯನ್ ಹಿಸ್ಟರಿ

೫. ಮುಜುಂದಾರ್ ಆರ್.ಸಿ – ಏನ್ಸಿಯೆಂಟ್ ಇಂಡಿಯಾ

೨. ಕರ್ನಾಟಕ ಪಂಚಾಯತ್ ರಾಜ್‌ನ ವಿಕಾಸದಲ್ಲಿ ಕಮಿಷನರುಗಳು ಮತ್ತು ಕಾಯಿದೆಗಳ ಕೊಡುಗೆ

*-ಶಿವಾನಾಯಕ್.ಕೆ**

*-ಡಾ. ಜಿ.ಟಿ. ರಾಮಚಂದ್ರಪ್ಪ***

ಗ್ರಾಮ ಸ್ವಾವಲಂಬನೆ ಮತ್ತು ಸ್ವಯಂ ಪರಿಪೂರ್ಣತೆಯ ಮೂಲಕ ಗ್ರಾಮ ಸ್ವರಾಜ್ಯ ಎಂಬುದು ಗಾಂಧೀಜಿಯವರು ಕಂಡ ಕನಸು. ಅವರ ಕನಸಿನ ಕೂಸಾಗಿ ಹುಟ್ಟಿಬಂದುದ್ದೇ ಪಂಚಾಯತ್ ರಾಜ್. ಶಕ್ತಿಯ ಕೇಂದ್ರಗಳಾಗಿರುವ ದೆಹಲಿ ಮತ್ತು ಇತರ ನಗರಗಳಿಂದ ಅಧಿಕಾರಗಳನ್ನು ಗ್ರಾಮಗಳಿಗೆ ಹಂಚಬೇಕೆಂಬುದು ಗಾಂಧೀಜಿಯವರ ಕನಸಾಗಿತ್ತು. ನಮ್ಮ ಸಂವಿಧಾನದ ೪ನೇ ಭಾಗದಲ್ಲಿ ಕಂಡುಬರುವ ರಾಜ್ಯನೀತಿ ನಿರ್ದೇಶಕ ತತ್ವಗಳಿಗೆ ಸಂಬಂಧಿಸಿದ ೪೦ನೇ ವಿಧಿಯು ಗ್ರಾಮ ಪಂಚಾಯಿತಿಗಳ ಸ್ಥಾಪನೆಗೆ ಅವಕಾಶ ನೀಡುತ್ತದೆ. ಹೀಗೆ ಕರ್ನಾಟಕದಲ್ಲಿ ೧೯೫೬ ನವೆಂಬರ್ ೧ರಿಂದ ಜಾರಿಗೊಂಡ ಪಂಚಾಯತ್ ರಾಜ್ ವ್ಯವಸ್ಥೆಯು ಹಲವಾರು ಸಮಿತಿಗಳು ಮತ್ತು ಕಾಯಿದೆಗಳನ್ವಯ ತಿದ್ದುಪಡಿಯನ್ನು ಕಂಡುಕೊಳ್ಳುತ್ತಾ ವಿಕಾಸದ ಹಾದಿಯಲ್ಲಿ ಸಾಗುತ್ತಾ ಬರುತ್ತಿದೆ.

ನಮ್ಮ ಸಂವಿಧಾನದ ೪೦ನೇ ವಿಧಿಯನ್ನು ಸಾಕಾರಗೊಳಿಸುವ ಉದ್ದೇಶದಿಂದ ಭಾರತ ಸರ್ಕಾರವು ಸಮುದಾಯ ಅಭಿವೃದ್ಧಿ ಕಾರ್ಯಕ್ರಮವನ್ನು ೧೯೫೨ರ ಡಿಸೆಂಬರ್ ೧ರಂದು ಜಾರಿಗೆ ತಂದಿತು. ೧೯೫೩ರ ಅಕ್ಟೋಬರ್ ೨ರಂದು ಭಾರತ ಸರ್ಕಾರವು ರಾಷ್ಟ್ರೀಯ ವಿಸ್ತರಣಾ ಸೇವಾ ಯೋಜನೆಯನ್ನು ಜಾರಿಗೆ ತಂದಿತು. ಈ ಎಲ್ಲದರ ಮೂಲಕ ಕರ್ನಾಟಕದ ಗ್ರಾಮೀಣ ಪ್ರದೇಶದ ಜನರನ್ನು ರಾಷ್ಟ್ರ ನಿರ್ಮಾಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವುದು ಪಂಚಾಯತ್ ರಾಜ್‌ನ

---

* ಸಂಶೋಧಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

** ಪ್ರವಾಚಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು

ಉದ್ದೇಶವಾಗಿದೆ. ಹೀಗೆ ಸ್ಥಳೀಯ ಸರ್ಕಾರಗಳು ವಿಕೇಂದ್ರೀಕರಣ ವ್ಯವಸ್ಥೆಯ ಮೂಲಕ ಜನರನ್ನು ಸಬಲರನ್ನಾಗಿಸುವ ಉದ್ದೇಶವನ್ನು ಹೊಂದಿವೆ.

ಕರ್ನಾಟಕವು ದೇಶದ ೮ನೇ ದೊಡ್ಡ ರಾಜ್ಯವಾಗಿದ್ದು, ೧,೯೧,೭೯೧ ಚ.ಕಿ.ಮೀ ವಿಸ್ತೀರ್ಣ ಹೊಂದಿದೆ. ಈ ರಾಜ್ಯವು ಸುಮಾರು ೨೯, ೪೦೬ ಹಳ್ಳಿಗಳನ್ನು ಹೊಂದಿದ್ದು, ೫,೨೮,೫೦,೫೬೨ (೨೦೦೧) ಜನಸಂಖ್ಯೆಯನ್ನು ಹೊಂದಿದೆ. ಇದರಲ್ಲಿ ೨,೬೮,೯೮,೯೧೮ ಪುರುಷರಿದ್ದು. ೨,೫೯,೫೧,೬೪೪ ಮಹಿಳೆಯರಿದ್ದಾರೆ. ಹಾಗೆಯೇ ೫.೬೫೨ ಗ್ರಾಮಪಂಚಾಯಿತಿಗಳಿರುವುದನ್ನು ಕಾಣಬಹುದು. ದೇಶದ ಶೇ. ೬೫% ರಷ್ಟು ಜನ ಕೃಷಿಯನ್ನಾಧರಿಸಿದ್ದಾರೆ. ಕರ್ನಾಟಕವು ಇದಕ್ಕೇನೂ ಹೊರತಲ್ಲ. ಕೃಷಿಯೇ ಬೆನ್ನೆಲುಬಾಗಿರುವ ಕರ್ನಾಟಕವು ಗ್ರಾಮಗಳ ಅಭಿವೃದ್ಧಿಯನ್ನು ಸಾಧಿಸಲು ಸಂವಿಧಾನದನ್ವಯ ಪಂಚಾಯತ್ ರಾಜ್‌ಗಳಲ್ಲಿ ಕಾಲಕಾಲಕ್ಕೆ ಜನರ ಅವಶ್ಯಕತೆಗಳಿಗನುಗುಣವಾಗಿ ಬದಲಾವಣೆಗಳಾಗಬೇಕು. ಜನಪ್ರತಿನಿಧಿಗಳು ಆಶಾವಾದಿಗಳಾದ ಗ್ರಾಮೀಣರಿಗೆ ಸ್ಪಂದಿಸುವಂತಹ ಕೆಲಸ ಕಾರ್ಯಗಳನ್ನು ನೀತಿ ನಿಯಮಗಳನ್ನು ರೂಪಿಸಬೇಕಾಗುತ್ತದೆ. ಈ ನಿಟ್ಟಿನಲ್ಲಿ ಸ್ಥಳೀಯ ಸರ್ಕಾರಗಳು ಸಾಗಿದ್ದೇ ಆದರೆ ಹೆಚ್ಚಿನ ಪ್ರಾಮುಖ್ಯತೆಯನ್ನು ಗಳಿಸುತ್ತವೆ.

ಪಂಚಾಯತ್ ರಾಜ್ ಸಂಸ್ಥೆಗಳು ಹಲವು ಸಮಸ್ಯೆಗಳನ್ನು ಹೊಂದಿದ್ದು, ಅಭಿವೃದ್ಧಿಯ ನಿಟ್ಟಿನಲ್ಲಿ ತೊಡಗಿಸಿಕೊಳ್ಳಲು ಸಂಪನ್ಮೂಲಗಳ ಕೊರತೆಯನ್ನು ಅನುಭವಿಸುತ್ತಿವೆ. ಪಂಚಾಯತ್‌ಗಳು ಸ್ವಾವಲಂಬಿಯಾಗಿ ಹಣಕಾಸನ್ನು ಸಂಗ್ರಹಿಸಲು ತೆರಿಗೆ ವ್ಯವಸ್ಥೆಯನ್ನು ಸ್ಥಳೀಯ ಮಟ್ಟದಲ್ಲಿ ನಿಯಮಗಳನ್ನು ಗಟ್ಟಿಗೊಳಿಸಿ ಗ್ರಾಮ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದ ಸ್ಥಳೀಯ ಸಂಸ್ಥೆಗಳಲ್ಲಿ ನಿಧಿ ಸಂಗ್ರಹಣೆಗೆ ಅನುವು ಮಾಡಿಕೊಡಬೇಕು. ಹಾಗೆಯೇ ಅಲ್ಲಿ ರಾಜಕೀಯ ಮತ್ತು ಅಧಿಕಾರಿಗಳ ಹಸ್ತಕ್ಷೇಪದ ಮೇಲೆ ಕಡಿವಾಣವನ್ನು ಹಾಕಬೇಕು ಮತ್ತು ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ತೀವ್ರ ಸಿಬ್ಬಂದಿ ಕೊರತೆಯಿದ್ದು ಅದನ್ನು ಕೂಡಲೇ ನಿವಾರಿಸಬೇಕಾಗಿದೆ. ಈ ಸಂಸ್ಥೆಗಳು ಹಲವಾರು ಸಮಿತಿಗಳು ಮತ್ತು ಕಾಯಿದೆಗಳನ್ವಯ ಬದಲಾವಣೆಯನ್ನು ಕಂಡುಕೊಂಡಿದ್ದರೂ, ಮುಂದೆ ಜನರ ಆಶೋತ್ತರಗಳಿಗೆ ಸ್ಪಂದಿಸಿ ತನ್ನ ಕಾರ್ಯ ಕಲಾಪಗಳನ್ನು ಮಾಡಬೇಕಾಗಿದೆ.

ಪಂಚಾಯತ್‌ರಾಜ್‌ನ ಐತಿಹಾಸಿಕ ದೃಷ್ಟಿಕೋನ

'ಪಂಚಾಯತ್' ಎಂದರೆ ೫ ಜನರ ಹಿರಿಯರ ಸಭೆ. ಈ ಐದು ಜನ ಸದಸ್ಯರಿಗೆ 'ಪಂಚರು' ಎಂದು ಹೇಳಲಾಗುತ್ತಿದ್ದಿತು. ಪಂಚರ ಮುಖದಿಂದ ಪರಮೇಶ್ವರ ಮಾತನಾಡುತ್ತಾನೆಂದು ಹಿಂದಿಯಲ್ಲಿ ಗಾದೆ ಮಾತಿದೆ. ಕೌಟಿಲ್ಯ ತನ್ನ

೨. ಚಂದ್ರಶೇಖರಯ್ಯ ಸಮಿತಿ ೧೯೫೩

ಮೈಸೂರು ಸರ್ಕಾರವು ಈ ಹಿಂದೆ ಇದ್ದಂತಹ ಎರಡು ಹಂತದ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರಲು ೧೯೫೩ರಲ್ಲಿ ಚಂದ್ರಶೇಖರಯ್ಯರವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಯು ಮತ್ತೆ ೩ ಹಂತದ ಪಂಚಾಯತ್‌ರಾಜ್ ವ್ಯವಸ್ಥೆಯ ಅಸ್ತಿತ್ವಕ್ಕೆ ಶಿಫಾರಸ್ಸು ಮಾಡಿತು.

ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂರವರು ಹಳ್ಳಿಗಳಲ್ಲಿ ವಾಸಿಸುವ ದೇಶ ಬಾಂಧವರು ರಾಜಕೀಯವಾಗಿ ಜಾಗೃತರಾದಾಗ ಮಾತ್ರ ದೇಶದ ಪ್ರಗತಿ ಸಾಧ್ಯ ಎಂದು ತಿಳಿದರು. ಇವರು ಪ್ರಜಾಸತ್ತಾತ್ಮಕ ವ್ಯವಸ್ಥೆಯನ್ನು ಕೆಳಹಂತದಿಂದ ಬಲಗೊಳಿಸಲು ರಾಜಕೀಯ ವಿಕೇಂದ್ರೀಕರಣ ಅವಶ್ಯವೆಂದು ತಿಳಿದು ೧೯೫೭ರಲ್ಲಿ ನೆಹರೂ ಸರ್ಕಾರ ಬಲವಂತರಾಯ್ ಮೆಹ್ತಾ ಸಮಿತಿಯನ್ನು ನೇಮಿಸಿತು.

೩. ಬಲವಂತರಾಯ್ ಮೆಹ್ತಾ ಸಮಿತಿ ೧೯೫೭

ಅಧಿಕಾರ ವಿಕೇಂದ್ರೀಕರಣದ ಜೊತೆಗೆ ಸಮುದಾಯ ಅಭಿವೃದ್ಧಿ ಕಾರ್ಯಕ್ರಮ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವಾ ಯೋಜನೆಗಳ ಕಾರ್ಯನಿರ್ವಹಣೆಯನ್ನು ಪರಿಶೀಲಿಸುವ ಉದ್ದೇಶದಿಂದ ೧೯೫೭ರಲ್ಲಿ ಈ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯು ಗ್ರಾಮೀಣ ಅಭಿವೃದ್ಧಿಯನ್ನು ಸಾಧಿಸಲು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ತತ್ವವನ್ನು ಆಧರಿಸಿ ಪಂಚಾಯತ್‌ರಾಜ್ ಪದ್ಧತಿಯನ್ನು ಸಬಲಗೊಳಿಸಲು ಕೆಲವು ಶಿಫಾರಸ್ಸುಗಳನ್ನು ಮಾಡಿತು.

* ಪಂಚಾಯತ್‌ರಾಜ್ ಸಮಿತಿಯು ಗ್ರಾಮಮಟ್ಟದಲ್ಲಿ ಗ್ರಾಮ ಪಂಚಾಯಿತಿ, ಬ್ಲಾಕ್ ಮಟ್ಟದಲ್ಲಿ ಪಂಚಾಯತ್ ಸಮಿತಿ ಹಾಗೂ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್‌ಗಳೆಂಬ ೩ ಹಂತಗಳನ್ನು ಹೊಂದುವುದು.
* ಪಂಚಾಯತ್ ಸಮಿತಿ ಮತ್ತು ಜಿಲ್ಲಾ ಪರಿಷತ್ ಸದಸ್ಯರ ಪರೋಕ್ಷ ಚುನಾವಣೆ ಹಾಗೂ ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈ ಸಂಸ್ಥೆಗಳಿಗೆ ವಹಿಸುವುದು.
* ತಮ್ಮ ಕಾರ್ಯ ಮತ್ತು ಜವಾಬ್ದಾರಿಗಳನ್ನು ಸಮರ್ಥವಾಗಿ ನಿರ್ವಹಿಸಲು ಅಗತ್ಯವಾದ ಹಣಕಾಸಿನ ನೆರವನ್ನು ಈ ಸಂಸ್ಥೆಗಳಿಗೆ ನೀಡುವುದು.
* ಈ ಸಂಸ್ಥೆಗಳಿಗೆ ಅಗತ್ಯವಾದ ಪ್ರಮಾಣದ ಅಧಿಕಾರಗಳನ್ನು ನೀಡುವುದು.

ಹೀಗೆ ಸಮಿತಿ ಶಿಫಾರಸ್ಸುಗಳನ್ನು ನೀಡಿದ್ದಕ್ಕೆ ಪೂರಕವಾಗಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಈ ಮೇಲಿನ ಶಿಫಾರಸ್ಸುಗಳಿಗೆ ೧೯೫೮ರಲ್ಲಿ ಅನುಮೋದನೆ ನೀಡಿತು. ಇದರನ್ವಯ ೧೯೫೯ರ ಅಕ್ಟೋಬರ್ ೨ ರಂದು ರಾಜಸ್ಥಾನದ ನಾಗೋರು ಜಿಲ್ಲೆಯಲ್ಲಿ ಅಂದಿನ ಪ್ರಧಾನಿ ನೆಹರೂರವರು ಪಂಚಾಯತ್ ರಾಜ್ ವ್ಯವಸ್ಥೆಯನ್ನು ಉದ್ಘಾಟಿಸಿದರು.

೪. ಕೊಂಡಜ್ಜಿ ಬಸಪ್ಪ ಸಮಿತಿ

ಬಲವಂತರಾಯ್ ಮೆಹ್ತಾ ಸಮಿತಿಯಲ್ಲಿದ್ದ ಅನೇಕ ಲೋಪದೋಷಗಳನ್ನು ತೊಡೆದುಹಾಕಲು ಜಿಲ್ಲಾ ಮಟ್ಟದಲ್ಲಿ ಕಾರ್ಯನಿರ್ವಹಣಾ ಅಧಿಕಾರವುಳ್ಳ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ೨೫-೦೫-೧೯೬೩ರಲ್ಲಿ ಕೊಂಡಜ್ಜಿ ಬಸಪ್ಪರವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಲಾಯಿತು. ಅದರ ಶಿಫಾರಸ್ಸುಗಳೆಂದರೆ,

* ಜಿಲ್ಲಾ ಪರಿಷತ್‌ಗೆ ಪ್ರತಿ ೩೬ ಸಾವಿರದಿಂದ ೫೦ ಸಾವಿರದವರೆಗೆ ಒಬ್ಬರಂತೆ ನೇರ ಚುನಾಯಿತ ಸದಸ್ಯನಿರಬೇಕು.
* ಚುನಾಯಿತ ಅಧ್ಯಕ್ಷರು ಇರಬೇಕು.
* ಪ.ಜಾ / ಪ.ಪಂ ಹಾಗೂ ಮಹಿಳೆಯರಿಗೆ ಪ್ರಾತಿನಿಧ್ಯ ಇರಬೇಕು.
* ಜಿಲ್ಲೆಯ ಶಾಸಕರು, ಸಂಸತ್ ಸದಸ್ಯರು ಮತ್ತು ಜಿಲ್ಲಾ ಬ್ಯಾಂಕ್ ಅಧ್ಯಕ್ಷರು ಮತದಾನ ಹಕ್ಕಿಲ್ಲದ ಸಹಸದಸ್ಯರಾಗಿರಬೇಕು.
* ಭಾರತೀಯ ಆಡಳಿತ ಸೇವೆ ಅಥವಾ ಕರ್ನಾಟಕ ಆಡಳಿತ ಸೇವೆ ದರ್ಜೆಯ ಹಿರಿಯ ಅಧಿಕಾರಿಯೊಬ್ಬರು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಯಾಗಿರಬೇಕು.
* ಒಬ್ಬರು ಜಿಲ್ಲಾ ಅಭಿವೃದ್ಧಿ ಸಹಾಯಕ ಉಪಕಾರ್ಯದರ್ಶಿಯಾಗಿ ೬ ಜನ ಜಿಲ್ಲಾ ಮಟ್ಟದ ಅಭಿವೃದ್ಧಿ ಇಲಾಖೆ ಮುಖ್ಯಾಧಿಕಾರಿ ಸಹಕಾರ್ಯದರ್ಶಿಯಾಗಿರಬೇಕು.
* ೪ನೇ ದರ್ಜೆ ಬಿಟ್ಟು ಉಳಿದ ಎಲ್ಲಾ ಸಿಬ್ಬಂದಿ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳಿಂದ ಎರವಲು ಮೂಲಕ ಸೇವೆ ಸಲ್ಲಿಸಬೇಕು.
* ತಾಲ್ಲೂಕು ಅಭಿವೃದ್ಧಿ ಮಂಡಳಿಗಳ ಸದಸ್ಯರು ಗ್ರಾಮಪಂಚಾಯತ್ ಸದಸ್ಯರುಗಳಿಂದ ಚುನಾಯಿತರಾಗಬೇಕು.
* ಪ್ರತಿ ಗ್ರಾಮ ಪಂಚಾಯತ್‌ನಲ್ಲಿಯೂ ಗ್ರಾಮ ಸಭೆ ಇರಬೇಕು.
* ಗ್ರಾಮಸಭೆ ಗ್ರಾಮದ ಯೋಜನೆಗಳ ಹಾಗೂ ಕೆಲಸ ಕಾರ್ಯಗಳ ಬಗ್ಗೆ ಸಮೀಕ್ಷೆ ಮಾಡಬೇಕು.
* ರಾಜ್ಯಮಟ್ಟದಲ್ಲಿ ಪಂಚಾಯತ್ ರಾಜ್ ಸಮಿತಿ ಇದ್ದು ಪಂಚಾಯತ್ ರಾಜ್ ಸಂಸ್ಥೆಗಳ ಕೆಲಸ ಕಾರ್ಯಗಳನ್ನು ಸಮೀಕ್ಷೆ ನಡೆಸುವುದು ಅಗತ್ಯ ಮಾರ್ಗದರ್ಶನ ನೀಡುವುದು ಮುಂತಾದ ಕೆಲಸಗಳನ್ನು ಮಾಡಬೇಕು.

ಅಂದಿನ ಗ್ರಾಮೀಣ ಅಭಿವೃದ್ಧಿ ಸಚಿವರಾಗಿದ್ದ ರಾಮಕೃಷ್ಣ ಹೆಗಡೆಯವರ ನೇತೃತ್ವದ ಸಮಿತಿಯು ಈ ಎಲ್ಲಾ ಶಿಫಾರಸ್ಸುಗಳನ್ನು ನಿಜಲಿಂಗಪ್ಪರವರ ಸಚಿವ

ಸಂಪುಟ ಒಪ್ಪಿ ಬಲವಾಗಿ ಪ್ರತಿಪಾದಿಸಿತು. ೧೯೬೫–೭೭ರ ವರೆಗೆ ಗ್ರಾಮ ಪಂಚಾಯಿತಿಗಳ ಬೆಳೆವಣಿಗೆಗೆ ಸ್ತಬ್ಧವಾಗಿ ಕೇವಲ ಹೆಸರಿಗೆ ಮಾತ್ರ ಅವು ಉಳಿದವು.

೫. ಅಶೋಕ ಮೆಹ್ತಾ ಸಮಿತಿ ೧೯೭೭

ಈ ಹಿಂದೆ ಇದ್ದ ಬಲವಂತರಾಯ್ ಮೆಹ್ತಾ ಸಮಿತಿಯ ಶಿಫಾರಸ್ಸುಗಳನ್ವಯದ ಪಂಚಾಯತ್ ರಾಜ್ ವ್ಯವಸ್ಥೆಯ ಕಾರ್ಯನಿರ್ವಹಣೆಯನ್ನು ಅಧ್ಯಯನ ಮಾಡಲು ೧೯೭೭ರಲ್ಲಿ ಅಶೋಕ ಮೆಹ್ತಾ ಸಮಿತಿಯನ್ನು ಜನತಾ ಸರ್ಕಾರವು ನೇಮಿಸಿತು. ಈ ಸಮಿತಿಯು ೧೯೭೮ರಲ್ಲಿ ತನ್ನ ವರದಿಯಲ್ಲಿ ಕೆಲವು ಶಿಫಾರಸ್ಸುಗಳನ್ನು ಮಾಡಿತು.

ಅಸ್ತಿತ್ವದಲ್ಲಿರುವ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯ ಬದಲಾಗಿ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೊಳಿಸುವುದು. ಅಂದರೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪರಿಷತ್ ಹಾಗೂ ಗ್ರಾಮಗಳ ಮಟ್ಟದಲ್ಲಿ ಮಂಡಲ ಪಂಚಾಯಿತಿಗಳನ್ನು ಹೊಂದಿರುವುದು.

ಜಿಲ್ಲಾ ಪರಿಷತ್ ಕಾರ್ಯನಿರ್ವಾಹಕ ಸಂಸ್ಥೆಯಾಗಿ ಕಾರ್ಯನಿರ್ವಹಿಸುವುದಲ್ಲದೆ ಜಿಲ್ಲಾ ಮಟ್ಟದಲ್ಲಿ ಯೋಜನೆಯನ್ನು ರೂಪಿಸುವ ಹೊಣೆಯನ್ನು ತನ್ನದಾಗಿಸಿಕೊಳ್ಳಬೇಕು.

ಪಂಚಾಯತ್ ಚುನಾವಣೆಗಳಲ್ಲಿ ಅಧಿಕೃತ ರಾಜಕೀಯ ಪಕ್ಷಗಳ ಪಾಲ್ಗೊಳ್ಳುವಿಕೆ.

ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗಳು ಕೇಂದ್ರ ಚುನಾವಣಾ ಆಯೋಗದ ಸಮಾಲೋಚನೆಯೊಂದಿಗೆ ಪಂಚಾಯಿತಿಗಳ ಚುನಾವಣೆಗಳನ್ನು ನಡೆಸುವುದು.

ರಾಜ್ಯ ಸರ್ಕಾರವು ಅಭಿವೃದ್ಧಿ ಕಾರ್ಯಗಳನ್ನು ಜಿಲ್ಲಾ ಪರಿಷತ್ತುಗಳಿಗೆ ವಹಿಸುವುದು.

ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯ ಮೇಲ್ವಿಚಾರಣೆಗಾಗಿ ಒಬ್ಬ ಮಂತ್ರಿಯನ್ನು ನೇಮಿಸುವುದು.

ಜನಸಂಖ್ಯೆಯ ಆಧಾರದ ಮೇಲೆ ಪ.ಜಾ/ಪ.ಪಂ.ಗಳಿಗೆ ಚುನಾವಣೆಗಳಲ್ಲಿ ಸ್ಥಾನಗಳನ್ನು ಮೀಸಲಿಡುವುದು.

ಈ ಎಲ್ಲಾ ಶಿಫಾರಸ್ಸುಗಳು ಕಾರ್ಯಗತಗೊಳ್ಳುವ ಮುನ್ನವೇ ಜನತಾ ಸರ್ಕಾರ ನಿರ್ಗಮನವಾದ್ದರಿಂದ ಕೇಂದ್ರ ಸರ್ಕಾರವು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಿಲ್ಲ. ಇದರಿಂದ ಪಂಚಾಯತ್ ರಾಜ್‌ವ್ಯವಸ್ಥೆಯ ಬೆಳೆವಣಿಗೆಗೆ ತಾತ್ಕಾಲಿಕ ಹಿನ್ನಡೆ ಉಂಟಾಯಿತು ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಪಂಚಾಯತ್ ರಾಜ್ ವಿಕಾಸದಲ್ಲಿ ಕಾಯಿದೆಗಳು

೧. ಕರ್ನಾಟಕ ಪಂಚಾಯತ್ ರಾಜ್ ಕಾಯಿದೆ ೧೯೮೩

ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ಸಮಗ್ರವಾಗಿ ಬೆಳೆಸಲು ಮತ್ತು ವಿಸ್ತರಿಸಲು ಕರ್ನಾಟಕದಲ್ಲಿ ಜಿಲ್ಲಾ ಪರಿಷತ್, ತಾಲ್ಲೂಕು ಪಂಚಾಯಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೯೮೩ ಕಾಯಿದೆಯು ಆಗಸ್ಟ್ ೧೪, ೧೯೮೫ರಂದು ಜಾರಿಗೊಂಡಿತು. ಈ ಅಧಿನಿಯಮ ೧೫ ಅಧ್ಯಾಯಗಳನ್ನು ಹಾಗೂ ೩೧೯ ವಿಧಿಗಳನ್ನು ಒಳಗೊಂಡಿತ್ತು.

ಎಲ್.ಎಂ.ಸಿಂಘವಿ ಸಮಿತಿ ೧೯೮೬

ಪ್ರಧಾನಿ ರಾಜೀವ್ ಗಾಂಧಿಯವರು ೧೯೮೬ರಲ್ಲಿ ನೇಮಿಸಿದ ಎಲ್.ಎಂ. ಸಿಂಘ್ವಿ ಸಮಿತಿಯು ಹಲವಾರು ಶಿಫಾರಸ್ಸುಗಳನ್ನು ಮಾಡಿತು ಮತ್ತು ಇದು ಮೂರು ಹಂತದ ವ್ಯವಸ್ಥೆಯನ್ನೊಳಗೊಂಡಿದ್ದು, ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯಿತಿ, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಮಟ್ಟದಲ್ಲಿ ಅಭಿವೃದ್ಧಿ ಸಮಿತಿಗಳನ್ನು ಒಳಗೊಂಡಿತ್ತು. ಇದರ ಶಿಫಾರಸ್ಸುಗಳೆಂದರೆ,

ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂವಿಧಾನ ಬದ್ಧ ಮಾನ್ಯತೆ ಹಾಗೂ ರಕ್ಷಣೆಯನ್ನು ನೀಡುವ ಉದ್ದೇಶದಿಂದ ಸಂವಿಧಾನಕ್ಕೆ ಒಂದು ಹೊಸ ಅಧ್ಯಾಯ ಸೇರ್ಪಡೆ.

ಗ್ರಾಮಸಭೆಗಳಿಗೆ ಪ್ರಾಮುಖ್ಯತೆ ನೀಡುವುದು, ಗ್ರಾಮ ಪಂಚಾಯಿತಿಗೆ ಹೆಚ್ಚಿನ ಹಣಕಾಸಿನ ಮೂಲವನ್ನು ಸೃಷ್ಟಿಸುವುದು, ಪ್ರತಿ ರಾಜ್ಯದಲ್ಲೂ ಪಂಚಾಯತ್ ರಾಜ್ ಸಂಸ್ಥೆಗಳ ರದ್ಧತಿ, ಚುನಾವಣೆ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದ ವಿವಾದಗಳನ್ನು ಇತ್ಯರ್ಥಪಡಿಸಲು ನ್ಯಾಯಮಂಡಳಿಗಳ ಸ್ಥಾಪನೆ. ಹೀಗೆ ಶಿಫಾರಸ್ಸುಗಳನ್ನು ಈ ಸಮಿತಿ ಮಾಡಿತು.

೨. ೧೯೯೩ರ ಪಂಚಾಯತ್ ರಾಜ್ ಕಾಯ್ದೆ

ಸಂವಿಧಾನದ ೭೩ನೇ ತಿದ್ದುಪಡಿಯನ್ವಯ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ನ್ನು ಮೇ ೧೦ರಂದು ಜಾರಿಗೊಳಿಸಲಾಯಿತು. ೧೯೯೩ಕ್ಕೆ ತಂದ ೪೭ ತಿದ್ದುಪಡಿಗಳನ್ನು ಜನರ ಪಾಲ್ಗೊಳ್ಳುವಿಕೆಗೆ ಮತ್ತು ಪಂಚಾಯತ್ ರಾಜ್ ಸಂಸ್ಥೆಗಳು ಹೆಚ್ಚು ಹೊಣೆಗಾರರಾಗುವಂತೆ ಮಾಡಲು ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಈ ಕಾಯಿದೆಯು ಮೂರು ರೀತಿಯ ಪಂಚಾಯತ್ ರಾಜ್ ವ್ಯವಸ್ಥೆಗೆ ಅಂದರೆ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯತ್, ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಮಟ್ಟದಲ್ಲಿ ಗ್ರಾಮಪಂಚಾಯಿತಿಗೆ ಶಿಫಾರಸ್ಸು ಮಾಡಿತು. ವಾರ್ಡ್ ಸಭೆ ಮತ್ತು ಗ್ರಾಮಸಭೆ ಕನಿಷ್ಠ ವರ್ಷದಲ್ಲಿ ೨ ಸಲ ಸಭೆ ಸಡೆಸಬೇಕು. ಎಲ್ಲಾ ಸರ್ಕಾರಿ ಯೋಜನೆಗಳ ಫಲಾನುಭವಿಗಳನ್ನು ಗುರುತಿಸುವ ಆದ್ಯತೆಗಳನ್ನು ನಿರ್ಧರಿಸುವ ಮತ್ತು ಅಭಿವೃದ್ಧಿ ಯೋಜನೆಗಳನ್ನು ಅನುಮೋದಿಸುವ ಅಧಿಕಾರಗಳನ್ನು ಇದಕ್ಕೆ ನೀಡಲಾಗಿದೆ. ಗ್ರಾಮ ಪಂಚಾಯಿತಿ ಕನಿಷ್ಠ ತಿಂಗಳಿಗೊಮ್ಮೆ ಸಭೆ ಸೇರುವುದು ಆಡಳಿತ ಪಾರದರ್ಶಕಗೊಳಿಸಲಾಗಿದೆ. ಪಂಚಾಯತ್ ರಾಜ್ ಸಂಸ್ಥೆ ಚುನಾಯಿತ ಸದಸ್ಯರು ಆಸ್ತಿ ವಿವರ ಘೋಷಿಸಬೇಕೆಂದರೆ ಪ್ರತಿ ಗ್ರಾಮ ಪಂಚಾಯಿತಿಗೆ ೫ ಲಕ್ಷ ರೂ. ಶಾಸನಬದ್ಧ ಅನುಧಾನವನ್ನು ನಿಗದಿಪಡಿಸಲಾಗಿದೆ. ಅದನ್ನು ಕಳೆದ ವರ್ಷ ೨೦೦೭ರಲ್ಲಿ ೬ ಲಕ್ಷಕ್ಕೆ ಏರಿಸಿದೆ.

ಸರ್ಕಾರದ ಮುಖ್ಯ ಕಾರ್ಯದರ್ಶಿ, ಅಭಿವೃದ್ಧಿ ಆಯುಕ್ತರು, ಆರ್ಥಿಕ ಇಲಾಖೆ ಯೋಜನಾ ಇಲಾಖೆ ಕಾರ್ಯದರ್ಶಿಗಳು ಹಾಗೂ ವಿಶೇಷವಾಗಿ ಗ್ರಾಮೀಣಾಭಿವೃದ್ಧಿಗಾಗಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾದ ಬಳಿಗಾರ್, ರಘುನಂದನ್, ಶಿವಶೈಲಂ ಇವರು ಉಳಿದ ಇಲಾಖೆಗಳ ಕಾರ್ಯದರ್ಶಿಗಳ ಜೊತೆಗೆ ವ್ಯಾಪಕ ಸಮಾಲೋಚನೆ ಚಿಂತನ ಮಂಥನ ನಡೆಸಿ ೧೬-೧೦-೨೦೦೪ರಂದು ಸರ್ಕಾರ ಐತಿಹಾಸಿಕ ಆದೇಶ ಹೊರಡಿಸಿತು. ಎಲ್ಲಾ ೨೯ ವಿಷಯಗಳು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸಲ್ಪಟ್ಟವು. ೨೦೦೪ರ ಸಾಲಿನ ಯೋಜನಾ ಕಾರ್ಯಕ್ರಮಗಳ ಅನುಧಾನದಲ್ಲಿ ಅಭೂತಪೂರ್ವ ಬದಲಾವಣೆಯಾಯಿತು. ಈ ಬದಲಾವಣೆಗಳೆಲ್ಲಾ ಜಾರಿಗೊಳ್ಳಲು ಅಂದಿನ ಉಪಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದ ಸಿದ್ಧರಾಮಯ್ಯನವರ ಸಕಾಲಿಕ ಬೆಂಬಲ ಸ್ಮರಣೀಯ.

ಒಟ್ಟಾರೆ ಪಂಚಾಯತ್ ರಾಜ್ ವ್ಯವಸ್ಥೆ ರಾಷ್ಟ್ರದ ಅಭಿವೃದ್ಧಿ ಮತ್ತು ಜನಕಲ್ಯಾಣದ ಸಾಧನವಾಗಬೇಕೇ ಹೊರತು ಸ್ವಾರ್ಥ ಪಕ್ಷರಾಜಕೀಯದ ಬಲಿಪಶುವಾಗಬಾರದು. ಆಗ ಮಾತ್ರ ಗ್ರಾಮಸ್ವರಾಜ್ಯ ಕನಸು ಸಾಕಾರಗೊಳ್ಳುತ್ತದೆ. ಈ ದಿಶೆಯಲ್ಲಿ ರಾಜ್ಯ ಸರ್ಕಾರದ ಹೊಣೆಗಾರಿಕೆ ತುಂಬಾ ನಿರ್ಣಾಯಕವಾಗಿದೆ. ಹಾಗೆಯೇ ಕಾಲಕ್ಕೆ ತಕ್ಕಂತೆ ಜನರ ಆಶಯಗಳಿಗೆ ತಕ್ಕಂತೆ ಬದಲಾವಣೆಯನ್ನು ಕಂಡುಕೊಂಡು ಜನರ ಸುಖ ದುಃಖಗಳಲ್ಲಿ ಭಾಗಿಯಾಗುವುದು ಪಂಚಾಯತ್ ರಾಜ್‌ನ ಕರ್ತವ್ಯವಾಗಿದೆ. ಇತ್ತೀಚೆಗೆ ಏಪ್ರಿಲ್ ೧, ೨೦೦೭ರಲ್ಲಿ ನಡೆದ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಹಿಳೆಯರಿಗೆ ಶೇ. ೫೦ರಷ್ಟು ಮೀಸಲಾತಿ ೧೦-೧೫

ವರ್ಷಗಳವರೆಗೆ ಮೀಸಲಾತಿ ನೀತಿಯನ್ನು ಬದಲಿಸಬಾರದು ಎಂದು ಚರ್ಚಿಸಲಾಗಿದೆ. ಹಾಗೆಯೇ ಈ ಬಾರಿಯ ಬಜೆಟ್‌ನಲ್ಲಿ ೪೯೫೧ ಕೋಟಿ ರೂ.ಗಳನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಕಾದಿರಿಸಿರುವುದು ಪಂಚಾಯತ್ ರಾಜ್‌ನ ಬಗೆಗಿನ ಕಾಳಜಿಗೆ ಹಿಡಿದ ಕೈಗನ್ನಡಿಯಂತಿದೆ. ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ತೀವ್ರ ಸಿಬ್ಬಂದಿ ಕೊರತೆಯಿದ್ದು ಇದನ್ನು ನಿವಾರಿಸಬೇಕಾಗಿದೆ ಮತ್ತು ಅವುಗಳ ದೈನಂದಿನ ಆಡಳಿತದಲ್ಲಿ ರಾಜಕೀಯ ಮತ್ತು ಅಧಿಕಾರಿಗಳ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಬೇಕಾಗಿದೆ. ಇಲ್ಲವಾದರೆ ಅವು ಕೇವಲ ಉತ್ಸವಮೂರ್ತಿಗಳಾಗುವುದು ನಿಶ್ಚಿತ. ಚುನಾಯಿತ ಪ್ರತಿನಿಧಿಗಳಿಗೆ ಹಾಗೂ ಸಿಬ್ಬಂದಿ ವರ್ಗಕ್ಕೆ ಸೂಕ್ತ ತರಬೇತಿ ಹಾಗೂ ಮಾರ್ಗದರ್ಶನ ನೀಡುವುದು ಮಹತ್ವದ್ದಾಗಿದೆ. ಹೀಗೆ ಮೇಲ್ಕಂಡಂತೆ ಎಲ್ಲಾ ವಿಷಯಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ಆ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತಂದಾಗ ಮಾತ್ರ ಪ್ರಜಾಸತ್ತಾತ್ಮಕ ಸಾಕಾರಗೊಳ್ಳುವುದರಲ್ಲಿ ಸಂದೇಹವಿಲ್ಲ.

ಪರಾಮರ್ಶನಗಳು

೧. ಎಚ್ಚೆಸ್ಕೆ, "ನೂತನ ಪಂಚಾಯಿತಿ ವ್ಯವಸ್ಥೆ ಒಂದು ಪರಿಚಯ", ಜನಪದ, ಏಪ್ರಿಲ್ ೧೯೮೪, ಪುಟ–೧೫

೨. "ಸಂಯುಕ್ತ ಕರ್ನಾಟಕ", ೧೩ ಡಿಸೆಂಬರ್ ೨೦೦೫ ಪುಟ–೪

೩. S.V. Savmanth, Village Panchayaths, Bombay, The Local Self Government Institute 1957, P-5

೪. "ಪ್ರಜಾವಾಣಿ", ಅಕ್ಟೋಬರ್ ೨೮, ೧೯೮೩

೫. ಕೆ.ಎಸ್.ಕೇಶವಮೂರ್ತಿ, "ಕರ್ನಾಟಕದಲ್ಲಿ ಪಂಚಾಯಿತಿ ರಾಜ್ಯ", ೧೯೯೬ ಪುಟ–೧೪

೬ ಸ್ಪರ್ಧಾಚೈತ್ರ, ಮಾರ್ಚ್ ೨೦೦೫ ಪುಟ–೮

೭. ಪಿ.ವಿ. ನರಸಿಂಹರಾವ್, "ಪಂಚಾಯತ್ ರಾಜ್‌ನಲ್ಲಿ ಶೇಕಡ ಬಲವರ್ಧನೆ ಯೋಜನೆ", ಜನವರಿ ೨೬ ೧೯೮೯ ಪುಟ–೨೮

೮. ಪ್ರೊ. ಎಚ್.ಎಂ. ರಾಜಶೇಖರ, "ಭಾರತ ಸರ್ಕಾರ ಮತ್ತು ರಾಜಕೀಯ", ಪ್ರಕಾಶಕರು ಕಿರಣ ಪ್ರಕಾಶನ, ಮೈಸೂರು. ೨೦೦೧.

೯. ಟಿ.ಡಿ. ದೇವೇಗೌಡ, "ಭಾರತ ಸಂವಿಧಾನ ಮತ್ತು ಸರ್ಕಾರ", ಪ್ರಕಾಶಕರು, ಚೇತನ ಬುಕ್ ಹೌಸ್, ಮೈಸೂರು ೨೦೦೦

೧೦. ಕೆ.ಜಿ. ಸುರೇಶ, "ಭಾರತ ಸಂವಿಧಾನ ಮತ್ತು ಸರ್ಕಾರ", ಪ್ರಕಾಶಕರು, ಚೇತನ ಬುಕ್ ಹೌಸ್, ಮೈಸೂರು, ೧೯೯೯

೩. ೧೭೦೪ರ ವರೆಗಿನ ಮೈಸೂರಿನ ಒಡೆಯರ ಆಡಳತ ಕ್ರಮ – ಒಂದು ವಿವೇಚನೆ

-ಪಿ. ಮಹಾದೇವಮ್ಮ

ವಿಜಯನಗರದ ಪತನದ ನಂತರ ದಕ್ಷಿಣ ಭಾರತದಲ್ಲಿ ತಲೆ ಎತ್ತಿದ ಅನೇಕ ಚಿಕ್ಕ ಪುಟ್ಟ ರಾಜ್ಯಗಳಲ್ಲಿ ಮೈಸೂರೂ ಕೂಡ ಒಂದಾಗಿತ್ತು. ಅದು ಮೂವತ್ತ್ಮೂರು ಹಳ್ಳಿಗಳನ್ನು ಒಳಗೊಂಡಿದ್ದು ಮುನ್ನೂರು ಸೈನಿಕರನ್ನು ಹೊಂದಿದ ಚಿಕ್ಕರಾಜ್ಯವಾಗಿತ್ತು. ಅದರ ಸುತ್ತಮುತ್ತ ಅನೇಕ ಚಿಕ್ಕಪುಟ್ಟ ಪಾಳೆಯಪಟ್ಟುಗಳು ಕೂಡ ತಲೆ ಎತ್ತಿದ್ದವು. ಮೈಸೂರಿನ ಒಡೆಯರು ಕಾಲಕ್ರಮೇಣ ಆ ಚಿಕ್ಕಪುಟ್ಟ ಪಾಳೆಯಪಟ್ಟುಗಳನ್ನು ಒಂದೊಂದಾಗಿ ಗೆದ್ದುಕೊಂಡು ದೊಡ್ಡ ರಾಜ್ಯವಾಗಿ ಬೆಳೆಸಿದರು. ಹೀಗಾಗಲು ಅವರು ಅನೇಕ ಕ್ರಮಗಳನ್ನು ಕೈಗೊಂಡಿದ್ದೇ ಕಾರಣವಾಯಿತು. ಅವುಗಳ ಪೈಕಿ ಒಂದು ಪ್ರಮುಖವಾದ ಕ್ರಮವೆಂದರೆ ಪರಿಣಾಮಕಾರಿ ಆಡಳಿತವನ್ನು ರೂಪಿಸಿದ್ದು.

೧೩೯೯ರಲ್ಲಿಯೇ ಮೈಸೂರು ರಾಜ್ಯ ಸ್ಥಾಪನೆಯಾದರೂ ಅದು ರಾಶಿಯಾಗಿ ಪರಿಣಾಮಕಾರಿ ರಾಜ್ಯವಾಗಿರದೆ ವಿಜಯನಗರ ಸಾಮ್ರಾಜ್ಯದ ಒಂದು ಚಿಕ್ಕ ಭಾಗವಾಗಿದ್ದಿತು. ತಾಳಿಕೋಟೆ ಕದನದ ನಂತರ ಅದು ಸ್ವತಂತ್ರವಾಗುವ ಕನಸನ್ನು ಕಂಡು ಆ ದಿಸೆಯಲ್ಲಿ ಕ್ರಮಗಳನ್ನು ಕೈಗೊಳ್ಳಹತ್ತಿತ್ತು. ೧೬೧೦ರಲ್ಲಿ ರಾಜ ಒಡೆಯರು ತಮ್ಮ ರಾಜಧಾನಿಯಾದ ಮೈಸೂರಿನ ಪಕ್ಕದಲ್ಲಿಯೇ ಇದ್ದ ಹಾಗೂ ವಿಜಯನಗರ ಸಾಮ್ರಾಜ್ಯದ ಪ್ರಾದೇಶಿಕ ರಾಜಧಾನಿಯೂ, ಒಂದು ರಾಜಕೀಯ ಕೇಂದ್ರವೂ ಆಗಿದ್ದ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ತನ್ನ ಸ್ವಾತಂತ್ರ್ಯವನ್ನು ಸಾರಿ ತನ್ನ ರಾಜಧಾನಿಯನ್ನು ಅಲ್ಲಿಗೆ ವರ್ಗಾಯಿಸಿದ್ದರಿಂದ ಚಿಕ್ಕ ಸಂಸ್ಥಾನವಾಗಿದ್ದ ಮೈಸೂರಿನ ಘನತೆ ಹೆಚ್ಚಿದ್ದೇ ಅಲ್ಲದೆ ದಕ್ಷಿಣ ಭಾರತದಲ್ಲಿ ಒಂದು ರಾಜಕೀಯ ಕೇಂದ್ರವಾಗಿ ಮೈಸೂರು ಸಂಸ್ಥಾನ ಬೆಳೆಯಲು ಕಾರಣವಾಯಿತು.

ಶ್ರೀರಂಗಪಟ್ಟಣವನ್ನು ಮೈಸೂರು ಪ್ರಾಂತ್ಯದಲ್ಲಿ ಸೇರಿಸಿಕೊಂಡುದೇ ರಾಜ ಒಡೆಯರ್ (ಕ್ರಿ.ಶ. ೧೫೭೮–೧೬೧೭)ರವರ ಅತ್ಯಂತ ಮಹತ್ವದ ಸಾಧನೆಯಾಗಿದೆ.

೧೭೯೯ರಲ್ಲಿ ಟಿಪ್ಪುಸುಲ್ತಾನನು ಮೃತನಾಗುವವರೆಗೂ ಶ್ರೀರಂಗಪಟ್ಟಣವು ಮೈಸೂರಿನ ರಾಜಧಾನಿಯಾಗಿತ್ತು. ಈ ಹಿಂದೆ ರೈತರು ನೀಡುತ್ತಿದ್ದ ಪೊಗದಿಗಿಂತ ಹೆಚ್ಚೇನೂ ಕೊಡಬೇಕಾಗಿಲ್ಲವೆಂದು ರಾಜ ಒಡೆಯರು ನಿರೂಪ ಹೊರಡಿಸಿ, ಅವರ ಅನುರಾಗವನ್ನು ಗಳಿಸಿದರೆಂಬ ಅಂಶ ಚಿದಾನಂದನ ಮುನಿವಂಶಾಭ್ಯುದಯದಲ್ಲಿ ನಿರೂಪಿತವಾಗಿದೆ. ಇದು ವಿಜಯನಗರದಿಂದ ಶ್ರೀರಂಗಪಟ್ಟಣವನ್ನು ರಾಜ ಒಡೆಯರ್‌ರವರು ಕಬಳಿಸಿ ಬೇರ್ಪಡಿಸಿದ್ದರಿಂದ ಜನಸಾಮಾನ್ಯರಲ್ಲಿ ಪ್ರತಿರೋಧ ಭಾವನೆ ಬೆಳೆಯದಂತೆಯೂ ಹೊಸದಾಗಿ ಗೆದ್ದ ಪ್ರದೇಶಗಳಲ್ಲಿ ಜನಸಾಮಾನ್ಯರು ಒಡೆಯರ ಆಡಳಿತವನ್ನು ಒಪ್ಪಿಕೊಳ್ಳುವಂತೆಯೂ ರಾಜ ಒಡೆಯರಿಗೆ ಬೆಂಬಲವನ್ನು ಕೊಡುವಂತೆಯೂ ಮಾಡುವ ಒಂದು ರಾಜಕೀಯ ಹಾಗೂ ಆಡಳಿತಾತ್ಮಕ ತಂತ್ರವಾಗಿದ್ದಿತು. ೧೬೧೭ರಲ್ಲಿ ರಾಜ ಒಡೆಯರು ಮರಣ ಹೊಂದಿದ ನಂತರ ಚಾಮರಾಜ ಒಡೆಯರು (೧೬೧೭-೧೬೩೭) ಅಧಿಕಾರಕ್ಕೆ ಬಂದರು. ಇವರು ತಮ್ಮ ತಂದೆಯವರಾದ ರಾಜ ಒಡೆಯರ ನೀತಿಯನ್ನೇ ಮುಂದುವರಿಸಿದರು. ಹಾಗಾಗಿ ಒಡೆಯರ ಆಳ್ವಿಕೆಗೆ ಪ್ರತಿರೋಧ ಬೆಳೆಯುವ ಸಾಧ್ಯತೆಯನ್ನು ತಡೆಗಟ್ಟಿದರು.

೧೬೩೭ರಲ್ಲಿ ಇವರು ಮರಣ ಹೊಂದಿದ ನಂತರ ರಣಧೀರ ಕಂಠೀರವ ನರಸರಾಜ ಒಡೆಯರು (೧೬೩೮-೧೬೫೯) ಆಳ್ವಿಕೆ ನಡೆಸಿದರು. ಇವರ ಆಡಳಿತದಲ್ಲಿ ಕನಕನಹಳ್ಳಿಯ ದೊಡ್ಡಯ್ಯನು ಒಡೆಯರ ಪರವಾಗಿ ಚನ್ನರಾಯ ಪಟ್ಟಣದ ಆಡಳಿತ ನಿರ್ವಹಿಸುತ್ತಿದ್ದನು. ಏಕೆಂದರೆ ಈ ವೇಳೆಗೆ ಮೈಸೂರಿನ ವಿಸ್ತಾರವು ಹೆಚ್ಚಿದ್ದು ಸಂಪೂರ್ಣ ಆಡಳಿತವನ್ನು ನೇರವಾಗಿ ತಾವೇ ನೋಡಿಕೊಳ್ಳಲಾರದೆ ತಮ್ಮ ಪರವಾಗಿ ಒಬ್ಬ ಪ್ರತಿನಿಧಿಯನ್ನು ನೇಮಿಸಿದ್ದಿರಬೇಕು.

ಕಂಠೀರವ ನರಸರಾಜ ಒಡೆಯರು ಸಂಸ್ಥಾನದಲ್ಲಿ ಹೆಚ್ಚಿನ ರಾಜಾಧಿಕಾರಗಳನ್ನು ವಹಿಸಿಕೊಂಡು ಒಂದು ಟಂಕಸಾಲೆಯನ್ನು ಕಟ್ಟಿಸಿ ಅಲ್ಲಿ 'ಕಂಠೀರವ ಪಣ' ಎಂದು ನಾಣ್ಯವನ್ನು ಟಂಕಿಸತೊಡಗಿದರು. ಇದು ವ್ಯಾಪಾರವು ಅಧಿಕಗೊಂಡು ವಿನಿಮಯದ ಪ್ರಮಾಣ ಹೆಚ್ಚಿ, ಸುಲಭವಾಗಿ ವಿನಿಮಯ ಮಾಡಬಲ್ಲ ಮಾಧ್ಯಮದ ಆವಶ್ಯಕತೆ ಹೆಚ್ಚಿದ್ದರಿಂದ ಹೆಚ್ಚಿನ ಬೆಲೆಯ ನಾಣ್ಯಗಳ ಆವಶ್ಯಕತೆ ಹೆಚ್ಚಾದುದನ್ನು ತೋರಿಸುತ್ತದೆ. ಇದು ಅಂದಿನ ವ್ಯಾಪಾರದ ಪ್ರಮಾಣದ ಮೇಲೆ ಬೆಳಕು ಚೆಲ್ಲುತ್ತದೆ. ಹೈದರ್ ಟಿಪ್ಪು ಸಂಸ್ಥಾನವನ್ನು ಅಪಹರಿಸುವವರೆಗೂ ಈ ಪಣವೇ ಸಂಸ್ಥಾನದ ಅಧಿಕೃತ ನಾಣ್ಯವಾಗಿದ್ದಿತು. ಇದು ನಾಣ್ಯ ಕ್ಷೇತ್ರದಲ್ಲಿ ಕಂಠೀರವ ನರಸರಾಜ ಒಡೆಯರು ಸಾಧಿಸಿದ ಪ್ರಗತಿಯನ್ನು ಸೂಚಿಸುತ್ತದೆ. ೧೬೫೯ರಲ್ಲಿ ರಣಧೀರ ಕಂಠೀರವ ನರಸರಾಜ ಒಡೆಯರು ಮರಣ ಹೊಂದಿದರು.

ರಣಧೀರ ಕಂಠೀರವ ನರಸರಾಜ ಒಡೆಯರಿಗೆ ಬಂಗಾರದೊಡ್ಡಿ ಎಂಬ ಪ್ರೇಯಸಿಯೊಬ್ಬಳಿದ್ದಳಂತೆ. ಅವರ ಸ್ಮಾರಕವಾಗಿ ಒಡೆಯರು ಶ್ರೀರಂಗಪಟ್ಟಣದ ಬಳಿಯ ಬಂಗಾರದೊಡ್ಡಿ ನಾಲೆಯನ್ನು ನಿರ್ಮಿಸಿದರೆಂದು ಪ್ರತೀತಿ. ಇದು ಜನಸಂಖ್ಯೆಯಲ್ಲಿ ಹೆಚ್ಚಳವಾದುದನ್ನು, ಹೆಚ್ಚಿನ ಆಹಾರದ ಪೂರೈಕೆಗಾಗಿ ಹೆಚ್ಚು ಹೆಚ್ಚು ಭೂಮಿಯನ್ನು ಕೃಷಿಗೆ ಅಳವಡಿಸಲು ಮಾಡಿದ ಪ್ರಯತ್ನವನ್ನು ಸೂಚಿಸುತ್ತದೆ. ಒಳ್ಳೆಯ ಆಡಳಿತ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗಿದ್ದಿರಬೇಕು.

ಕಂಠೀರವ ನರಸರಾಜ ಒಡೆಯರ ವಿಶೇಷ ಆಡಳಿತ ಕ್ರಮಗಳಿಂದಾಗಿ ಮೈಸೂರು ಸಂಸ್ಥಾನವು ಕ್ರಮೇಣ ದೊಡ್ಡದಾಗಿ ಬೆಳೆಯಿತು. ಈ ವೇಳೆಗೆ ಮೈಸೂರಿನ ಉತ್ತರಕ್ಕೆ ಬಹಮನಿ ರಾಜ್ಯಗಳು ತತ್ರಾಪಿ ಬಿಜಾಪುರ ರಾಜ್ಯ ಮತ್ತು ಮುಘಲ್ ಸಾಮ್ರಾಜ್ಯ ದೊಡ್ಡ ರಾಜ್ಯಗಳಾಗಿ ಬೆಳೆದು ಮೈಸೂರು ಸಂಸ್ಥಾನಕ್ಕೆ ಗಂಡಾಂತರ ಒಡ್ಡಿದವು. ಬಿಜಾಪುರದ ರಣದುಲ್ಲಾಖಾನನು ಮೇಲಿಂದ ಮೇಲೆ ಮೈಸೂರಿನೊಂದಿಗೆ ಯುದ್ಧ ಮಾಡಿದನು. ಈ ಗಂಡಾಂತರದಿಂದ ಪಾರಾಗಲು ಕಂಠೀರವ ನರಸರಾಜ ಒಡೆಯರು ಅನೇಕ ಆಡಳಿತ ಕ್ರಮಗಳನ್ನು ಕೈಗೊಂಡರು. ಜನಸಾಮಾನ್ಯರ ಬೆಂಬಲ ಹೊಂದಿ ಒಳಗಿನ ಶತ್ರುಗಳನ್ನು ಹತ್ತಿಕ್ಕುವ ಸಲುವಾಗಿ ಬ್ರಾಹ್ಮಣರಿಗೆ ದಾನಗಳನ್ನು ಕೊಟ್ಟು ಅಗ್ರಹಾರಗಳನ್ನು ನಿರ್ಮಿಸಿದ್ದೇ ಅಲ್ಲದೇ ಅನೇಕ ಗುಡಿಗಳಿಗೆ ದಾನಗಳನ್ನು ಸಾರಿದರು. ಅವರ ಬ್ರಹ್ಮದೇಯಗಳು ಹಾಗೂ ದೇವದಾಯಗಳನ್ನು ಅವರಿಗೆ ಜನಸಾಮಾನ್ಯರ ಬೆಂಬಲವನ್ನು ಒದಗಿಸಿದವು.

ಸೈನ್ಯದಲ್ಲಿ ಹಾಗೂ ರಾಜ್ಯದಲ್ಲಿ ಒಟ್ಟಾರೆ ಶಿಸ್ತನ್ನು ಹೆಚ್ಚಿಸುವ ಉದ್ದೇಶದಿಂದ ಸೈನಿಕರಿಗೆ ಸಮವಸ್ತ್ರಗಳನ್ನು ಕಡ್ಡಾಯಪಡಿಸುವುದರ ಜೊತೆಗೆ ತಮ್ಮ ಆಸ್ಥಾನಕ್ಕೆ ಬರುವ ಆಸ್ಥಾನಿಕರೆಲ್ಲರೂ 'ದೊಗಲೆ' ಎಂಬ ಸಮವಸ್ತ್ರಗಳನ್ನು ಧರಿಸಬೇಕೆಂದು ಆಜ್ಞೆ ಮಾಡಿದರು. ಹೀಗೆ ಸೈನ್ಯದಲ್ಲಿ ಶಿಸ್ತನ್ನು ನೈಪುಣ್ಯವನ್ನು ಹೆಚ್ಚಿಸಿ ಜನಸಾಮಾನ್ಯರ ಆದರ ಅಭಿಮಾನಗಳನ್ನು ಪಡೆದು ರಾಜ್ಯವನ್ನು ಆರ್ಥಿಕವಾಗಿ ಬಲಪಡಿಸುವುದರ ಮೂಲಕ ಕಂಠೀರವ ನರಸರಾಜ ಒಡೆಯರು ಬಿಜಾಪುರವನ್ನೊಳಗೊಂಡ ಸಂಸ್ಥಾನದ ಶತ್ರುಗಳನ್ನು ಎದುರಿಸಿ ಜಯಶಾಲಿಗಳಾಗಿ ಮೈಸೂರು ಸಂಸ್ಥಾನವನ್ನು ದಕ್ಷಿಣ ಭಾರತದಲ್ಲಿಯೇ ಒಂದು ಪ್ರಬಲ ಸಂಸ್ಥಾನವನ್ನಾಗಿ ರೂಪಿಸಿದರು. ಜೊತೆಗೆ ಆವರೆಗೆ ವಿಜಯನಗರ ಸಾಮ್ರಾಜ್ಯದ ಒಂದು ಭಾಗವಾಗಿದ್ದ ಮೈಸೂರು ಸಂಸ್ಥಾನವನ್ನು ಸ್ವತಂತ್ರ ಸಂಸ್ಥಾನವೆಂದು ಸಾರಿ ವಿಜಯನಗರದಿಂದ ಬೇರ್ಪಡಿಸಿದನು. ಇದರಿಂದಾಗಿ ಮೈಸೂರು ಸಂಸ್ಥಾನಕ್ಕೆ ಒಂದು ಸ್ವತಂತ್ರ ಅಸ್ತಿತ್ವ ಬಂದಿತು.

ಕಂಠೀರವ ನರಸರಾಜ ಒಡೆಯರ್‌ರವರ ನಂತರ ಬಂದ ಪ್ರಮುಖ ದೊರೆ ಎಂದರೆ ದೇವರಾಜ ಒಡೆಯರು. ಇವರು ಅಧಿಕಾರಕ್ಕೆ ಬಂದ ಕೂಡಲೇ

ಆವರೆಗೆ ಅಧಿಕಾರದಲ್ಲಿದ್ದ ಎಲ್ಲರನ್ನೂ ಅವರವರ ಸ್ಥಾನದಲ್ಲಿ ಮುಂದುವರೆಸುವುದಾಗಿ ವಾಗ್ದಾನ ಮಾಡಿ ತಮಗೆ ಒದಗಬಹುದಾದ ಪ್ರತಿರೋಧವನ್ನು ಜನರ ಮನಸ್ಸಿನೊಳಗಿನ ಆತಂಕವನ್ನು ಹೋಗಲಾಡಿಸಿದರು. ಹೀಗೆ ಜನರ ಮನಸ್ಸಿನ ಅನುಮಾನಗಳನ್ನು ಶಮನಗೊಳಿಸಿದ ನಂತರ ಕ್ರಮೇಣ ತನಗೆ ಬೇಡದವರನ್ನು ಒಬ್ಬೊಬ್ಬರನ್ನಾಗಿ ತೆಗೆದು ಹಾಕಿದರು. ರಾಜನ ಆದೇಶಗಳನ್ನು ದಾಖಲು ಮಾಡುವ ಅಧಿಕಾರಿಯನ್ನು ತೆಗೆದುಹಾಕಿ ತನಗೆ ಬೇಕಾದ ಹಾಗೂ ಜೈನನಾದ ಲಕ್ಷ್ಮೀಪತಿಗೆ ಆ ಸ್ಥಾನವನ್ನು ಕೊಟ್ಟನು. ಇದು ಜೈನರು ರಾಜ್ಯದಲ್ಲಿ ಪ್ರಾಬಲ್ಯ ಹೊಂದಿದುದನ್ನು ತೋರಿಸುತ್ತದೆ. ನಂತರ ಬಂದುದು ಕಾರುಗಹಳ್ಳಿಯ ಹಂಪರಾಜಯ್ಯನ ಸರದಿ – ಆತನನ್ನು ರಾಜ ಬೊಕ್ಕಸದ ಹಣವನ್ನು ದುರಪಯೋಗಪಡಿಸಿದನೆಂಬ ಆಪಾದನೆಗೆ ಗುರಿಪಡಿಸಿ ೧೬೬೦ರ ಏಪ್ರಿಲ್ ತಿಂಗಳಿನಲ್ಲಿ ಅಧಿಕಾರದಿಂದ ಕಿತ್ತು ಹಾಕಿದನು. ಈ ವೇಳೆಗೆ ಕಳಲೆಯ ಮನೆತನ ಪ್ರಬುದ್ಧಮಾನಕ್ಕೆ ಬರುತ್ತಿದ್ದುದನ್ನು ಗಮನಿಸಿ ಅವರಿಗೆ ದಳವಾಯಿ ಸ್ಥಾನವನ್ನು ಕೊಟ್ಟನು. ಕಾರುಗಹಳ್ಳಿಯ ಹಂಪರಾಜಯ್ಯನ ನಂತರ ಕಳಲೆಯ ಮಲ್ಲರಾಜಯ್ಯನನ್ನು ದಳವಾಯಿ ಸ್ಥಾನಕ್ಕೆ ನೇಮಿಸಿದನು. ಆತನು ೧೬೬೦ರ ಏಪ್ರಿಲ್ ತಿಂಗಳಿನಿಂದ ಜುಲೈ ತಿಂಗಳಿನವರೆಗೆ ಆ ಸ್ಥಾನದಲ್ಲಿದ್ದನು. ಆನಂತರ ಅದೇ ಮನೆತನದ ಮುದ್ದಯ್ಯನು ೧೬೬೦ರ ಜುಲೈನಿಂದ ಸೆಪ್ಟೆಂಬರ್ ೧೬೬೧ರ ವರೆಗೆಯೂ ಆನಂತರ ಆ ಮನೆತನದ ನಂಜನಾಥಯ್ಯ ೧೬೬೧ರ ಸೆಪ್ಟೆಂಬರ್‌ನಿಂದ ೧೬೬೨ರ ಫೆಬ್ರವರಿವರೆಗೆಯೂ ದಳವಾಯಿಗಳಾದರು. ಆ ನಂತರ ೧೬೬೨ರ ಏಪ್ರಿಲ್‌ನಲ್ಲಿ ನಂಜನಾಥಯ್ಯನನ್ನು ದಳವಾಯಿ ಸ್ಥಾನಕ್ಕೆ ಏರಿಸಲಾಯಿತು. ಆತನು ೧೬೬೨ರ ಏಪ್ರಿಲ್‌ವರೆಗೆ ಅಧಿಕಾರಸ್ಥಾನದಲ್ಲಿದ್ದು ಆನಂತರ ಕಳಲೆಯ ಕುಮಾರಯ್ಯನು ದಳವಾಯಿಯಾಗಿದ್ದನು. ಹೀಗೆ ಈ ರಾಜನು ಯಾವ ದಳವಾಯಿಯನ್ನು ಕೆಲ ತಿಂಗಳ ಕಾಲಕ್ಕಿಂತ ಹೆಚ್ಚು ಸಮಯ ಅಧಿಕಾರದಲ್ಲಿರಗೊಡಲಿಲ್ಲ. ಇದಕ್ಕೆ ಕಾರಣವೆಂದರೆ ದಳವಾಯಿಗಳು ಈ ಹಿಂದೆ ಅಧಿಕಾರವನ್ನು ಅಪಹರಿಸಿ ರಾಜನನ್ನು ಮೂಲೆಗುಂಪಾಗಿಸುವ ಪ್ರಯತ್ನಗಳನ್ನು ಮಾಡಿದ್ದರಿಂದ ತನ್ನ ಕಾಲದಲ್ಲಿ ಹಾಗಾಗಬಾರದೆಂದು, ದಳವಾಯಿ ಸ್ಥಾನ ಎಷ್ಟೇ ದೊಡ್ಡದಾದರೂ ಅದನ್ನಲಂಕರಿಸುವವನು ಪ್ರಬಲನಾಗಬಾರದೆಂದು ಈ ರಾಜನು ವಹಿಸಿದ ಮುನ್ನೆಚ್ಚರಿಕೆ ಇದಾಗಿದ್ದಿತು. ಜೊತೆಗೆ ಪ್ರವರ್ಧಮಾನಕ್ಕೆ ಬರುತ್ತಿದ್ದ ಕಳಲೆ ಮನೆತನದ ಬೆಂಬಲವನ್ನು ಪಡೆಯುವ ಪ್ರಯತ್ನವು ಇದಾಗಿದ್ದಿತು. ಇದಲ್ಲದೆ ಸಾಮಂತ ರಾಜರ ವಿಚಾರದಲ್ಲಿಯೂ ಈ ರಾಜನು ಎಚ್ಚರಿಕೆ ವಹಿಸಿದನು. ಅವರ ಸ್ವಭಾವವನ್ನು, ರಾಜನಿಷ್ಠೆಯನ್ನು, ಶಕ್ತಿ ಸಾಮರ್ಥ್ಯಗಳನ್ನು ಗಣನೆಗೆ ತೆಗೆದುಕೊಂಡು ಅವರು ತನ್ನ ವಿರುದ್ಧ ತಿರುಗಿ ಬೀಳದಂತೆ ಕ್ರಮಗಳನ್ನು ಕೈಗೊಂಡನು. ಅವರಲ್ಲಿ ಕೆಲವರಿಗೆ ಉಂಬಳಿಗಳನ್ನು,

ಅಂದರೆ ಕಪ್ಪವಿಲ್ಲದ ಅಧಿಕಾರವನ್ನು ಕೊಟ್ಟರೆ, ಇನ್ನು ಕೆಲವರಿಗೆ ಜೋಡಿಗಳನ್ನು, ಅಂದರೆ ನಿಗದಿತ ಪ್ರಮಾಣದಲ್ಲಿ ಸಗಟಾಗಿ ತೆರಿಗೆಯನ್ನು ಕೊಡುವ ಪದ್ಧತಿಯನ್ನು ಜಾರಿಗೆ ತಂದು ಉಳಿದವರಿಗೆ, ಅಂದರೆ ಹೆಚ್ಚು ಬಲಶಾಲಿಗಳಾಗಿ ತನಗೆ ತೊಂದರೆ ಕೊಡುವ ಭಯವಿಲ್ಲದವರಿಗೆ, ಖಂಡಣೆಯ ಹಣವನ್ನು ಅಂದರೆ ವರ್ಷಕ್ಕೆ ಇಂತಿಷ್ಟೆಂದು ನಿಗದಿಪಡಿಸಿದನು. ಹೀಗೆ ದೇವರಾಜ ಒಡೆಯರು ತನಗೆ ಒದಗಬಹುದಾದ ಆಂತರಿಕ ತೊಂದರೆಗಳ ಬಗ್ಗೆ ಎಚ್ಚರವಹಿಸಿ ಅವುಗಳಿಂದ ಪಾರಾಗುವ ಮಾರ್ಗವನ್ನು ಕಂಡುಕೊಂಡರು. ಜೊತೆಗೆ ಬ್ರಹ್ಮದೇವ, ದೇವರಾಯ, ಗುಡಿಗಳಲ್ಲಿ ವಿವಿಧ ಪೂಜೆಗಳು ಮೊದಲಾದವುಗಳಿಂದ ಜನಾನುರಾಗವನ್ನು ಗಳಿಸಿಕೊಂಡನು.

ರಣಧೀರ ಕಂಠೀರವ ನರಸರಾಜ ಒಡೆಯರು ಮೈಸೂರು ಸಂಸ್ಥಾನವನ್ನು ವಿಜಯನಗರ ಸಾಮ್ರಾಜ್ಯದಿಂದ ಬೇರ್ಪಡಿಸಿ ಒಂದು ಸ್ವತಂತ್ರ ರಾಜ್ಯವೆಂದು ಸಾರಿದರೆ ದೇವರಾಜ ಒಡೆಯರು ಒಂದು ಹೆಜ್ಜೆ ಮುಂದೆ ಹೋಗಿ ಮೈಸೂರು ಸಂಸ್ಥಾನವು ವಿಜಯನಗರ ಸಾಮ್ರಾಜ್ಯದ ಉತ್ತರಾಧಿಕಾರಿಯೆಂದು ಸಾರಿದನು. ಅಂದರೆ ಅವರೆಗೆ ವಿಜಯನಗರ ಸಾಮ್ರಾಜ್ಯಕ್ಕೆ ಸಲ್ಲುತ್ತಿದ್ದ ಘನತೆ ಗೌರವಗಳು, ಕಪ್ಪ ಕಾಣಿಕೆಗಳು ಮೊದಲಾದವು ಮೈಸೂರಿಗೆ ಸಲ್ಲಬೇಕೆಂದು ಹೇಳಿದಂತಾಯಿತು. ಮೈಸೂರು ಸಂಸ್ಥಾನವು ಈ ವೇಳೆಗೆ ಸಾಕಷ್ಟು ಬಲಶಾಲಿಯಾಗಿ, ಸಾಕಷ್ಟು ವಿಸ್ತೀರ್ಣವನ್ನು ಕೂಡ ಹೊಂದಿದ್ದರಿಂದ ದೇವರಾಜನ ಈ ಹೇಳಿಕೆಗೆ ಬೇರಾವ ಸಂಸ್ಥಾನದಿಂದಲೂ ಪ್ರತಿರೋಧ ಬರಲಿಲ್ಲ.

ದೇವರಾಜ ಒಡೆಯರ ಮುತ್ಸದ್ಧಿತನದಿಂದಾಗಿ (diplomacy) ಮೈಸೂರು ಸಂಸ್ಥಾನವು ಸ್ವಾತಂತ್ರ್ಯ ಸಾರಿದ್ದರೂ ವಿಜಯನಗರ ಸಂಸ್ಥಾನದೊಂದಿಗೆ ರಾಜಕೀಯ ಬಾಂಧವ್ಯವನ್ನು ಇತರ ಬಾಂಧವ್ಯಗಳನ್ನು ಕಡಿದುಕೊಳ್ಳದೇ ಸಾಂಪ್ರದಾಯಿಕವಾಗಿ ವಿಜಯನಗರದೊಂದಿಗೆ ಬಾಂಧವ್ಯವನ್ನು ಉಳಿಸಿಕೊಂಡನು.

ದೇವರಾಜ ಒಡೆಯರ ಘನತೆ ಗೌರವಗಳು ಹೆಚ್ಚಲು ದಕ್ಷಿಣ ಭಾರತದ ಕೆಲ ರಾಜಕೀಯ ಬೆಳವಣಿಗೆಗಳು ಕಾರಣವಾದವು. ಇಕ್ಕೇರಿಯ ಮೊದಲನೇ ಶಿವಪ್ಪನಾಯಕನು ಶ್ರೀರಂಗಪಟ್ಟಣವನ್ನು ಗೆಲ್ಲಲು (೧೬೫೯–೬೦) ಮಾಡಿದ ವಿಫಲ ಪ್ರಯತ್ನ ಅವನ ಪ್ರೇರಣೆಯಿಂದಾಗಿ ಆರನೇ ಶ್ರೀರಂಗರಾಯ ಚಕ್ರವರ್ತಿಯೂ ಮೈಸೂರಿನ ಬಗ್ಗೆ ತೋರಿದ ಅನಾದರ ಮತ್ತು ದ್ವೇಷಗಳು ಇಕ್ಕೇರಿಯೊಂದಿಗೆ ಮೈಸೂರಿನ ಯುದ್ಧಗಳು, ಬಿಜಾಪುರ ಮತ್ತು ಗೋಲ್ಕೊಂಡ ರಾಜ್ಯಗಳು ಕರ್ನಾಟಕದ ಮೇಲಿನ ತಮ್ಮ ಹಿಡಿತವನ್ನು ಸಡಿಲಗೊಳಿಸಿದುದು ೧೬೬೪ರಲ್ಲಿ ಶ್ರೀರಂಗರಾಯನು ದಕ್ಷಿಣದ ಕಡೆ ನಿರ್ಗಮಿಸಿದುದು ವಿಜಯನಗರ ಸಂಸ್ಥಾನದಲ್ಲಿದ್ದ ಸುಪ್ರಸಿದ್ಧ

ತಾತಾಚಾರ್ಯರ ಶ್ರೀವೈಷ್ಣವ ಮನೆತನದವರು ಮೈಸೂರಿನಲ್ಲಿ ಬಂದು ನೆಲೆಸಿದುದು ಮಧುರೆಯ ಚೊಕ್ಕನಾಥ ನಾಯಕನನ್ನು ಮೈಸೂರು ಸೈನ್ಯವು ಈರೋಡಿನ ಬಳಿ (೧೬೬೭) ಸೋಲಿಸಿದುದು, ಮೊದಲಾದ ಘಟನೆಗಳು ದೇವರಾಜ ಒಡೆಯರ್ ರವರ ಘನತೆ ಗೌರವವನ್ನು ಹೆಚ್ಚಿಸಿ ಮೈಸೂರು ಸಂಸ್ಥಾನಕ್ಕೆ ಹಿರಿಮೆಯನ್ನು ತಂದುಕೊಟ್ಟವು. ದೇವರಾಜನನ್ನು ಮೈಸೂರು ಸಂಸ್ಥಾನದ ನಿರ್ಮಾಪಕರಲ್ಲಿ ಒಬ್ಬನೆಂದು ಭಾವಿಸುವಂತಾಯಿತು. ಈ ರಾಜನು ಬಲಶಾಲಿ ಎಂದು ಹಿರಿಯ ರಾಜನೆಂದು ಹೆಸರು ಗಳಿಸಲು ಈ ಎಲ್ಲಾ ಆಡಳಿತ ಕ್ರಮಗಳು ಕಾರಣವಾದವು. ದೇವರಾಜ ಒಡೆಯರು ಕಂಠೀರವ ನರಸರಾಜ ಒಡೆಯರ್‌ರವರ ಕ್ರಮಗಳನ್ನು ಅನುಸರಿಸಿ ಮೈಸೂರು ರಾಜ್ಯವನ್ನು ಇನ್ನಷ್ಟು ಬಲಪಡಿಸಿದರು. ಮೈಸೂರಿನಲ್ಲಿ ಬ್ರಹ್ಮದೇಯ, ದೇವದಾಯಗಳಿಂದಾಗಿ ಪ್ರಜಾನುರಾಗವನ್ನು ಗಳಿಸಿ, ವ್ಯಾಪಾರ ವಾಣಿಜ್ಯಗಳಿಗೆ ಪ್ರೋತ್ಸಾಹ ನೀಡಿ ಮೈಸೂರನ್ನು ಆರ್ಥಿಕವಾಗಿ ಬಲಪಡಿಸಿದರು.

ದೇವರಾಜ ಒಡೆಯರ್‌ರವರ ಕಾಲಕ್ಕೆ ಮೈಸೂರು ಸಂಸ್ಥಾನವು ಪಶ್ಚಿಮದ ಸಕ್ಕರೆ ಪಟ್ಟಣದಿಂದ ಪೂರ್ವಕ್ಕೆ ಸೇಲಂವರೆಗೂ ಉತ್ತರದ ಚಿಕ್ಕನಾಯಕನ ಹಳ್ಳಿಯಿಂದ ದಕ್ಷಿಣದ ಕೊಯಮತ್ತೂರು ಜಿಲ್ಲೆಯ ಧಾರಪುರದವರೆಗೂ ವಿಸ್ತರಿಸಿದ್ದಿತು. ದೇವರಾಜ ಒಡೆಯರು ೧೬೭೨ರಲ್ಲಿ ಚಿಕ್ಕನಾಯಕನ ಹಳ್ಳಿಯಲ್ಲಿ ಮೃತರಾದರು.

ದೇವರಾಜ ಒಡೆಯರ್‌ರವರ ಮರಣದ ನಂತರ ಚಿಕ್ಕದೇವರಾಜ ಒಡೆಯರ್‌ರವರು ೧೬೭೩ರಲ್ಲಿ ಪಟ್ಟವೇರಿದರು. ಇವರ ಆಡಳಿತವನ್ನು ನೋಡಿದಾಗ ಆತನ ಆಡಳಿತವನ್ನು ೨ ಭಾಗಗಳಾಗಿ ವಿಂಗಡಿಸಬಹುದೆಂಬುದು ತಿಳಿಯುತ್ತದೆ. ಮೊದಲನೆಯ ಭಾಗ ೧೬೭೩ರಿಂದ ೧೬೮೬ರ ವರೆಗೆ ವಿಶಾಲಾಕ್ಷ ಪಂಡಿತನು ಪ್ರಧಾನಮಂತ್ರಿಯಾಗಿದ್ದಾಗಿನ ಕಾಲವಾಗಿದ್ದು ಎರಡನೆಯ ಭಾಗ ೧೬೮೬ರಿಂದ ೧೭೦೪ರ ವರೆಗೆ ತಿರುಮಲೈಂಗಾರ್ ಪ್ರಧಾನಮಂತ್ರಿ ಆಗಿದ್ದ ಕಾಲವಾಗಿತ್ತು. ಚಿಕ್ಕದೇವರಾಜ ಒಡೆಯರ್‌ರವರ ಒಂದು ವೈಶಿಷ್ಟ್ಯವೆಂದರೆ ಅವರು ಚಿಕ್ಕಂದಿನಲ್ಲಿ ಪಡೆದ ತರಬೇತಿಯಿಂದಾಗಿ ಆಡಳಿತದ ಬಗ್ಗೆ ಹೆಚ್ಚಿನ ಗಮನಹರಿಸಿ ಆಡಳಿತದ ಪ್ರತಿಯೊಂದು ವಿಭಾಗವನ್ನು ಸ್ವತಃ ಪರಿಶೀಲಿಸಿ ಮೈಸೂರಿನ ಇತಿಹಾಸಕ್ಕೆ ಒಂದು ಹೊಸ ತಿರುವನ್ನು ಕೊಟ್ಟಿದ್ದು. ಆವರೆಗೆ ಮೈಸೂರಿನ ರಾಜರುಗಳು ಈ ರಾಜ ಆಡಳಿತಕ್ಕೆ ಕೊಟ್ಟಷ್ಟು ಗಮನ ಕೊಡುತ್ತಿರಲಿಲ್ಲ. ಈ ರಾಜನಿಗೆ ತನ್ನ ಪ್ರಜೆಗಳ ಸುಖ ಸಂತೋಷಗಳು ಪ್ರಧಾನವಾಗಿದ್ದು ಪರಂಪರಾಗತವಾದ ಸಂಪ್ರದಾಯಗಳನ್ನು ಬಿಡದೆ, ಬದಲಾಗುತ್ತಿರುವ ರಾಜಕೀಯ ಸನ್ನಿವೇಶಗಳಿಗೆ ಹೊಂದಿಕೊಂಡು ಜನರಿಗೆ ಸುಖ ಸಂತೋಷಗಳನ್ನು ಒದಗಿಸುವುದು ತನ್ನ ಆದ್ಯ ಕರ್ತವ್ಯವೆಂದು ಈ ರಾಜನು ನಂಬಿದ್ದನು. ಇದಕ್ಕಾಗಿ ನಿಷ್ಣಾತರಾದ ಮಂತ್ರಿಗಳ ಒಂದು ಸಮೂಹವನ್ನೇ ರಚಿಸಿದನು.

ಮಂತ್ರಿಗಳಿದ್ದರೂ ರಾಜನದೇ ಸರ್ವಾಧಿಕಾರವಾಗಿದ್ದು ನಾಗರಿಕ ಹಾಗೂ ದಂಡಿನ ವಿಭಾಗಗಳ ವಿಂಗಡಣೆ ಇರಲಿಲ್ಲ.

ಚಿಕ್ಕದೇವರಾಜ ಒಡೆಯರ್‌ರವರು ಪ್ರಬಲವಾದ ಕಾರ್ಯ ನಿರ್ವಾಹಕ ಮಂಡಲಿಯ (Executive) ಪ್ರಾಧಾನ್ಯವನ್ನು ಅರಿತಿದ್ದು, ತತ್ರಾಪಿ ತನ್ನ ಕಾಲದ ಅನೇಕ ಕಂಟಕಗಳನ್ನೆದುರಿಸಲು ಒಂದು ಪ್ರಬಲವಾದ ಮಂತ್ರಾಲೋಚನ ಸಭೆಯನ್ನು ನಿರ್ಮಿಸಿ ಅದಕ್ಕೆ ತಕ್ಕವರನ್ನು ಆರಿಸಿ ಒಂದು ದಕ್ಷ ಮಂತ್ರಿಗಳ ಗುಂಪನ್ನು ರಚಿಸಿದನು. ಈ ಮಂತ್ರಾಲೋಚನ ಸಭೆಯಲ್ಲಿ ವಿಶಾಲಾಕ್ಷ ಪಂಡಿತನು, ತಿರುಮಲೈಂಗಾರನು, ಷಡಕ್ಷರಯ್ಯನು, ಚಿಕ್ಕುಪಾಧ್ಯಾಯನು, ಕರಣಿಕ ಲಿಂಗಣ್ಣಯ್ಯನು ಸದಸ್ಯರಾಗಿದ್ದರು. ಈ ಹೆಸರುಗಳನ್ನು ನೋಡಿದಾಗ ಚಿಕ್ಕದೇವರಾಜ ಒಡೆಯರ್‌ರವರು ಜಾತಿಯ ಹಾಗೂ ಗುಂಪುಗಳ ಸಮತೋಲನವನ್ನು ಕಾಯ್ದುಕೊಂಡು ಬಂದುದನ್ನು ಕಾಣುತ್ತೇವೆ. ವಿಶಾಲಾಕ್ಷ ಪಂಡಿತನು ಜೈನನಾಗಿದ್ದರೆ, ತಿರುಮಲೈಂಗಾರ್ ಮತ್ತು ಚಿಕ್ಕುಪಾಧ್ಯಾಯರು ಶ್ರೀವೈಷ್ಣವ ಬ್ರಾಹ್ಮಣರಾಗಿದ್ದು, ಷಡಕ್ಷರಯ್ಯನು ವೀರಶೈವನಾಗಿದ್ದು, ಕರಣಿಕ ಲಿಂಗಣ್ಣಯ್ಯನು ಸ್ಮಾರ್ತ ಬ್ರಾಹ್ಮಣನಾಗಿದ್ದನು. ಹೀಗೆ ಎಲ್ಲ ಪಂಗಡದವರಿಗೆ ಮಂತ್ರಿಮಂಡಲದಲ್ಲಿ ಸ್ಥಾನವನ್ನು ನೀಡುವುದರ ಮೂಲಕ ಸಮತೋಲನವನ್ನು ಈ ರಾಜನು ಕಾಯ್ದುಕೊಂಡು ಬಂದನು. ಈ ಮಂತ್ರಿ ಪರಿಷತ್ತು ಚಿಕ್ಕದೇವರಾಜ ಒಡೆಯರಿಗೆ ಆಪ್ತಾಲೋಚನೆಯ ಅವಕಾಶವನ್ನು ಕಲ್ಪಿಸಿಕೊಟ್ಟು ಆ ರಾಜನ ಒಳ್ಳೆಯ ಆಡಳಿತಕ್ಕೆ ಅನುವು ಮಾಡಿಕೊಟ್ಟಿತು. ಈ ಆಪ್ತಾಲೋಚನ ಸಭೆಯ ಎಲ್ಲ ಸದಸ್ಯರಿಗೂ ಸಾಕಷ್ಟು ಅಧಿಕಾರವಿದ್ದು ರಾಜನಿಗೆ ಅವರ ಮೇಲಿನ ಅಧಿಕಾರವಿದ್ದಿತು.

ಇನ್ನು ದಳವಾಯಿಗಳ ವಿಚಾರಕ್ಕೆ ಬರೋಣ. ಚಿಕ್ಕದೇವರಾಜ ಒಡೆಯರಿಗೆ ದಕ್ಷರಾದ ದಳವಾಯಿಗಳಿದ್ದು ಆ ರಾಜನ ರಾಜ್ಯ ಸಂರಕ್ಷಣೆ ಹಾಗೂ ರಾಜ್ಯ ವಿಸ್ತರಣೆ ಕಾರ್ಯಗಳನ್ನು ಬಹಳ ದಕ್ಷ ರೀತಿಯಿಂದ ಮಾಡಿದರು. ರಾಜನ ಮಾವನಾದ ಕಳಲೆಯ ಕುಮಾರಯ್ಯ ೧೬೭೩-೧೬೮೨ರವರೆಗೆ ದಳವಾಯಿಯಾಗಿದ್ದು ವೃದ್ಧಾಪ್ಯದಿಂದಾಗಿ ನಿವೃತ್ತನಾದನು. ಆನಂತರ ದೊಡ್ಡಯ್ಯ, ಮಲ್ಲರಾಜಯ್ಯ, ವೀರರಾಜಯ್ಯ ಮತ್ತು ದಾಸರಾಜಯ್ಯ ಎಂಬುವವರು ದಳವಾಯಿಗಳಾಗಿ ಸೇವೆ ಸಲ್ಲಿಸಿದರು. ದಳವಾಯಿಗಳಾದ ಕಳಲೆಯ ಕುಮಾರಯ್ಯ ಮತ್ತು ಕಳಲೆಯ ದೊಡ್ಡಯ್ಯ "ಮೈಸೂರು ದೊರೆಗಳ ವಂಶವನ್ನು ಉದ್ಧರಿಸಲು ಸಹಕರಿಸಿದವರಾಗಿದ್ದರು. ಅವರು ಮೈಸೂರು ರಾಜ್ಯವನ್ನು ಎಲ್ಲ ಕಡೆ ಹರಡಿದ್ದೇ ಅಲ್ಲದೆ ಮರಾಠರ ದಾಳಿಗಳನ್ನು ತಡೆಗಟ್ಟಿದರು. ದಳವಾಯಿ ತಿಮ್ಮಪ್ಪಯ್ಯ ಮತ್ತು ಆತನ ನಂತರ ಬಂದ ದಳವಾಯಿಗಳು ಮೈಸೂರಿನ ಪ್ರಭಾವವನ್ನು ಇಕ್ಕೇರಿ, ಕೊಡಗು ಮತ್ತು ಮಲಬಾರುಗಳಿಗೆ ಹರಡಿ ಚಿಕ್ಕದೇವರಾಜ ಒಡೆಯರಿಗೆ ಒದಗಬಹುದಾದ

ಪ್ರತಿರೋಧವನ್ನು ತಪ್ಪಿಸಿದರು. ಚಿಕ್ಕದೇವರಾಜ ಒಡೆಯರ್‌ರವರ ಒಂದು ವೈಶಿಷ್ಟ್ಯವೆಂದರೆ ಅವರು ಬೊಕ್ಕಸ ಮತ್ತು ಟಂಕಸಾಲೆಗಳ ಇಲಾಖೆಗಳಿಗೆ ಹೆಚ್ಚಿನ ಮಹತ್ವ ಕೊಟ್ಟು ಪ್ರತಿದಿನ ಆ ಬಗ್ಗೆ ಗಮನಹರಿಸುತ್ತಿದ್ದರು. ಈ ರಾಜನ ಆಡಳಿತದ ಮೊದಲಲ್ಲಿ ಚಿಕ್ಕುಪಾಧ್ಯಾಯ ಕೋಶಾಧಿಕಾರಿಯಾಗಿದ್ದು ಆತನಿಗೆ ಬೊಕ್ಕಸದ ನರಸಯ್ಯನಂತಹ ಪ್ರಾಮಾಣಿಕ ಸಹಾಯಕರಿದ್ದರು. ೧೬೮೬ರಲ್ಲಿ ಜವನ ಶೆಟ್ಟಿಯ ಮಗನಾದ ಅಣ್ಣಯ್ಯನು ಈ ವಿಭಾಗವನ್ನು ನೋಡಿಕೊಂಡನು. ಆತನು ಜೈನನಾಗಿದ್ದು ಟಂಕಸಾಲೆಯ ವಿಚಾರದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸಿದನು. ಆತನು ಎಷ್ಟು ಶ್ರದ್ಧೆಯಿಂದ ಕೆಲಸ ಮಾಡಿದನೆಂದರೆ ರಾಜನಿಗೆ ಆತನ ಬಗ್ಗೆ ಹೆಚ್ಚಿನ ಪ್ರೀತಿ ಆದರಗಳು ಮೂಡಿದವು. ಇದು ಎಷ್ಟರವರೆಗೆ ಹೋಯಿತ್ತೆಂದರೆ ಅಣ್ಣಯ್ಯನ ಇಚ್ಛೆಯ ಮೇರೆಗೆ ಮಹಾರಾಜರು ಶ್ರವಣಬೆಳಗೊಳದಲ್ಲಿ ಶ್ರೀ ಚಿಕ್ಕದೇವೇಂದ್ರ ಮಹಾಸ್ವಾಮಿಯವವರ ಕಲ್ಯಾಣಿ ಎಂಬ ಒಂದು ಕಲ್ಯಾಣಿಯನ್ನು ನಿರ್ಮಿಸಿದರು. ಸಂಸ್ಥಾನದೊಳಗಿನ ಪ್ರಮುಖ ಸ್ಥಳಗಳಿಗೂ ಹೊಸದಾಗಿ ಗೆದ್ದ ಪ್ರದೇಶಗಳಿಗೂ, ಗಡಿನಾಡ ಪ್ರದೇಶಗಳಿಗೂ ಚಿಕ್ಕದೇವರಾಜ ಒಡೆಯರು ಸ್ವಾಮಿನಿಷ್ಠರು ದಕ್ಷರು ಆದ ಅಧಿಕಾರಿಗಳನ್ನು ನೇಮಿಸಿದರು. ಅವುಗಳಲ್ಲಿ ಕಾರ್ಯಕರ್ತರು, ಗುರಿಕಾರರು, ಪಾರುಪತ್ಯಗಾರರು ಮೊದಲಾದವರಿದ್ದು ಅವರೆಲ್ಲರೂ ಕೇಂದ್ರ ಸರ್ಕಾರಕ್ಕೆ ಜವಾಬ್ದಾರರಾಗಿದ್ದರು. ಸಮಕಾಲೀನ ದಾಖಲೆಗಳಲ್ಲಿ ಅಂತಹ ಅನೇಕ ಅಧಿಕಾರಿಗಳ ಉಲ್ಲೇಖಗಳು ಬರುತ್ತವೆ. ಇವರಲ್ಲದೆ ಬೇರೆ ರಾಜ್ಯಗಳೊಡನೆ ವ್ಯವಹರಿಸುವ ನಿಯೋಗಿಗಳೆಂಬ ಮುತ್ಸದ್ಧಿಗಳಿದ್ದರು. ರಾಜನು ಯುದ್ಧದಲ್ಲಿ ತೊಡಗಿದ್ದಾಗ ಮಂತ್ರಾಲೋಚನ ಸಭೆಯು ಆಡಳಿತವನ್ನು ನೋಡಿಕೊಳ್ಳುತ್ತಿತ್ತು.

ಚಿಕ್ಕದೇವರಾಜ ಒಡೆಯರ ರಾಜ್ಯವು ವಿಸ್ತರಿಸಲು ಪ್ರಮುಖ ಕಾರಣವೆಂದರೆ ಆ ರಾಜನು ಸೈನ್ಯದಲ್ಲಿ ತಂದ ಬದಲಾವಣೆ ಈ ರಾಜನ ಆಡಳಿತದ ಆದಿಭಾಗದಲ್ಲಿ ಶತ್ರುಗಳ ತೊಂದರೆ ಹೆಚ್ಚಾಗಿ ಈತನ ಸೈನ್ಯವು ಶತ್ರುಗಳು ಕೊಟ್ಟ ಕಿರುಕುಳವನ್ನು ಸಹಿಸಲು ಹೆಚ್ಚಿಗೆ ಶ್ರಮಪಡಬೇಕಾಯಿತು. ಆದ್ದರಿಂದ ೧೬೭೫ರಿಂದ ಚಿಕ್ಕದೇವರಾಜ ಒಡೆಯರು ಸೈನ್ಯಕ್ಕೆ ಹೆಚ್ಚಿನ ಗಮನಹರಿಸಿದರು. ಶ್ರೀರಂಗಪಟ್ಟಣದ ಕೋಟೆಯನ್ನು ಬಲಪಡಿಸಿ ಶತ್ರುಗಳಿಗೆ ಅಡೆತಡೆಯನ್ನು ಒಡ್ಡಿದ್ದೇ ಅಲ್ಲದೇ ತನ್ನ ಸೈನ್ಯವನ್ನು ವಿಸ್ತರಿಸಿ ಹನ್ನೆರಡು ಸಾವಿರದಷ್ಟು ಹೆಚ್ಚಿನ ಕುದುರೆಗಳನ್ನು ಒಂದು ಲಕ್ಷದಷ್ಟು ಹೆಚ್ಚಿನ ಕಾಲ್ಬಲವನ್ನು ತನ್ನ ಸೈನ್ಯಕ್ಕೆ ಸೇರಿಸಿಕೊಂಡರು. ಅವರೆಲ್ಲರಿಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ಒದಗಿಸಿ ಆ ಶಸ್ತ್ರಗಳು ಹೆಚ್ಚು ಪ್ರಭಾವಿಯಾಗುವಂತೆ ಉತ್ತಮೀಕರಿಸಿದರು.

ಚಿಕ್ಕದೇವರಾಜ ಒಡೆಯರು ಒಂದು ಹೊಸ ಬಂಗಾರದ ವರಹವನ್ನು ಟಂಕಿಸಿ ಜಾರಿಗೆ ತಂದರು. ಅದರ ಹೆಸರು 'ತಾಂಡವಮೂರ್ತಿ ದೇವರಾಯ'

ಇದು ಆ ರಾಜನ ಆರ್ಥಿಕ ಸುಸ್ಥಿತಿಯನ್ನು ಸೂಚಿಸುವುದೇ ಅಲ್ಲದೆ, ೧೬೭೩ರಲ್ಲಿ ಮಧುರೆಯ ಚೊಕ್ಕನಾಥ ನಾಯಕನ ಮೇಲೆ ಸಾಧಿಸಿದ ವಿಜಯವನ್ನು ಸೂಚಿಸುತ್ತದೆ. ನಾಣ್ಯದ ಇನ್ನೊಂದು ಮುಖದಲ್ಲಿ ಕೃಷ್ಣನು ನರ್ತಿಸುತ್ತಿರುವ ಚಿತ್ರವಿದ್ದು ಮಧುರೆಯನ್ನು ಈ ಕೃಷ್ಣನು ಗೆದ್ದುದನ್ನು ಸೂಚ್ಯವಾಗಿ ತೋರಿಸುತ್ತದೆ. ಈ ನಾಣ್ಯದ ಇನ್ನೊಂದು ವೈಶಿಷ್ಟ್ಯವೆಂದರೆ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ಶ್ರೀ ವೈಷ್ಣವ ಮತದ ಪ್ರಾಬಲ್ಯವನ್ನೂ, ಆ ರಾಜನು ಆ ಮತವನ್ನೂ ಅಂಗೀಕರಿಸಿದುದನ್ನೂ ಸೂಚಿಸುತ್ತದೆ.

ಚಿಕ್ಕದೇವರಾಜ ಒಡೆಯರ ಆಳ್ವಿಕೆಯಲ್ಲಿ ಮೈಸೂರಿನ ರಾಜ್ಯದ ಮೇಲೆ ಅನೇಕ ಸಂಸ್ಥಾನಗಳವರು ದಂಡೆತ್ತಿ ಬಂದು ರಾಜನಿಗೆ ಎಡೆಬಿಡದ ಕೆಲಸವಿರುತ್ತಿತ್ತು. ಜೊತೆಗೆ ಈ ರಾಜನೇ ಸ್ವತಃ ಬೇರೆ ರಾಜ್ಯಗಳ ಮೇಲೆ ದಂಡೆತ್ತಿ ಹೋಗಿ ಅನೇಕ ಪ್ರದೇಶಗಳನ್ನು ಗೆದ್ದುಕೊಂಡು ತನ್ನ ರಾಜ್ಯಕ್ಕೆ ಸೇರಿಸಿಕೊಂಡನು. ಹೀಗಾಗಿ ಅವುಗಳ ಆಡಳಿತದ ಬಗ್ಗೆ ಗಮನಹರಿಸುವುದು, ಎಷ್ಟೇ ವಿರಾಮವಿಲ್ಲದಿದ್ದರೂ ಅನಿವಾರ್ಯ ವಾಗಿದ್ದಿತು. ಸಂಸ್ಥಾನವನ್ನು ಹಿಂದಿನ ರಾಜರು ಆಡಳಿತದ ಸಲುವಾಗಿ ಅನೇಕ ವಿಭಾಗಗಳಾಗಿ ವಿಭಜಿಸಿ ಅವುಗಳನ್ನು ಗಡಿಗಳೆಂದು ಕರೆದರು.

ಚಿಕ್ಕದೇವರಾಜ ಒಡೆಯರು ಪಟ್ಟಕ್ಕೆ ಬಂದಾಗ ೭೨ ಗಡಿಗಳಿದ್ದವು ಅವರ ಯುದ್ಧಗಳಿಂದಾಗಿ ಹೆಚ್ಚಿನ ಪ್ರದೇಶಗಳು ಸೇರ್ಪಡೆಯಾಗಿ ೮೪ ಗಡಿಗಳಾದವು. ಇವಲ್ಲದೆ ಆ ರಾಜನು ಕೊಟ್ಟ ಉಂಬಳಿಗಳು, ಅಂದರೆ ತೆರಿಗೆ ವಿನಾಯಿತಿ ಪಡೆದ ಪ್ರದೇಶಗಳು ಬೇರೆ ಇದ್ದವು. ಪ್ರತಿಯೊಂದು ಗಡಿಯನ್ನು ಹೋಬಳಿಗಳಾಗಿ ವಿಂಗಡಿಸಲಾಗಿತ್ತು. ಪ್ರತಿಯೊಂದು ಹೋಬಳಿಯಲ್ಲಿಯೂ ೮ ರಿಂದ ೧೬ ಹಳ್ಳಿಗಳಿದ್ದು ಅವುಗಳ ಪೈಕಿ ಹೆಚ್ಚು ಪ್ರಮುಖವಾಗಿದ್ದ ಹಳ್ಳಿಯ ಹೆಸರನ್ನು ಆ ಹೋಬಳಿಗೆ ಇಡಲಾಗುತ್ತಿತ್ತು. ಚಿಕ್ಕದೇವರಾಜ ಒಡೆಯರು ಅನೇಕ ಯುದ್ಧಗಳನ್ನು ಮಾಡಿ ರಾಜ್ಯಗಳನ್ನು ಗೆದ್ದು ಮೊಗಲರು ಮರಾಠರಂತಹ ದೊಡ್ಡ ಕುತ್ತುಗಳನ್ನು ಎದುರಿಸಿ ಜಯಶಾಲಿಗಳಾದುದಕ್ಕೆ ಅವರ ರಾಜ್ಯದಿಂದ ಅವರಿಗೆ ದೊರೆತ ಬೆಂಬಲವೇ ಪ್ರಮುಖ ಕಾರಣವಾಗಿದೆ. ಹಾಗೆ ಬೆಂಬಲ ಸಿಕ್ಕಿದುದಕ್ಕೆ ಕಾರಣವೆಂದರೆ ಅವರ ರಾಜ್ಯದಲ್ಲಿದ್ದ ತತ್ರಾಪಿ ಅವರಿಂದಲೇ ರೂಪುಗೊಂಡ ಆಡಳಿತ ವ್ಯವಸ್ಥೆಯಾಗಿದೆ. ಆಂತರಿಕ ಶತ್ರುಗಳು, ಅಸಮರ್ಥ ಆಡಳಿತ, ಅಸಮರ್ಪಕ ಸಲಕರಣೆಗಳ ಪೂರೈಕೆ, ಮೊದಲಾದ ತೊಂದರೆಗಳಿಂದ ಚಿಕ್ಕದೇವರಾಜ ಒಡೆಯರು ಕಷ್ಟಪಡಲಿಲ್ಲವೆಂದರೆ ಅದಕ್ಕೆ ಕಾರಣ ಅವರು ರೂಪಿಸಿದ ಉತ್ತಮವಾದ ಆಡಳಿತ ವ್ಯವಸ್ಥೆಯೇ ಆಗಿದೆ.

ಆಡಳಿತವು ಪ್ರಭಾವಶಾಲಿಯೂ, ಸಮರ್ಪಕನೂ ಆಗಬೇಕಾದರೆ ಅದರ ಕಡೆ ಹೆಚ್ಚಿನ ಗಮನವನ್ನು ಹರಿಸಿ ಅತಿ ಚಿಕ್ಕ ವ್ಯವಸ್ಥೆಯನ್ನು ಕೂಡ ಯೋಚಿಸಿ, ಗಮನಿಸಿ, ರೂಪಿಸಬೇಕಾಗುತ್ತದೆ. ಒಂದು ಮೊಳೆಯಿಂದಾಗಿ ರಾಜನು ರಾಜ್ಯವನ್ನೇ

ಕಳೆದುಕೊಂಡ ಎಂಬ ಇಂಗ್ಲಿಷ್ ನಾಣ್ಣುಡಿ ಇದೆ. ಚಿಕ್ಕದೇವರಾಜ ಒಡೆಯರು ಅಂತಹ ತಪ್ಪನ್ನು ಸರ್ವಥಾ ಮಾಡಿದವರಲ್ಲ. ಆಡಳಿತದ ಪ್ರತಿಯೊಂದು ಅಂಶವನ್ನು ತತ್ರಾಪಿ ಆರ್ಥಿಕ ವ್ಯವಸ್ಥೆಯನ್ನು ಅತಿ ಹೆಚ್ಚಿನ ಜಾಗರೂಕತೆಯಿಂದ ನೋಡಿಕೊಂಡರು.

ಅವರ ಆಡಳಿತದ ವಿವರಗಳಿಗೆ ಬಂದರೆ ಪ್ರತಿಯೊಂದು ಆಡಳಿತ ವಿಭಾಗವನ್ನು ಒಬ್ಬ ಸುಭಾದಾರನ ವಶಕ್ಕೆ ಕೊಡಲಾಗಿತ್ತು. ಆತನಿಗೆ ಚಿಕ್ಕಪಾರುಪತ್ಯಗಾರ, ಅಠವಣೆಗೆ ಪ್ರತಿ (ನಕಲು ಬರೆಯುವವನು), ಆರು ಜನ ಗುಮಾಸ್ತೆಯರು ಮತ್ತು ಒಬ್ಬ ರಾಯಸದವನು ಸಹಾಯಕರಾಗಿರುತ್ತಿದ್ದರು. ಒಳ್ಳೆಯ ಅಂಚೆಯ ವ್ಯವಸ್ಥೆಯ ಜಾಲವೇ ಇದ್ದು ಪ್ರತಿಯೊಂದು ವಿಭಾಗದಲ್ಲಿಯೂ ಒಬ್ಬ ಅಂಚೆ ಹರಿಕಾರನಿದ್ದನು. ಅವನು ಪತ್ರಗಳನ್ನು ಬೇರೆ ಬೇರೆ ಸ್ಥಳಗಳಿಗೆ ತಲುಪಿಸುವುದೇ ಅಲ್ಲದೆ ತನ್ನ ಗಮನಕ್ಕೆ ಬಂದ ಎಲ್ಲ ವಿಷಯಗಳನ್ನು ರಾಜನಿಗೆ ವರದಿ ಮಾಡುತ್ತಿದ್ದನು. ಹೀಗೆ ಅವನು ಗೂಢಚಾರನು ಕೂಡ ಆಗಿದ್ದನು. ಚಿಕ್ಕದೇವರಾಜ ಒಡೆಯರ ಆಡಳಿತವು ಅತ್ಯಂತ ಯಶಸ್ವಿಯಾಗಲು ಪ್ರಮುಖ ಕಾರಣಗಳಲ್ಲಿ ಒಂದೆಂದರೆ ಈ ಗೂಢಚಾರ ವ್ಯವಸ್ಥೆ.

ಪ್ರತಿಯೊಂದು ವಿಭಾಗದಲ್ಲಿಯೂ ಅನೇಕ ಚಿಕ್ಕ ಅಧಿಕಾರಿಗಳು, ಜವಾನರು, ಮೊದಲಾದವರಿರುತ್ತಿದ್ದರು. ಅವರ ಸಂಖ್ಯೆ ಗಡಿಯ ವಿಸ್ತೀರ್ಣದ ಮೇಲೆಯೂ, ಪ್ರಾಮುಖ್ಯತೆಯ ಮೇಲೆಯೂ ಆಧಾರ ಪಟ್ಟಿದ್ದಿತು. ಪ್ರತಿಯೊಂದು ಗಡಿಯಲ್ಲಿಯೂ ಒಬ್ಬ ದಫೇದಾರ (ಜವಾನರ ಮುಖ್ಯಸ್ಥ), ಕಾಲೂಳಿಗದವರು (ಜವಾನರು), ಹಸ್ತಾಂತ್ರಿ ಮತ್ತು ಗೊಲ್ಲ (ಖಜಾನೆಯ ಕೆಲಸಗಾರರು), ಇಬ್ಬರು ಚಾವಡಿ ಕಾವಲುಗಾರರು ಮತ್ತು ಒಬ್ಬ ದೀವಟಿಗೆಯ ಜನ (ದೀಪ ಹಿಡಿಯುವವನು) ಇರುತ್ತಿದ್ದರು.

ರಾಜ್ಯದಲ್ಲಿ ಪ್ರಜೆಗಳ ಜೀವಕ್ಕೂ, ಆಸ್ತಿಗೂ ರಕ್ಷಣೆಗೆ, ಹೊರಗಿನ ಶತ್ರುಗಳಲ್ಲದೆ, ಆಂತರಿಕ ದರೋಡೆಕೋರರು, ಚಿಕ್ಕಪುಟ್ಟ ಕಳ್ಳರು ಮೊದಲಾದವರ ತೊಂದರೆಯಿಂದ ಜನರನ್ನು ಕಾಪಾಡುವುದು ರಾಜನ ಆದ್ಯ ಕರ್ತವ್ಯವಾಗಿರುತ್ತದೆ. ಈ ಜವಾಬ್ದಾರಿಯನ್ನು ರಾಜ್ಯದ ಗಡಿಯ ಕೆಲ ಅಧಿಕಾರಿಗಳ ಮೇಲೆ ಮಾತ್ರ ಬಿಡದೆ ಎಲ್ಲ ಅಧಿಕಾರಿಗಳನ್ನು ಈ ಕೆಲಸದಲ್ಲಿ ತೊಡಗಿಸುವುದು ರಾಜನ ಅತ್ಯಂತ ಪ್ರಮುಖವಾದ ಕರ್ತವ್ಯ ವೆಂಬುದನ್ನು ಚಿಕ್ಕದೇವರಾಜರು ಅರಿತಿದ್ದರು. ಹೀಗಾಗಿ ಪ್ರತಿಯೊಂದು ಆಡಳಿತ ವಿಭಾಗದಲ್ಲಿಯೂ ಕಂದಾಚಾರ ಪದ್ಧತಿ ಇದ್ದು. ಅಂದರೆ ಪ್ರಾದೇಶಿಕ ಸೈನ್ಯ ಅದರ ಆಡಳಿತ ವ್ಯವಸ್ಥೆ ಬಹಳ ದಕ್ಷವಾಗಿದ್ದಿತು. ಪ್ರತಿಯೊಂದು ಆಡಳಿತ ವಿಭಾಗದಲ್ಲೂ ಒಬ್ಬ ಠಾಣಾದಾರ್, ಒಬ್ಬ ಗುರಿಕಾರ, ಒಬ್ಬ ಶಿರಸ್ತೆದಾರ, ಮೂವರು ಗುಮಾಸ್ತರು, ಹೋಬಳಿದಾರರು, ದಫೇದಾರರು, ಓಲೆಕಾರರು, ಒಬ್ಬ ಕೊಂಬಿನವನು, ಒಬ್ಬ

ತಮಟೆಯವನು ಇರುತ್ತಿದ್ದರು. ಓಲೆಕಾರರ ಸಂಖ್ಯೆ ೧೦೦ ರಿಂದ ೪೦೦ ರವರೆಗೆ ಆಯಾ ಪ್ರದೇಶದ ವಿಸ್ತೀರ್ಣವನ್ನವಲಂಬಿಸಿ ಇರುತ್ತಿದ್ದಿತು. ಆರು ಜನ ಓಲೆಕರರ ಮೇಲೆ ಒಬ್ಬ ದಫೇದಾರನು ೫೦ ದಫೇದಾರರ ಮೇಲೆ ಒಬ್ಬ ಹೋಬಳಿದಾರನು ಇರುತ್ತಿದ್ದರು. ಈ ಎಲ್ಲ ಸೈನಿಕ ಸಿಬ್ಬಂದಿಯ ಪ್ರಮುಖ ಕರ್ತವ್ಯವೆಂದರೆ ತಮ್ಮ ಪ್ರದೇಶದಲ್ಲಿ ಸುಖ ಶಾಂತಿಯನ್ನು, ಕಾನೂನನ್ನು ಪಾಲಿಸಿಕೊಂಡು ಬರುವುದು ಮತ್ತು ಆ ಪ್ರದೇಶದಲ್ಲಿರುವ ಬೊಕ್ಕಸವನ್ನು ಕಾಯುವುದು – ಅದನ್ನು ಹಸ್ತಾಂತ್ರದ ಕಾವಲು ಕಟ್ಟಳೆ ಎಂದು ಕರೆಯುತ್ತಿದ್ದರು. ಇದಲ್ಲದೆ ಯುದ್ಧದ ಸಮಯದಲ್ಲಿ ಶಸ್ತ್ರಾಸ್ತ್ರಗಳೊಡನೆ ಇವರು ಯುದ್ಧಕ್ಕೆ ಹೊರಡಬೇಕಾಗುತ್ತಿತ್ತು. ಹೀಗೆ ಈ ಸೈನಿಕ ವಿಭಾಗದವರು ಯುದ್ಧದ ಸಮಯದಲ್ಲಿ ಮಾತ್ರವಲ್ಲದೆ ನಾಗರಿಕ ಹಾಗೂ ಸೈನಿಕ ಕರ್ತವ್ಯಗಳನ್ನು ಸಮಾಜದಲ್ಲಿ ನಿರ್ವಹಿಸಬೇಕಾಗಿರುತ್ತಿದ್ದುದರಿಂದ ಸಮಾಜದಲ್ಲಿ ಅವರಿಗೆ ಹೆಚ್ಚಿನ ಸ್ಥಾನಮಾನಗಳಿದ್ದವು. ನಾಗರಿಕ ಮತ್ತು ಸೈನಿಕ ವಿಭಾಗಗಳು ಅಷ್ಟೊಂದು ಪ್ರಮುಖವಾಗಿ ಬೇರ್ಪಟ್ಟಿರಲಿಲ್ಲ.

ಸರ್ಕಾರದ ಅಧಿಕಾರಿಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವಾಗ ಕೆಲ ಅರ್ಹತೆಗಳನ್ನು ಅವರು ಹೊಂದಿರುವರೋ ಇಲ್ಲವೋ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸ ಲಾಗುತ್ತಿತ್ತು. ಸರ್ಕಾರದಲ್ಲಿ ಅಧಿಕಾರಿಯಾಗಿ ಸೇರ ಬಯಸುವವನು ಒಳ್ಳೆಯ ಜಾಣನಾಗಿರಬೇಕಾಗಿದ್ದಿತು. ಜಾಣರಾಗಿದ್ದವರು ಸಹ, ಪ್ರಾಮಾಣಿಕರಾಗಿರುವುದಿಲ್ಲ. ಅವರು ತಮ್ಮ ಅಪ್ರಾಮಾಣಿಕತನವನ್ನು ತಮ್ಮ ಜಾಣತನದಿಂದ ಮುಚ್ಚಿಬಿಡುತ್ತಾರೆ. ಆದ್ದರಿಂದ ಚಿಕ್ಕದೇವರಾಜ ಒಡೆಯರು ತಮ್ಮ ಆಡಳಿತಾಧಿಕಾರಿಗಳು ಪ್ರಾಮಾಣಿಕರಾಗಿರುವ ಬಗ್ಗೆ ಹೆಚ್ಚಿನ ಗಮನಹರಿಸುತ್ತಿದ್ದರು. ಇವೆರಡರ ಜೊತೆಗೆ ಅಧಿಕಾರಿಗಳು ದಕ್ಷರೂ ಕೂಡ ಆಗಿರಬೇಕಾಗುತ್ತಿತ್ತು. ಸರ್ಕಾರದ ಅಧಿಕಾರಿಗಳು ಅಪ್ರಾಮಾಣಿಕರು, ಲಂಚಗುಳಿಗಳು ಆಗದಂತೆ ಹೆಚ್ಚಿನ ಗಮನವನ್ನು ಹರಿಸುತ್ತಿದ್ದರು. ಹೀಗಾಗಿ ಲಂಚಗುಳಿತನವನ್ನು ಬಹಳ ದಕ್ಷ ರೀತಿಯಿಂದ ಹತ್ತಿಕ್ಕಲಾಗಿತ್ತು. ಸರ್ಕಾರದ ಅಧಿಕಾರಿಗಳು ಬಹಳವೇ ಮಿತವ್ಯಯಿಗಳಾಗಿರುತ್ತಿದ್ದರು.

ಇನ್ನು ಸರ್ಕಾರದ ಅಧಿಕಾರಿಗಳ ಸಂಬಳದ ವಿಷಯಕ್ಕೆ ಬಂದರೆ ಹಿರಿಯ ಅಧಿಕಾರಿಗಳಾದ ಸುಭಾದಾರ್, ಶಿರಸ್ತೆದಾರ್, ಕಿಲ್ಲೆದಾರ್ ಮೊದಲಾದವರ ಸಂಬಳವು ಸಾಕಷ್ಟು ದೊಡ್ಡ ಪ್ರಮಾಣದಲ್ಲಿದ್ದು ಅವರವರ ಕಾರ್ಯಭಾರ ಮತ್ತು ಜವಾಬ್ದಾರಿಗಳ ಮೇಲೆ ಆಧಾರ ಪಟ್ಟಿರುತ್ತಿತ್ತು. ಅವರ ಸಂಬಳವನ್ನು ಅರ್ಧ ಹಣದ ರೂಪದಲ್ಲಿಯೂ ಉಳಿದರ್ಧ ದವಸ ಧಾನ್ಯಾದಿ ಬೇರೆ ರೂಪದಲ್ಲಿಯೂ ಕೊಡಲಾಗುತ್ತಿತ್ತು. ಕಂದಾಚಾರದ ವಿಭಾಗದ ಓಲೆಕಾರರ ಸಂಬಳವು ಅರ್ಧ ವರಹದಿಂದ ಒಂದು ವರಹದವರೆಗೆ ಇರುತ್ತಿದ್ದು ಅರ್ಧ ಸಂಬಳವನ್ನು ಹಣದ ರೂಪದಲ್ಲಿಯೂ

ಉಳಿದರ್ಧವನ್ನು ಬೇರೆ ರೂಪದಲ್ಲಿಯೂ ಕೊಡಲಾಗುತ್ತಿತ್ತು. ಆ ಉಳಿದ ಅರ್ಧ ಭಾಗವು ಅವರಿಗೆ ಕೊಡ ಮಾಡಿದ್ದ ಜಮೀನಿನ ಉತ್ಪನ್ನಗಳಿಂದ ಬರುವುದಾಗಿದ್ದಿತು. ಕಂದಾಚಾರ ವಿಭಾಗವನ್ನು ಹೆಚ್ಚು ಆಕರ್ಷಕ ಮಾಡುವ ದೃಷ್ಟಿಯಿಂದ ಆ ವಿಭಾಗದ ಓಲೆಕಾರರಿಗೆ 'ಹಿಟ್ಟು ಬಿಟ್ಟು' (ಬಲವಂತದ ಕೂಲಿ ಕೆಲಸ) ಕಾಣಿಕೆ, ಕಡ್ಡಾಯ, ಮನೆತೆರಿಗೆ ಮೊದಲಾದವುಗಳಿಂದ ವಿನಾಯಿತಿಯನ್ನು ಕೊಡಲಾಗುತ್ತಿತ್ತು. ಗೂಢಚಾರ ಪದ್ಧತಿಯು ವ್ಯವಸ್ಥಿತವಾಗಿದ್ದು ಅದರಲ್ಲಿ ಕೊತ್ವಾಲ, ಶಾನುಭೋಗರು, ಪೇಟೆಶೆಟ್ಟಿ, ಯಜಮಾನ, ದೇಶದ ಶಾನುಭೋಗ ಎಂದು ಕರೆಯಲ್ಪಡುವವರು, ಪ್ರಾದೇಶಿಕ ಶಾನುಭೋಗ, ಪತ್ರಗಳನ್ನು ಕೊಂಡೊಯ್ಯುವ ಛಲವಾದಿ, ದಂಡಿಯವನು, ಕಹಳೆಯವನು, ಮದ್ದಲೆಯವನು, ಕಳ್ಳಭಂಟರೆಂದು ಕರೆಯಲ್ಪಡುವ ಗೂಢಚಾರರು ಮತ್ತು ಊಳಿಗದವರು ಇರುತ್ತಿದ್ದರು. ಇವರು ಬೇರೆ ಬೇರೆ ಕೋಮಿನವರು ತಮ್ಮ ಎಲ್ಲೆಗಳನ್ನು ಮೀರದಂತೆಯೂ, ಕಳ್ಳತನ ದರೋಡೆ ಮೊದಲಾದವು ಸಂಭವಿಸದಂತೆಯೂ ವ್ಯಾಪಾರಿಗಳು ಅವರಿಗೆ ವಿಧಿಸಿರುವ ಕಟ್ಟಳೆಗಳನ್ನು ಮೀರದಂತೆ ತಮ್ಮ ವ್ಯಾಪಾರವನ್ನು ಸಾಗಿಸಿಕೊಂಡು ಹೋಗುವಂತೆಯೂ ಕಾನೂನು ಭಂಗ ಮಾಡಿದವರನ್ನು ಶಿಕ್ಷೆಗೆ ಗುರಿಪಡಿಸುವಂತೆಯೂ ನೋಡಿಕೊಳ್ಳುತ್ತಿದ್ದರು. ರಾತ್ರಿಯ ವೇಳೆ ಗಸ್ತಿ ತಿರುಗುವ ಪದ್ಧತಿ ಇದ್ದಿತು. ಕೊತ್ವಾಲ್, ಪೇಟೆಶೆಟ್ಟಿ ಮತ್ತು ಯಜಮಾನರಿಗೆ ಚಿಕ್ಕಮಟ್ಟ ಅಪರಾಧಗಳಿಗೆ ದಂಡವಿಧಿಸುವ ನ್ಯಾಯಾಂಗ ಅಧಿಕಾರವಿದ್ದು ದೊಡ್ಡ ಅಪರಾಧಗಳನ್ನು ರಾಜನ ಗಮನಕ್ಕೆ ತರಬೇಕಾಗುತ್ತಿದ್ದಿತು.

ಸಹಸ ರಾಜರು ತಮಗೆ ಪ್ರಾದೇಶಿಕ ಅಧಿಕಾರಿಗಳಿಂದ ಬರಬೇಕಾದ ಕಪ್ಪಕಾಣಿಕೆಗಳ ಬಗ್ಗೆಯೂ, ಸಾಮಂತರಿಂದ ಬರಬೇಕಾದ ವರಮಾನದ ಕಡೆಯೂ ಗಮನಹರಿಸುತ್ತಾರೆ. ಹಳ್ಳಿಯ ಆರ್ಥಿಕ ವ್ಯವಸ್ಥೆ ಮತ್ತು ವರಮಾನದ ಕಡೆ ಗಮನ ಹರಿಸುವುದು ವಿರಳ. ಆದರೆ ಚಿಕ್ಕದೇವರಾಜ ಒಡೆಯರ ಆಡಳಿತದಲ್ಲಿ ಹಳ್ಳಿಯು ಆರ್ಥಿಕ ವ್ಯವಸ್ಥೆಯ ಅತ್ಯಂತ ಪ್ರಮುಖ ಘಟಕವಾಗಿದ್ದಿತು. ಈ ರಾಜನು ಪರಂಪರಾಗತವಾಗಿ ಬಂದ, ಹಾಗೂ ಮಧ್ಯದಲ್ಲಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿದ್ದ ಹಳ್ಳಿಯ ಆರ್ಥಿಕ ಆಡಳಿತದ ಬುನಾದಿಯಾಗಿದ್ದ ಬಾರಾ ಬಲೂತಿ ಪದ್ಧತಿಯನ್ನು ಪುನರುಜ್ಜೀವನಗೊಳಿಸಿ ತನ್ಮೂಲಕ ಹಳ್ಳಿಯ ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸಿದ್ದೇ ಅಲ್ಲದೆ ತನ್ನ ಅಧೀನಕ್ಕೆ ಸಂಪೂರ್ಣವಾಗಿ ತೆಗೆದುಕೊಂಡನು. ಬಾರಾಬಲೂತಿ ಎಂದರೆ ಹಳ್ಳಿಯ ಹನ್ನೆರಡು ಘಟಕಾಂಶಗಳಾದ ಕಸುಬುಗಳನ್ನೊಳಗೊಂಡ ವ್ಯವಸ್ಥೆಯಾಗಿದ್ದಿತು. ಅದರ ಹೆಸರೇ ಸೂಚಿಸುವಂತೆ ಈ ವ್ಯವಸ್ಥೆಯಲ್ಲಿ ಹಳ್ಳಿಯ ಜೀವನಕ್ಕೆ ಬೇಕಾದ ಕಸುಬುಗಳ ಆಡಳಿತ ವ್ಯವಸ್ಥೆ ಇದ್ದಿತು. ಅವೆಂದರೆ : ೧. ಗೌಡ, ೨. ಶಾನುಭೋಗ, ೩. ಪಂಚಾಂಗದ ಬ್ರಾಹ್ಮಣ, ೪. ಕಮ್ಮಾರ (ಕಬ್ಬಿಣದ

ಕೆಲಸದವನು), ೫. ಅಕ್ಕಸಾಲೆ (ಬಂಗಾರದ ಕೆಲಸದವನು), ೬ ಕುಂಬಾರ, ೭ ಅಗಸ, ೮. ಕೆಲಸಿ (ಹಜಾಮ), ೯. ತೋಟಿ (ಕಸ ಬಳಿಯುವವನು), ೧೦. ತಳವಾರ (ಕಾವಲುಗಾರ), ೧೧. ಕೆರೆ ನೀರುಗಂಟಿ (ಕೆರೆಯ ನೀರನ್ನು ನಿಗದಿತ ಪ್ರಮಾಣದಲ್ಲಿ ಹೊಲಗಳಿಗೆ ಹರಿಸುವವನು) ಮತ್ತು ೧೨. ಓಜರವನು (ಬಡಿಗ) ಇವರಿಗೆ ಕೊಡುವ ರುಸುಮ್ (ಶುಲ್ಕ)ಅನ್ನು ಚಿಕ್ಕದೇವರಾಜರ ಆದೇಶದ ಮೇರೆಗೆ ಅವರವರ ಅಂತಸ್ತಿಗೆ ಅನುಸರಿಸಿ ನಿಗದಿ ಪಡಿಸಲಾಗುತ್ತಿತ್ತು. ಅವರ ರುಸುಮನ್ನು ಸಹಸ ಹಣದ ರೂಪದಲ್ಲಿ ಕೊಡದೆ ಬೇರೆ ರೂಪದಲ್ಲಿ ಮುಖ್ಯವಾಗಿ ಧಾನ್ಯ ರೂಪದಲ್ಲಿ ಕೊಡಲಾಗುತ್ತಿದ್ದು ಕಾಲುಬಳ್ಳ ಅಥವಾ ಅರ್ಧ ಸೇರಿನ ಅಳತೆಗಳಲ್ಲಿರುತ್ತಿದ್ದಿತು. ಗೌಡ ಮತ್ತು ಶಾನುಭೋಗರಿಗೆ ಇದಲ್ಲದೆ ಹಳ್ಳಿಗರು ಬೆಳೆದ ಬೆಳೆಯಲ್ಲಿ ಒಂದು ಹೆಚ್ಚಿನ ಭಾಗವನ್ನು ಕೊಡಲಾಗುತ್ತಿದ್ದಿತು. ಗೌಡನಿಗೆ ಮನೆತೆರಿಗೆ, ಹಿಟ್ಟು ಬಿಟ್ಟು, ಕಾಣಿಕೆ ಮತ್ತು ಕಡ್ಡಾಯಗಳಿಂದ ವಿನಾಯಿತಿ ಕೊಡಲಾಗಿದ್ದಿತು. ಶಾನುಭೋಗನ ಅರ್ಧ ಸಂಬಳವನ್ನು ಹಣದ ರೂಪದಲ್ಲಿಯೂ ಕೊಡಲಾಗುತ್ತಿದ್ದಿತು. ಇದಲ್ಲದೇ ಅವನಿಗೆ ಹೆಚ್ಚಿನ ಒಂದು ಶುಲ್ಕವನ್ನು ಪ್ರತಿಯೊಬ್ಬ ರೈತನು ಕೊಡಬೇಕಾಗುತ್ತಿದ್ದಿತು. ಅದು ಆ ರೈತನ ಅಂತಸ್ತನ್ನು ಅನುಸರಿಸಿ ೧/೪, ೨/೪, ೩/೪ ಅಥವಾ ಒಂದು ಹಣವಾಗಿರುತ್ತಿತ್ತು. ಇದು ಆ ಶಾನುಭೋಗನು ಹಳ್ಳಿಯ ಕಡತಗಳಲ್ಲಿ ಆ ರೈತನ ಬಗ್ಗೆ ನಮೂದಿಸಬೇಕಾದ ವಿವರಗಳ ಸಲುವಾಗಿ ಕೊಡುವುದಾಗಿದ್ದು ಇದನ್ನು ಕಡತದ ಕಾಣಿಕೆಯ ಹಣ ಎಂದು ಕರೆಯಲಾಗುತ್ತಿತ್ತು. ಉಳಿದ ಕುಶಲ ಕರ್ಮಿಗಳಾದ ಬಡಿಗ, ಹಜಾಮ, ಕುಂಬಾರ, ಅಗಸ, ಕಸ ಗುಡಿಸುವವನು, ಕಮ್ಮಾರ, ತಳವಾರ ಮೊದಲಾದವರಿಗೆ ಪ್ರತಿಯೊಬ್ಬ ರೈತನು ತೆನೆಗಳಿಂದ ಕೂಡಿದ ಒಂದು ಹೊರೆಯನ್ನು ಮತ್ತು ಕೊಳಗದಲ್ಲಿ ಧಾನ್ಯವನ್ನು ಕೊಡಬೇಕಾಗುತ್ತಿದ್ದಿತು. ಕಸ ಗುಡಿಸುವವರು ಮತ್ತು ತಳವಾರರನ್ನುಳಿದು ಪ್ರತಿಯೊಬ್ಬ ರೈತನಿಂದ ಅವನ ಮನೆಯ ಜನಸಂಖ್ಯೆಯ ಆಧಾರದ ಮೇರೆಗೆ ನಿಗದಿತ ಪ್ರಮಾಣದಲ್ಲಿ ಧಾನ್ಯವನ್ನು ಪಡೆಯುವ ಅಧಿಕಾರವಿದ್ದಿತು. ಇದಲ್ಲದೆ ಬ್ರಾಹ್ಮಣ, ಪುರೋಹಿತ, ಶಾನುಭೋಗ, ಕಸಗುಡಿಸುವವನು ಮತ್ತು ನೀರುಗಂಟಿ ಇವರಿಗೆ ಮಾನ್ಯದ ಭೂಮಿಗಳನ್ನು ಅಂದರೆ ತೆರಿಗೆ ರಹಿತ ಭೂಮಿಗಳನ್ನು ಕೊಡಲಾಗುತ್ತಿದ್ದಿತು. ಭೂ ಕಂದಾಯದ ಒಂದು ವಿಶೇಷವೆಂದರೆ ಭೂಮಿಯಲ್ಲಿ ಬೆಳೆದ ಪೈರುಗಳೇ ಅಲ್ಲದೆ ಹಣ್ಣುಗಳನ್ನು ಕೊಡುವ ಮರಗಳ ಮೇಲೆ ಕೂಡ ಕಂದಾಯ ವಿಧಿಸಲಾಗುತ್ತಿದ್ದಿತು. ತೆಂಗು ಅಡಿಕೆಗಳ ಮಾತಂತಿರಲಿ, ಬಾಳೆ, ಮಾವು, ಹಲಸು, ಹುಣಸೆಹಣ್ಣು ಮೊದಲಾದವುಗಳ ಮೇಲೆ ಕೂಡ ತೆರಿಗೆ ವಿಧಿಸಲಾಗುತ್ತಿದ್ದಿತು. ಭೂ ಕಂದಾಯವನ್ನು ರಾಜನ ಆಜ್ಞೆಯಂತೆ ಕಂದಾಯ ಅಧಿಕಾರಿಗಳಿಂದ ವರ್ಷಕ್ಕೊಮ್ಮೆ ವಸೂಲು ಮಾಡಲಾಗುತ್ತಿತ್ತು.

ಪ್ರಾದೇಶಿಕ ಸುಭಾದಾರನು ತನ್ನ ಪ್ರದೇಶದಲ್ಲಿ ಮುಂದಿನ ವರ್ಷಗಳಲ್ಲಿ ಹೆಚ್ಚು ಕಂದಾಯ ಬರುವಂತೆ ಕ್ರಮಗಳನ್ನು ಕೈಗೊಳ್ಳುವುದಾಗಿ ಮುಚ್ಚಳಿಕೆ ಬರೆದು ಕೊಡಬೇಕಾಗಿತ್ತು. ಚಿಕ್ಕದೇವರಾಜ ಒಡೆಯರ ಆಡಳಿತದ ೮೪ ಗಡಿಗಳಲ್ಲಿ ಸೈನಿಕ ಮತ್ತು ನಾಗರಿಕ ಖರ್ಚುಗಳಾದ ಅಠವಣೆ, ಕಂದಾಚಾರ ಹಾಗೂ ದೇವದಾಯ, ಬ್ರಹ್ಮದೇಯ ಮೊದಲಾದ ಖರ್ಚುಗಳನ್ನುಳಿದು ವಾರ್ಷಿಕ ಏಳುಲಕ್ಷ ಇಪ್ಪತ್ತು ಸಾವಿರ ವರಹಗಳಷ್ಟು ಆದಾಯವಿದ್ದಿತೆಂದು ಅಂದಾಜು ಮಾಡಲಾಗಿದೆ. ಪ್ರತಿನಿತ್ಯ ಒಂದು ಸಾವಿರ ವರಹಗಳನ್ನೊಳಗೊಂಡ ಎರಡು ಮೂಟೆಗಳಷ್ಟು ವರಹಗಳನ್ನು ಬೊಕ್ಕಸಕ್ಕೆ ಸೇರಿಸಬೇಕೆಂದು ನಿಯಮವಿದ್ದಿತು. ಈ ನಿಯಮವನ್ನು ಎಷ್ಟು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು ಎಂದರೆ ಎಂದಾದರೊಮ್ಮೆ ಅಷ್ಟು ಹಣ ಬೊಕ್ಕಸಕ್ಕೆ ಸೇರದಿದ್ದರೆ ರಾಜನು ಆ ದಿನ ಊಟ ಮಾಡುತ್ತಿರಲಿಲ್ಲ. ಸರ್ಕಾರವು ಸರಿಯಾಗಿ ನಡೆಯಬೇಕಾದರೆ, ಬಲಿಷ್ಠ ಸೈನ್ಯವನ್ನು ಹೊಂದಿರಬೇಕಾದರೆ ಹಣದ ಮಹತ್ವ ಎಷ್ಟಿತ್ತೆಂಬುದನ್ನು ಮನಗಂಡ ಈ ರಾಜನು ಅಷ್ಟು ಕಟ್ಟುನಿಟ್ಟಾಗಿ ತೆರಿಗೆಯನ್ನು ವಸೂಲು ಮಾಡುತ್ತಿದ್ದನು. ಈತನಲ್ಲಿ ಹೆಚ್ಚು ಹಣ ಸಂಗ್ರಹವಾಗಿದ್ದಿತೆಂದು ತೋರಿಸುವ ಒಂದು ನಾಣ್ನುಡಿ ಇದೆ. ಅದರ ಪ್ರಕಾರ ಈ ರಾಜನಿಗೆ ನವಕೋಟಿ ನಾರಾಯಣ ಎಂಬ ಬಿರುದು ಇದೆ.

ಆಡಳಿತ ಯಂತ್ರವು ಸರಿಯಾಗಿ ನಡೆಯಬೇಕಾದರೆ ವ್ಯವಸಾಯ ಒಂದೇ ಅಲ್ಲದೆ ವ್ಯಾಪಾರ ವಾಣಿಜ್ಯಗಳು, ಸರಕು ಸಾಗಾಣಿಕೆಗಳು, ರಸ್ತೆಗಳು ಅವುಗಳ ಮೇಲೆ ಸಾಗುವ ವಸ್ತುಗಳ ರಕ್ಷಣೆ ಮೊದಲಾದವುಗಳ ಪ್ರಾಮುಖ್ಯತೆಯನ್ನು ಚೆನ್ನಾಗಿ ಅರಿತಿದ್ದ ಚಿಕ್ಕದೇವರಾಜ ಒಡೆಯರು ಭೂಮಿಯ ಉತ್ಪಾದನೆ ಹೆಚ್ಚುವುದರ ಜೊತೆಗೆ ಅದರ ವಿತರಣೆಗೆ ಬೇಕಾಗುವ ತೂಕ ಮತ್ತು ಅಳತೆಗಳ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಿದನು. ಆವರೆಗೆ ಅನೇಕ ರೀತಿಯ ತೂಕ ಅಳತೆಗಳಿದ್ದು ಕೊಳಗ ಒಂದೇ ಎಂಟು ಸೇರಿನದ್ದಾಗಿದ್ದರೆ, ಬೇರೆಡೆ ೧೨, ೧೫, ೧೬ ಸೇರುಗಳದ್ದಾಗಿದ್ದಿತು. ಇದನ್ನು ಸರಿಪಡಿಸಿ ಕೊಳಗಕ್ಕೆ ರಾಜಮುದ್ರೆಯನ್ನು ಬಿತ್ತಿಸಿ ಏಕ ರೀತಿಯ ಅಳತೆ ಮತ್ತು ತೂಕಗಳನ್ನು ಜಾರಿಗೆ ತಂದನು. ಹೀಗಾಗಿ ಏಕ ರೀತಿಯ 'ಮಣ'ದ ಬಳಕೆ ಜಾರಿಗೆ ಬಂದು ಅದರ ಅರ್ಧ ೧/೪, ೧/೮ ಇತ್ಯಾದಿ ತೂಕಗಳಿದ್ದವು. ಸೇರಿಗ ಅರ್ಧ, ಕಾಲು ೧/೮, ೧/೧೬ ಮೊದಲಾದ ಭಾಗಗಳ ಅಳತೆ ಮತ್ತು ತೂಕಗಳಿದ್ದವು. ರಾಜಮುದ್ರೆ ಇರುವ ಬಟ್ಟುಗಳನ್ನೇ ಅಥವಾ ಅಳತೆ ಪಾತ್ರೆಗಳನ್ನೇ ಬಳಸಬೇಕಾಗುತ್ತಿದ್ದಿತು.

ಚಿಕ್ಕದೇವರಾಜ ಒಡೆಯರು ತಮ್ಮ ರಾಜ್ಯದಲ್ಲಿ ಕೈಗಾರಿಕೆಯನ್ನು ಬಲಪಡಿಸುವ ಸಲುವಾಗಿ ಅನೇಕ ಕ್ರಮಗಳನ್ನು ಕೈಗೊಂಡರು. ಇವರು ಪ್ರಮುಖವಾಗಿ ಕಬ್ಬಿಣ ಮತ್ತು ಬಟ್ಟೆಯ ಉದ್ಯಮಕ್ಕೆ ಹೆಚ್ಚಿನ ಮಹತ್ವವನ್ನು ಕೊಟ್ಟು ಬೆಳೆಸಿದರು.

ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಉತ್ತರಾರ್ಧ ಅಂದರೆ ೧೬೮೬-೧೭೦೪ರವರೆಗೆ ಯುದ್ಧಗಳು ಹೆಚ್ಚಾಗಿ ನಡೆಯದೆ ಶಾಂತಿಯಿಂದ ಕೂಡಿದ್ದುದಾಗಿದ್ದು ಗೆದ್ದ ಪ್ರದೇಶಗಳನ್ನು ಕ್ರೋಡೀಕರಿಸುವುದು. ಕ್ರೋಡೀಕೃತ ಪ್ರದೇಶಗಳನ್ನು ಸಂಸ್ಥಾನದ ಇತರ ಪ್ರದೇಶಗಳೊಂದಿಗೆ ಎಲ್ಲ ರೀತಿಯಿಂದ ವಿಲೀನಗೊಳಿಸುವುದು ಮೊದಲಾದ ಕಾರ್ಯಗಳು ಜರುಗಿದವು. ಆವರೆಗೆ ಇದ್ದ ಕಾನೂನುಗಳು, ಆರ್ಥಿಕ ವ್ಯವಸ್ಥೆ ಮೊದಲಾದವು ಇನ್ನು ಸ್ಪಷ್ಟವಾದ ರೂಪತಾಳಿ ಆಡಳಿತ ಬಿಗಿಯಾಗಿ ಬೊಕ್ಕಸಕ್ಕೆ ಬರಬೇಕಾದ ಹಣ ಸೋರಿ ಹೋಗುವುದು, ಅಪವ್ಯಯವಾಗುವುದು ಮೊದಲಾದವು ನಿಂತು ಹೋಗಿ ಆಡಳಿತದಲ್ಲಿ ದಕ್ಷತೆಯೇ ಅಲ್ಲದೆ ಆರ್ಥಿಕವಾಗಿಯೂ ಸಂಸ್ಥಾನವು ಪ್ರಬಲಗೊಂಡಿತು. ಪ್ರಜೆಗಳಿಗೆ ತೆರಿಗೆಯ ವಿಷಯದಲ್ಲಾಗಲಿ, ಬೇರಾವುದೇ ವಿಷಯದಲ್ಲಾಗಲಿ ಶತ್ರುಭಯವಾಗಲಿ ಇಲ್ಲದೇ ರಾಜನಿಗೆ ತನ್ನ ಪ್ರಜೆಗಳ ಸಂಪೂರ್ಣ ಸಹಕಾರ ಸಿಕ್ಕಿತು. ವಿಜಯನಗರದ ಪತನದ ನಂತರ ಅನೇಕ ಚಿಕ್ಕ ಚಿಕ್ಕ ಪಾಳೆಯ ಪಟ್ಟುಗಳಲ್ಲಿ ಒಂದಾಗಿದ್ದ ಮೈಸೂರು ಸಂಸ್ಥಾನವು ಈ ಕಾರಣದಿಂದಾಗಿ ಚಿಕ್ಕದೇವರಾಜ ಒಡೆಯರ ಆಳ್ವಿಕೆಯ ಕಾಲಕ್ಕೆ ದಕ್ಷಿಣ ಭಾರತದಲ್ಲಿಯೇ ಒಂದು ಪ್ರಧಾನ ಸಂಸ್ಥಾನವಾಗಿ ಬೆಳೆಯಿತು ಮತ್ತು ಅದರ ರಾಜನು ನವಕೋಟಿ ನಾರಾಯಣನಾದನು.

ಅಠಾರ ಕಚೇರಿಯ ಪ್ರಸ್ತಾಪ ಮಾಡದೆ ಚಿಕ್ಕದೇವರಾಜ ಒಡೆಯರ ಆಡಳಿತದ ಕತೆ ಮುಗಿಯುವುದಿಲ್ಲ. ಔರಂಗಜೇಬನ ಆಸ್ಥಾನಕ್ಕೆ ಹೋಗಿದ್ದ ಮೈಸೂರಿನ ರಾಯಭಾರಿಗಳು ೧೭೦೦ರಲ್ಲಿ ಹಿಂದಿರುಗಿದ ಮೇಲೆ ಮುಗಲರ ಆಡಳಿತದಿಂದ ಪ್ರಭಾವಿತರಾಗಿ ಅಠಾರ ಕಚೇರಿಯ ವ್ಯವಸ್ಥೆಯನ್ನು ಮೈಸೂರು ಸಂಸ್ಥಾನದಲ್ಲೂ ಪ್ರವೇಶ ಪಡಿಸಿದರು. ಅಠಾರ ಕಚೇರಿ ಎಂದ ಕೂಡಲೇ ಮುಗಲರ ಆಡಳಿತವನ್ನು ಯಥಾವತ್ತಾಗಿ ನಕಲು ಮಾಡಿದರೆಂದು ಭಾವಿಸಿದರೆ ಅದಕ್ಕಿಂತ ದೊಡ್ಡ ತಪ್ಪು ಮತ್ತೊಂದಿರುವುದಿಲ್ಲ. ಆಡಳಿತದಲ್ಲಿ ಜಾಣರಾಗಿದ್ದ ಚಿಕ್ಕದೇವರಾಜ ಒಡೆಯರು ತಮ್ಮ ರಾಜ್ಯದ ಪರಿಸ್ಥಿತಿಗೂ ಆಡಳಿತಕ್ಕೂ ಸರಿಹೊಂದುವಂತೆ ಆಡಳಿತವನ್ನು ೧೮ ವಿಭಾಗಗಳಾಗಿ, ಅಂದರೆ ಕಚೇರಿಗಳಾಗಿ ವಿಂಗಡಿಸಿ ತಮ್ಮ ಹೊಸ ಅಠಾರ ಕಚೇರಿಯನ್ನು ನಿರ್ಮಿಸಿಕೊಂಡರು. ಚಿಕ್ಕದೇವರಾಜ ಒಡೆಯರ ೧೮ ಕಚೇರಿಗಳ ವಿವರ ಇಂತಿದೆ. ಆ ಕಚೇರಿಗಳು ಮೊದಲು ಚಾವಡಿಗಳೆಂದು ಕರೆಯಲ್ಪಡುತ್ತಿದ್ದವು. ಅವುಗಳಲ್ಲಿ ಮೊದಲನೆಯದು, ನಿರೂಪದ ಚಾವಡಿ. ಇದು ರಾಜನಿಗೆ ಅಹವಾಲುಗಳನ್ನು ತಿಳಿಯಪಡಿಸಿ ಅವನಿಂದ ಸೂಕ್ತ ಪರಿಹಾರವನ್ನು ದಾಖಲಿಸಿ ಸಂಬಂಧಪಟ್ಟವರಿಗೆ ಅದನ್ನು ತಿಳಿಸುವ ಕೆಲಸ ಮಾಡುತ್ತಿದ್ದಿತು. ಎರಡನೆಯದು, ಆಯಕಟ್ಟಿನ ಚಾವಡಿ. ಇದು "ಗಡಿಗಳ ಸೀಮೆಯ ಆದಾಯ ವ್ಯಯದ ಲೆಕ್ಕ,

ಸೈನ್ಯದ ಲೆಕ್ಕಗಳನ್ನು ನೋಡಿಕೊಂಡು ಕೇಂದ್ರ ಖಜಾನೆಯಾದ ತೋಷಿಖಾನೆಯ ಲೆಕ್ಕವನ್ನು ನೋಡಿಕೊಳ್ಳುವುದೇ ಅಲ್ಲದೆ "ಕರ್ತರ ಖಾಸ ಆದಾಯ ವ್ಯಯದ ಲೆಕ್ಕ"ವನ್ನು ಕೂಡ ನೋಡಿಕೊಳ್ಳುತ್ತಿತ್ತು. ಇನ್ನು ಮೂರನೆಯ ಚಾವಡಿ ಮೈಸೂರು ಹೋಬಳಿ ವಿಚಾರದ ಚಾವಡಿ. ಇದು ಕಾವೇರಿಯ ದಕ್ಷಿಣಕ್ಕಿರುವ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ನಾಲ್ಕನೆಯದು ಪಟ್ಟಣದ ಹೋಬಳಿ ವಿಚಾರದ ಚಾವಡಿ. ಇದು "ಕಾವೇರಿಯ ಉತ್ತರಕ್ಕಿರುವ ಪ್ರದೇಶದ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಐದನೆಯದು ಸೀಮೆಯ ಕಂದಾಚಾರದ ಚಾವಡಿ. ಇದು ದಂಡಿನ ಮತ್ತು ನಾಗರಿಕ ಲೆಕ್ಕಪತ್ರಗಳನ್ನು ನೋಡಿಕೊಂಡು ಸೈನಿಕರಿಗೂ ಸರ್ಕಾರಿ ಅಧಿಕಾರಿಗಳಿಗೂ ಬೇಕಾದ ಸಾಮಗ್ರಿಗಳನ್ನೊದಗಿಸಿ ಶಸ್ತ್ರಾಸ್ತ್ರಗಳನ್ನು ಪೂರೈಸುತ್ತಿತ್ತು. ಆರನೆಯದು ಬಾಗಿಲ ಕಂದಾಚಾರದ ಚಾವಡಿ. ಇದು ರಾಜನ ಮತ್ತು ಪಾಳೆಗಾರರ ನಾಗರಿಕ ಮತ್ತು ಸೈನಿಕ ಲೆಕ್ಕಪತ್ರಗಳನ್ನು ನೋಡಿಕೊಳ್ಳುತ್ತಿತ್ತು. ಏಳನೆಯದು ಸುಂಕದ ಚಾವಡಿ. ಇದು ಇಡೀ ರಾಜ್ಯದಲ್ಲಿನ ಸುಂಕದ ವ್ಯವಸ್ಥೆಯನ್ನು ಆಮದು ಮತ್ತು ರಫ್ತುಗಳ ವ್ಯವಹಾರವನ್ನು ನೋಡಿಕೊಳ್ಳುತ್ತಿದ್ದಿತು. ಎಂಟನೆಯದು ಪೊಮ್ಮಿನ ಚಾವಡಿ. ಇದು ಬ್ರಾಹ್ಮಣರು ಮತ್ತಿತರ ವಿಶಿಷ್ಟ ಜನರಿಗೆ ನೀಡಲಾಗಿದ್ದ ತೆರಿಗೆ ರಿಯಾಯಿತಿಯ ವಿಚಾರವನ್ನು ನೋಡಿಕೊಳ್ಳುತ್ತಿತ್ತು. ಒಂಬತ್ತನೆಯದು ತೊಡಾಯದ ಚಾವಡಿ. ಇದೂ ಕೂಡ ಪೊಮ್ಮಿನ ಚಾವಡಿಯ ಕೆಲಸವನ್ನು ಶ್ರೀರಂಗಪಟ್ಟಣದಲ್ಲಿ ಮಾತ್ರ ಮಾಡುತ್ತಿತ್ತು. ಹತ್ತನೆಯದು ಪಟ್ಟಣದ ಹೋಬಳಿ ಅಷ್ಟಗ್ರಾಮದ ಚಾವಡಿ. ಇದು ಚಿಕ್ಕದೇವರಾಜ ನಾಲೆಯ ಕೆಳಗಡೆ ಹೊಸದಾಗಿ ನಿರ್ಮಿಸಿದ ಎಂಟು ಹೋಬಳಿಗಳ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಹನ್ನೊಂದನೆಯದು ಮೈಸೂರು ಹೋಬಳಿ ಅಷ್ಟಗ್ರಾಮದ ಚಾವಡಿ. ಇದು ದೇವನಾಲ ಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಿದ ಎಂಟು ಹೋಬಳಿಗಳ ಆಡಳಿತವನ್ನು ನೋಡಿಕೊಳ್ಳುತ್ತಿತ್ತು. ಈ ಎರಡು ಚಾವಡಿಗಳು ಕಾವೇರಿ ಮತ್ತು ಹೇಮಾವತಿ ಜಲಾನಯನ ಪ್ರದೇಶದಲ್ಲಿ ಕೆರೆಗಳು, ಕಟ್ಟೆಗಳು, ನಾಲೆಗಳು ಮೊದಲಾದವುಗಳ ಮೇಲ್ವಿಚಾರಣೆಯನ್ನು ಮಾಡಿಕೊಂಡು ಆ ಪ್ರದೇಶದಲ್ಲಿ ರೈತರು ಬೆಳೆದ ಬೆಳೆಯಲ್ಲಿ ಸರ್ಕಾರದ ಪಾಲಾದ ಅರ್ಧ ಬೆಳೆಯನ್ನು ಲೆಕ್ಕ ಮಾಡಿ ವಸೂಲು ಮಾಡುತ್ತಿದ್ದವು. ಹನ್ನೆರಡನೆಯದು ಬೆಣ್ಣೆಯ ಚಾವಡಿ. ಇದು ಅರಮನೆ ಪಶು ಸಂಪತ್ತನ್ನು ಸಂರಕ್ಷಿಸಿ ಅದರ ಉತ್ಪನ್ನವನ್ನು ಲೆಕ್ಕಮಾಡಿ ಸರಿಯಾಗಿ ವಿತರಣೆ ಮಾಡುವ ಜವಾಬ್ದಾರಿಯನ್ನು ಹೊತ್ತಿದ್ದಿತು. ಹದಿಮೂರನೆಯದು ಪಟ್ಟಣದ ಚಾವಡಿ. ಇದಕ್ಕೆ ಶ್ರೀರಂಗಪಟ್ಟಣದ ಜವಾಬ್ದಾರಿಯನ್ನು ಹೊರಿಸಲಾಗಿದ್ದಿತು. ಅಲ್ಲಿ ಶಾಂತಿ ಸುಭಿಕ್ಷೆಗಳನ್ನು ಕಾಪಾಡಿ ಕೋಟೆ ಕೊತ್ತಲಗಳನ್ನು ದುರಸ್ತಿ ಮಾಡುವ ಜವಾಬ್ದಾರಿ ಇದ್ದಿತು. ಹದಿನಾಲ್ಕನೆಯದು ಬೇಹಿನ

ಚಾವಡಿಯಾಗಿದ್ದು ಗೂಢಚಾರ, ಅಂಚೆವ್ಯವಸ್ಥೆಯನ್ನು ನೋಡಿಕೊಂಡು ರಾಜರ ನಿರೂಪಗಳನ್ನು ತಲುಪಿಸಬೇಕಾದವರಿಗೆ ತಲುಪಿಸಿ ರಾಜನಿಗೆ ರಾಜ್ಯದ ಎಲ್ಲ ಆಗು ಹೋಗುಗಳ ಬಗೆಗೆ ಮಾಹಿತಿ ನೀಡುತ್ತಿದ್ದಿತು. ಹದಿನೈದನೆಯದು ಸಮುಖ್ಖದ ಚಾವಡಿಯಾಗಿದ್ದು ಇದನ್ನು ಸೋಮರಾಜಯ್ಯ ಮತ್ತು ಅಪ್ಪರಾಜಯ್ಯ ಎಂಬ ಗುರಿಕಾರರು ರಾಜನ ನೇರ ಮೇಲ್ವಿಚಾರಣೆಯಲ್ಲಿ ನೋಡಿಕೊಳ್ಳುತ್ತಿದ್ದರು. ಇದು ರಾಜನ ವಂಶದವರು ಅವರ ಕೈಕೆಳಗಿನವರು, ರಾಜನ ಮನೆತನದವರು ಮೊದಲಾದವರ ಬಗ್ಗೆಯೂ ಅರಮನೆಯ ಖರ್ಚಿನ ಬಗ್ಗೆಯೂ ನೋಡಿ ಕೊಳ್ಳಬೇಕಾಗುತ್ತಿದ್ದಿತು. ಹದಿನಾರನೆಯದು ದೇವಸ್ಥಾನದ ಚಾವಡಿ. ಇದು ರಾಜ್ಯದಲ್ಲಿರುವ ಎಲ್ಲ ದೇವಸ್ಥಾನಗಳ ಆಡಳಿತವನ್ನು ನೋಡಿಕೊಳ್ಳಬೇಕಾಗುತ್ತಿತ್ತು. ಹದಿನೇಳನೆಯದು ಕಬ್ಬಿಣದ ಚಾವಡಿ. ಇದು ಕಚ್ಚಾ ಕಬ್ಬಿಣವನ್ನು ಕೊಂಡು ಬೇರೆ ಬೇರೆ ವಸ್ತುಗಳನ್ನು ತಯಾರಿಸಿ ಮಾರುವ ಜವಾಬ್ದಾರಿಯನ್ನು ಹೊಂದಿದ್ದಿತು. ಹದಿನೆಂಟನೆಯದು ಹೊಗೆಸೊಪ್ಪಿನ ಚಾವಡಿ. ಇದು ಶ್ರೀರಂಗಪಟ್ಟಣದಲ್ಲಿ ವ್ಯಾಪಾರವಾಗುತ್ತಿದ್ದ ಹೊಗೆಸೊಪ್ಪಿನ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿತ್ತು.

ಪ್ರತಿಯೊಂದು ಚಾವಡಿಯ ಮೇಲೆಯೂ ಗೊತ್ತುಗಾರನೆಂಬ ಒಬ್ಬ ಮೇಲ್ವಿಚಾರಕನು ಲೆಕ್ಕಪತ್ರಗಳನ್ನಿಡಲು ಮೂವರು ದಪ್ತರದವರು, ಕೆಲ ಗುಮಾಸ್ತೆಯರು ಎಲ್ಲವನ್ನು ದಾಖಲು ಮಾಡುವ ರಾಯಸದವರು ಪ್ರಮುಖ ಸೇವಕನಾದ ಒಬ್ಬ ದಫೇದಾರ ಅವ ಕೈಕೆಳಗೆ ಊಳಿಗದವರು, ಒಬ್ಬ ಗೊಲ್ಲ (ಸೇವಕ), ಒಬ್ಬ ಕಾವಲುಗಾರ, ದೀವಟಿಗೆಯವರು, ಮೊದಲಾದವರಿರುತ್ತಿದ್ದರು. ಇವರ ಸಂಬಳವು ಅವರವರ ಜವಾಬ್ದಾರಿಗೂ ಕಾರ್ಯಭಾರಕ್ಕೆ ತಕ್ಕಂತೆ ಇರುತ್ತಿದ್ದು ಸಂಬಳವನ್ನು ಅರ್ಧ ಹಣದ ರೂಪದಲ್ಲಿಯೂ ಉಳಿದರ್ಧ ಬೇರೆ ರೂಪದಲ್ಲಿಯೂ ಕೊಡಲಾಗುತ್ತಿತ್ತು. ಇವರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಕಟ್ಟೆಚ್ಚರವಹಿಸಬೇಕೆಂದು ರಾಜಾಜ್ಞೆ ಇದ್ದು ರಾಜನಿಗೆ ನೇರವಾಗಿ ವಿಷಯನ್ನು ತಲುಪಿಸುತ್ತಿದ್ದರು. ಹೀಗಾಗಿ ಆಡಳಿತದ ಯಾವ ಹಂತದಲ್ಲಿ ಅಸಮರ್ಥತೆ ಕಂಡು ಬಂದರೂ ಅದನ್ನು ತಕ್ಷಣ ಸರಿಪಡಿಸುವುದು ಸಾಧ್ಯವಾಗುತ್ತಿತ್ತು.

ಹೀಗೆ ಚಿಕ್ಕದೇವರಾಜ ಒಡೆಯರು ಕುರುಡಾಗಿ ಮುಗಲರ ಅಠಾರ ಕಚೇರಿ ವ್ಯವಸ್ಥೆಯನ್ನು ನಕಲು ಮಾಡಿಕೊಳ್ಳದೆ, ಆ ಹೆಸರನ್ನು ಮಾತ್ರ ಉಳಿಸಿಕೊಂಡು ತಮ್ಮ ಆಡಳಿತಕ್ಕೆ ಸರಿಹೊಂದುವಂತೆ ಅದನ್ನು ಮಾರ್ಪಡಿಸಿಕೊಂಡು, ಮುಗಲರ ಆ ಹೆಸರನ್ನು ಮಾತ್ರ ಧಾರಾಳವಾಗಿ ಬಳಸಿಕೊಂಡು ತಮ್ಮ ವರ್ಚಸ್ಸನ್ನು ಹೆಚ್ಚಿಸಿ ಕೊಂಡರು. ಇದು ಆಡಳಿತದ ಮತ್ತು ಮುತ್ಸದ್ದಿತನದ ಒಂದು ಉತ್ತಮ ನಿದರ್ಶನವಾಗಿದೆ.

ಈ ಎಲ್ಲ ವ್ಯವಸ್ಥೆಯಿಂದಾಗಿ ರಾಜ್ಯದಲ್ಲಿ ಶಾಂತಿ ಸುಭಿಕ್ಷೆಗಳು ನೆಲೆಸಿ ರಾಜ ದ್ರೋಹಾದಿಗಳು ಹತ್ತಿಕ್ಕಲ್ಪಟ್ಟು ದೇಶದ ಮೇಲೆ ರಾಜನ ಹಿಡಿತವು ಬಿಗಿಯಾಯಿತು. ಪ್ರಜೆಗಳಿಗೆ ಕೂಡ ಅನುಕೂಲಗಳು, ಸುವ್ಯವಸ್ಥೆ ಮೊದಲಾದವು ಹೆಚ್ಚಾಗಿ ಸುಖ ಸಂತೋಷಗಳು ನೆಲೆಸಿ ರಾಜ ಭಕ್ತಿ ದೃಢಗೊಂಡಿತು. ಈ ಕಾರಣದಿಂದಾಗಿಯೇ ಈ ರಾಜನು ಮರಾಠ ಮುಗಲರಂತಹ ದೊಡ್ಡ ದೊಡ್ಡ ಬಲಿಷ್ಠ ಶತ್ರುಗಳನ್ನು ಎದುರಿಸಿ ಕರ್ನಾಟಕದ ಅನೇಕ ಚಿಕ್ಕಪುಟ್ಟ ಪಾಳೆಯಗಳನ್ನು ಗೆದ್ದುಕೊಂಡು ರಾಜ್ಯಕ್ಕೆ ಸೇರಿಸಿದ್ದೇ ಅಲ್ಲದೆ ನೆರೆಯ ದೊಡ್ಡ ರಾಜ್ಯಗಳ ಭಾಗಗಳನ್ನು ಕೂಡ ಕಬಳಿಸಬಲ್ಲವನಾದನು.

ಗ್ರಂಥ ಋಣ

೧. ಡಾ. ಎಂ.ವಿ. ಕೃಷ್ಣರಾವ್ ಮತ್ತು ಎಂ. ಕೇಶವಭಟ್ಟ, "ಕರ್ನಾಟಕದ ಇತಿಹಾಸ ದರ್ಶನ" ಬೆಂಗಳೂರು . ೧೯೭೦, ಪು. ೫೨೬ - ೫೪೯

೨. C. Hayavadana Rao, "History of Mysore" (1399-1799 AD) P. 234-358. VOL. I, Bangalore - 1943

❐

೪. ದಕ್ಷಿಣ ಕರ್ನಾಟಕ ವ್ಯಕ್ತಿನಾಮಗಳ ಸಾಮಾಜಿಕ ವೈಶಿಷ್ಟ್ಯತೆ

– ರಾಜೇಶ್

ಒಬ್ಬ ವ್ಯಕ್ತಿಯನ್ನು ಗುರುತಿಸಿಕೊಳ್ಳುವುದಕ್ಕಾಗಿ ಇಟ್ಟ ಹೆಸರನ್ನು ವ್ಯಕ್ತಿನಾಮಗಳು ಎಂದು ಕರೆಯಲಾಗಿದೆ. ವ್ಯಕ್ತಿಗೆ ವಿಶಿಷ್ಟ ಅಸ್ತಿತ್ವವಿರುವುದರಿಂದ ವ್ಯಕ್ತಿನಾಮ ಮೊದಲು ಬಳಕೆಗೆ ಬಂದಿತೆಂದು ನಾಮವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಮಾನವ ಇತಿಹಾಸದಲ್ಲಿ ವ್ಯಕ್ತಿನಾಮವಿಲ್ಲದೆ ಯಾವುದೇ ಸಮುದಾಯವಿಲ್ಲ. ಯಾವುದೇ ವ್ಯಕ್ತಿ, ವಸ್ತು, ಸ್ಥಳ, ಪ್ರಾಣಿ, ಸಸ್ಯ ಮೊದಲಾದವನ್ನು ಗುರುತಿಸಬೇಕಾದರೆ ಒಂದು ಹೆಸರಿನ ಅಗತ್ಯ ಇದ್ದೇ ಇರುತ್ತದೆ. ಇಲ್ಲದಿದ್ದರೆ ಇಡೀ ಮನುಕುಲದ ಕಲ್ಪನೆಯೇ ಭಿನ್ನವಾಗಿರುತ್ತಿತ್ತು. ಹೆಸರು ಏನೇ ಇರಲಿ : ಹೆಸರಿಸಿದ್ದು ಮಾನವರು. ಈ ಹೆಸರುಗಳು ವಾಸ್ತವವಾಗಿ ಭಾಷಿಕ ರಚನೆಗಳು. ಇತರ ಭಾಷಿಕ ರಚನೆಗಳಿಗೆ ಅನ್ವಯವಾಗುವ ನಿಯಮಗಳು ಈ ರಚನೆಗಳಿಗೂ ಅನ್ವಯವಾಗುತ್ತವೆ. ಉದಾಹರಣೆಗೆ : ಆಯಾ ಭಾಷೆಯ ಧ್ವನಿ ಸಂಯೋಜನೆಯ ನಿಯಮಗಳನ್ನು ಹೆಸರುಗಳು ಉಲ್ಲಂಘಿಸಲಾರವು. ಅಂದರೆ ಹೆಸರುಗಳು ವಾಸ್ತವವಾಗಿ ಪದಕೋಶದ ಅಂಗಗಳಾಗಿರುತ್ತವೆ.

ವ್ಯಕ್ತಿನಾಮ ಎಂದರೇನು ? ಎಂಬುವುದನ್ನು ಒಂದೇ ವಾಕ್ಯದಲ್ಲಿ ವ್ಯಾಖ್ಯಾನಿಸುವುದು ತುಂಬ ಕಠಿಣ. ಸರಳವಾಗಿ ಹೇಳುವುದಾದರೆ "ವ್ಯಕ್ತಿನಾಮಗಳ ವೈಜ್ಞಾನಿಕ ಅಧ್ಯಯನವೇ ವ್ಯಕ್ತಿನಾಮ ವಿಜ್ಞಾನ" ಎಂದು ಹೇಳಬಹುದು. 'ದಿ ನ್ಯೂ ಎನ್‌ಸೈಕ್ಲೋಪಿಡಿಯಾ ಬ್ರಿಟಾನಿಕಾ' ಗ್ರಂಥದಲ್ಲಿ ವ್ಯಕ್ತಿನಾಮ ಎಂದರೇನು? ಎನ್ನುವುದಕ್ಕೆ ವ್ಯಾಖ್ಯಾನ ಹೀಗಿದೆ : "A Name is a word or group of words used to refer to an Individual Entity (real or imaginary); the name singles out this entity by directly pointing to it, not by specifying it as a member of a class" (1992, 28-233) ಎಂದಿರುವುದು ವ್ಯಕ್ತಿನಾಮದ ಸ್ವರೂಪವನ್ನು ಸ್ಪಷ್ಟಪಡಿಸುತ್ತದೆ.

ಹೆಸರು ವ್ಯಕ್ತಿ ನಿರ್ದೇಶನಕ್ಕಾಗಿ ಮಾತ್ರ ಕೆಲಸ ನಿರ್ವಹಿಸುವುದೋ ಅಥವಾ ಕೆಲವು ಲಕ್ಷಣಗಳನ್ನು ಸೂಚಿಸುತ್ತದೋ ಎನ್ನುವುದೊಂದು ಪ್ರಶ್ನೆ. ಹಳೆಯ ನಗೆಚಾಟಿಕೆಗಳು ವ್ಯಕ್ತಿಗೂ ಅವರ ಹೆಸರಿಗೂ ಇಂಥ ಲಕ್ಷಣಸೂಚಕ ಸಂಬಂಧಗಳಿಲ್ಲವೆಂದೇ ತಿಳಿದಿವೆ. ಹೆಸರು ಭೀಮ ನೋಡಲು ಹಂಚಿಕಡ್ಡಿ; ಕ್ಷೀರಸಾಗರಶಯನನ ಮನೆಯಲ್ಲಿ ಕುಡಿಯಲು ಬೊಗಸೆ ಮಜ್ಜಿಗೆ ಇಲ್ಲ; ಸಂಪತ್ತುವಿನ ಮನೆಯಲ್ಲಿ ಊಟಕ್ಕೂ ತತ್ವಾರ ಇತ್ಯಾದಿ ನುಡಿಗಳನ್ನು ಗಮನಿಸಿ. ಈ ಲಕ್ಷಣ ಸಂಬಂಧ ಇಲ್ಲದಿದ್ದರೆ ಕೆಲವು ಹೆಸರುಗಳನ್ನು ಬಳಸಲು ಜನರು ಹಿಂಜರಿಯುವುದೇಕೆ? ಕೀಚಕ, ದುಶ್ಶಾಸನ, ಶಕುನಿ, ಮಂಥರೆ ಮುಂತಾದ ಹೆಸರುಗಳು ಬಳಕೆಯಲ್ಲಿರುವ ಸಾಧ್ಯತೆಗಳ ಕಡಮೆ ಎಂದರೆ ಹೆಸರುಗಳು ಕೆಲವೊಮ್ಮೆ ಲಕ್ಷಣಸೂಚಕ ವಿವಕ್ಷೆಯಿದೆ ಎಂದಾಯ್ತು. ಇವೆರಡು ನಿದರ್ಶನಗಳು ಸಮುದಾಯದ ನಂಬಿಕೆಯನ್ನು ಆಧರಿಸಿವೆ. ಹಾಗಿಲ್ಲದೆಯೂ ಹೆಸರುಗಳು ಕನಿಷ್ಠ ಲಿಂಗ ಸೂಚಕಗಾಳಗಿ ಕೆಲಸ ಮಾಡುವುದುಂಟು. ತಿಮ್ಮ ಎಂದರೆ ಗಂಡಸು, ತಿಮ್ಮಿ ಎಂದರೆ ಹೆಂಗಸು; ಸೋಫಿಯಾ, ಸೋನಿಯಾ, ಅನಾ ಮುಂತಾದವರು ಹೆಂಗಸರು ; ಜಾನ್, ಬರ್ನಾಡ್, ಎಡ್ವರ್ಡ್ ಮುಂತಾದವರು ಗಂಡಸರು. ಹೀಗೆ ತಿಳಿಯಲು ಆ ಹೆಸರುಗಳಿರುವ ವ್ಯಕ್ತಿಗಳನ್ನು ನಾವು ನೋಡಿರಬೇಕೆಂದಿಲ್ಲ. ಆ ಹೆಸರುಗಳಲ್ಲೇ ಅವುಗಳ ಧ್ವನಿನಿಯೋಜನೆಯಲ್ಲೇ ಅವಶ್ಯ ಸೂಚನೆಯಿದೆ.

ವ್ಯಕ್ತಿಗಳು ಮತ್ತು ಹೆಸರುಗಳು ಬೇರೆ ಬೇರೆ ವಲಯಗಳು ವ್ಯಕ್ತಿಗೆ ಕನಿಷ್ಠ ಒಂದು ಹೆಸರು ಆಯ್ಕೆಯಾಗುತ್ತದೆ. ಆದರೆ ಹೆಸರುಗಳಿಗೂ ವ್ಯಕ್ತಿಯೊಬ್ಬರು ವಾಸ್ತವವಾಗಿ ಇರಲೇಬೇಕೆಂದಿಲ್ಲ. ಪುರಾಣಗಳ ಹೆಸರುಗಳು, ಇಂದಿನ ಸಾಹಿತ್ಯ ಕೃತಿಗಳ ಹೆಸರುಗಳು ಹೀಗೆ ಪ್ರತಿನಿಧಿಸುವ ವ್ಯಕ್ತಿಗಳನ್ನು ಹೊಂದಿರುವುದು ಅವಶ್ಯವಿಲ್ಲ. ವ್ಯಕ್ತಿ ಮತ್ತು ಹೆಸರು ಬೆಸೆದುಕೊಳ್ಳುವ ಸಂಸ್ಕೃತಿಗಳಲ್ಲಿ ಬಹುಮುಖ್ಯ ಘಟನೆ. ಮಾನವಶಾಸ್ತ್ರಜ್ಞರು ಹೆಸರಿಡುವ ಪ್ರಸಂಗವನ್ನು ಹೊಸ ಸದಸ್ಯರಿಗೆ ಅಧಿಕೃತ ಮನ್ನಣೆ ನೀಡುವ ಸಂದರ್ಭವೆಂದು ಗುರುತಿಸುತ್ತಾರೆ. ವ್ಯಕ್ತಿಯನ್ನು ಸಮುದಾಯ ತನ್ನ ಹಿಡಿತಕ್ಕೆ ತೆಗೆದುಕೊಳ್ಳುವ ಘಟನೆ ಎನ್ನುತ್ತಾರೆ. ಹೆಸರಿಟ್ಟ ಕೂಡಲೇ ಸಮುದಾಯಕ್ಕೆ ವ್ಯಕ್ತಿಯ ಮೇಲೆ ಅಧಿಪತ್ಯ ಸ್ಥಾಪಿಸಲು ಒಂದು ಉಪಕರಣ ದೊರೆತಂತೆ. ಬುಡಕಟ್ಟುಗಳಲ್ಲಿ ಈ ಅಂಶ ಪ್ರಧಾನವಾಗಿದೆ. ವ್ಯಕ್ತಿಗೆ ಹೆಸರಿನಿಂದಾಗಿ ಇರುವ ಈ ಬಂಧವನ್ನು ಮುರಿಯಲೆಂದೇ ನಿಜನಾಮಗಳನ್ನು ಎಷ್ಟೋ ಬುಡಕಟ್ಟುಗಳಲ್ಲಿ ಗೋಪ್ಯವಾಗಿ ಇರಿಸಲಾಗುವುದು.

ಕನ್ನಡದಲ್ಲಿ ವ್ಯಕ್ತಿನಾಮಗಳ ಬಗೆಗೆ ಚರ್ಚೆ ನಡೆದದ್ದೇ ಬಹಳ ಅಪರೂಪ. ಎಂ. ಚಿದಾನಂದಮೂರ್ತಿ, ಎಂ.ಎಂ. ಕಲಬುರ್ಗಿ, ದೇ. ಜವರೇಗೌಡ, ಕೆ.ವಿ.

ನಾರಾಯಣ, ಡಿ. ಪಾಂಡುರಂಗ ಬಾಬು, ಅಶೋಕಕುಮಾರ್ ರಂಜೇರೆ, ಸಾಂಬ ಮೂರ್ತಿ, ಪಿ. ಮಹಾದೇವಯ್ಯ ಅವರುಗಳು ಬರೆದ ಒಂದೆರಡು ಲೇಖನಗಳನ್ನು ಬಿಟ್ಟರೆ ದೀರ್ಘವಾಗಿ ಚರ್ಚೆ ಆಗಲೇ ಇಲ್ಲ ಎನಿಸುತ್ತದೆ.

ವ್ಯಕ್ತಿನಾಮವನ್ನು ವಿದ್ವಾಂಸರು ಎರಡು ಭಾಗಗಳಾಗಿ ಒಡೆದು ನೋಡಿದ್ದಾರೆ. ಮೊದಲನೆಯದು ನಿರ್ದಿಷ್ಟ, ಎರಡನೆಯದು 'ವಾರ್ಗಿಕ' ಎಂದು. ಇವೆರಡರಲ್ಲಿ ಮೊದಲನೆಯ ನಿರ್ದಿಷ್ಟವೇ ವ್ಯಕ್ತಿಯ ನಿಜನಾಮ ಎಂದು, ಎರಡನೆಯದು ವಾರ್ಗಿಕ ಸಂಬಂಧವಾಚಿಯೋ, ವರ್ಗವಾಚಿಯಾಗಿಯೋ ಇರುತ್ತದೆ ಎಂದು ಇದುವರೆಗೂ ಚರ್ಚಿಸಲಾಗಿದೆ. ಇದು ಸ್ವಲ್ಪಮಟ್ಟಿಗೆ ನಿಜ ಕೂಡ. ಉದಾಹರಣೆಗೆ; ರಾಮೇಗೌಡ, ರಾಜಕುಮಾರ, ಚಾಮಯ್ಯ, ಬಸಪ್ಪ, ಕೃಷ್ಣಮೂರ್ತಿ, ಮಧ್ವಾಚಾರ್ ಹೆಸರುಗಳನ್ನು ಗಮನಿಸಿ.

ಇಲ್ಲಿ ರಾಮ, ರಾಜ, ಚಾಮ, ಬಸವ, ಕೃಷ್ಣ, ಮಧ್ವ ಇವೆಲ್ಲ ನಿರ್ದಿಷ್ಟಗಳು. ಗೌಡ, ಕುಮಾರ, ಅಯ್ಯ, ಅಪ್ಪ, ಮೂರ್ತಿ, ಆಚಾರ್‌ಗಳು ವಾರ್ಗಿಕಗಳು. ಇವುಗಳಲ್ಲಿ ಮೊದಲ ಘಟಕಗಳಾದ ರಾಮ, ರಾಜ, ಕೃಷ್ಣ, ಬಸವ, ಶಿವ, ರಾಜಗಳೇ ನಿಜನಾಮಗಳಾಗಿವೆ. ವಾರ್ಗಿಕಗಳಾದ ಗೌಡ, ಕುಮಾರ, ಅಯ್ಯ, ಅಪ್ಪ, ಮೂರ್ತಿ, ಆಚಾರ್‌ಗಳಿಗೆ ತಮ್ಮದೇ ಆದ ಅಸ್ತಿತ್ವ ಇಲ್ಲ. ಹಾಗಾಗಿ ಇವುಗಳು ಸಂಬಂಧ ವಾಚಿಗಳಾಗಿವೆ, ಇಲ್ಲವೇ ವರ್ಗವಾಚಿಗಳಾಗಿವೆ, ಇಲ್ಲ ವ್ಯಕ್ತಿವಾಚಿಗಳಾಗಿವೆ. ಉದಾಹರಣೆಗೆ : ಬಸಪ್ಪದಲ್ಲಿನ ಬಸವ+ಅಪ್ಪ, ಅವ್ವ, ರಾಮಣ್ಣದಲ್ಲಿನ ಅಣ್ಣ ಸಂಬಂಧವಾಚಿಗಳಾಗಿವೆ. ಹಾಗೆಯೇ ರಾಮೇಗೌಡದಲ್ಲಿನ 'ಗೌಡ' ಕೃಷ್ಣಮಾಚಾರ್‌ದಲ್ಲಿನ ಆಚಾರ್ ಪದಗಳು ವೃತ್ತಿವಾಚಿಗಳಾಗಿವೆ. ಹಾಗೆಯೇ ರಾಮೇಗೌಡದಲ್ಲಿನ ಗೌಡ, ಕೃಷ್ಣಮೂರ್ತಿಯಲ್ಲಿನ ಮೂರ್ತಿ ವರ್ಗ ಅಥವಾ ಜಾತಿಸೂಚಿಗಳಾಗಿವೆ.

ಕೆಲವು ವ್ಯಕ್ತಿನಾಮಗಳಲ್ಲಿ ವಾರ್ಗಿಕಗಳೇ ಇಲ್ಲದಿರಬಹುದು. ಉದಾಹರಣೆಗೆ: ಸಂತೋಷ್, ಆನಂದ್, ಅಶೋಕ್ ಮುಂತಾದ ಹೆಸರುಗಳನ್ನು ಎರಡು ಘಟಕಗಳಾಗಿ ಒಡೆಯಲು ಬರುವುದಿಲ್ಲ. ಅವು ಪೂರ್ಣ ಘಟಕಗಳಾಗಿಯೇ ಇವೆ. ಇಲ್ಲಿ ವಾರ್ಗಿಕ ಎನ್ನುವುದು ಇರುವುದಿಲ್ಲ. ಪೂರ್ಣ ಘಟಕ ನಿರ್ದಿಷ್ಟವೇ ಆಗಿರುತ್ತದೆ. ಆದರೆ ಇವುಗಳಿಗೆ ಕೆಲವು ಸಂದರ್ಭದಲ್ಲಿ ವಾರ್ಗಿಕಗಳು ಸೇರಲೂಬಹುದು. ಉದಾಹರಣೆಗೆ : ಸಂತೋಷ್‌ಕುಮಾರ್, ಆನಂದಮೂರ್ತಿ, ಆನಂದೇಗೌಡ, ಆನಂದರಾವ್ ಇಲ್ಲಿ ಕುಮಾರ್, ಮೂರ್ತಿ, ಗೌಡ, ರಾವ್‌ಗಳು ಸೇರಲೂಬಹುದು, ಸೇರದೆಯೂ ಇರಬಹುದು. ಆದರೆ ಇಲ್ಲಿ ವ್ಯಕ್ತಿಯ ನಿಜನಾಮ ಹಿಂದಿನ ಘಟಕವೇ ಆಗಿದೆ. ಇವುಗಳಿಗಿಂತ ಭಿನ್ನ ರೀತಿಯ ಹೆಸರುಗಳನ್ನು ನೋಡಬಹುದು. ಉದಾಹರಣೆಗೆ :

ರಾಮಚಂದ್ರ, ರಾಮಕೃಷ್ಣ, ಸೋಮಶೇಖರ, ಮೋಹನಕೃಷ್ಣ ಮುಂತಾದ ನಾಮಗಳನ್ನು ಎರಡು ಘಟಕಗಳಾಗಿ ಒಡೆಯುಬಹುದು. ರಾಮ+ಚಂದ್ರ, ರಾಮ+ಕೃಷ್ಣ, ಸೋಮ+ಶೇಖರ, ಮೋಹನ+ಕೃಷ್ಣ ಹೀಗೆ ಒಡೆದ ಘಟಕಗಳನ್ನು ಮೊದಲನೆಯದು ನಿರ್ದಿಷ್ಟ, ಎರಡನೆಯದು ವಾರ್ಗಿಕ ಎಂದು ಹೇಳಿ ಮುಂದೆ ಹೋಗಬಹುದು. ಆದರೆ ಇಲ್ಲಿ ಕೆಲವು ಸಮಸ್ಯೆಗಳು ಏಳುತ್ತವೆ. ಇಲ್ಲಿನ ಎರಡೂ ಘಟಕಗಳು ನಿರ್ದಿಷ್ಟಗಳೇ ಆಗಿವೆ. ಹಾಗಾಗಿ ಎರಡು ನಿರ್ದಿಷ್ಟಗಳು ಸೇರಿ ಒಂದು ನಾಮ ಆಗಿರುತ್ತದೆ. ಈ ಒಂದು ನಾಮದಲ್ಲಿ ನಿರ್ದಿಷ್ಟ+ವಾರ್ಗಿಕ ಇರುತ್ತದೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಇಲ್ಲಿ ನಿರ್ದಿಷ್ಟ ಇರಬಹುದು. ಹಾಗೆಯೇ ವಾರ್ಗಿಕ+ವಾರ್ಗಿಕ ಇರುತ್ತದೆ ಎಂದು ತಿಳಿದುಕೊಂಡಿದ್ದೇವೆ. ಆದರೆ ಇಲ್ಲಿ ನಿರ್ದಿಷ್ಟ+ನಿರ್ದಿಷ್ಟ ಇರಬಹುದು. ಹಾಗೆಯೇ ವಾರ್ಗಿಕ+ವಾರ್ಗಿಕ ಇರಬಹುದು. ಉದಾಹರಣೆಗೆ: ಅಣ್ಣಯ್ಯ, ತಮ್ಮಯ್ಯ, ತಂಗಮ್ಮ, ಅಣ್ಣಮ್ಮದಂಥ ಅನೇಕ ವ್ಯಕ್ತಿನಾಮದಲ್ಲಿ ಅಣ್ಣ+ಅಯ್ಯ, ತಮ್ಮ+ಅಯ್ಯ, ತಂಗಿ+ಅಮ್ಮ, ಅಣ್ಣ+ಅಮ್ಮ ಬರುತ್ತದೆ. ಇಲ್ಲಿಯೂ ಮೊದಲ ಘಟಕ ನಿರ್ದಿಷ್ಟ ಎರಡನೆಯದು ವಾರ್ಗಿಕ ಎಂದು ಹೇಳಿದರೆ ಸಮಸ್ಯೆ ಪರಿಹಾರವಾಗುವುದಿಲ್ಲ. ಮೊದಲನೆಯ ಘಟಕವಾದ ನಿರ್ದಿಷ್ಟವೇ ನಿಜನಾಮ ಎನ್ನುವುದು ಕೂಡ ಇಲ್ಲಿಯೂ ಬಿದ್ದು ಹೋಗುತ್ತದೆ. ಉದಾಹರಣೆಗೆ: ಬಸಪ್ಪ ಎನ್ನುವಲ್ಲಿ ಬಸವ+ಅಪ್ಪ ಮೊದಲ ಘಟಕ ಬಸವ ನಿಜನಾಮವಾಗುತ್ತದೆ. ಹಾಗೆಯೇ ಸಿದ್ದೇಗೌಡದಲ್ಲಿ ಸಿದ್ದ, ಶಂಕರಮೂರ್ತಿಯಲ್ಲಿ ಶಂಕರ ನಿಜನಾಮ ಎಂದು ಹೇಳಬಹುದು. ಹಾಗೆಯೇ ಆತನನ್ನು ಕರೆಯಬಹುದು. ಆದರೆ ಅಣ್ಣಯ್ಯ, ತಮ್ಮಯ್ಯದಂಥ ಹೆಸರುಗಳಲ್ಲಿ ಮೊದಲ ಘಟಕವಷ್ಟೇ ನಿಜನಾಮವಾಗಲು ಸಾಧ್ಯವಿಲ್ಲ. ಇಲ್ಲಿ ಎರಡೂ ಸೇರಿ ಪೂರ್ಣ ಘಟಕವೆಂದು ಭಾವಿಸಬೇಕು. ವ್ಯಕ್ತಿನಾಮದಲ್ಲಿ ನಿರ್ದಿಷ್ಟ ಮುಖ್ಯ. ಎರಡೂ ವಾರ್ಗಿಕಗಳೇ ಆಗಿರುವಾಗ ಎರಡೂ ಸೇರಿ ಒಂದು ಘಟಕವಾಗಿ ನೋಡುವುದೇ ಸರಿ. ಹಾಗೆಯೇ ಎರಡು ನಿರ್ದಿಷ್ಟಗಳೇ ಇರುವಾಗ ಮೊದಲ ಘಟಕ ನಿಜನಾಮದಂತೆ ಕೆಲಸ ಮಾಡುವುದು. ಶಿವರಾಮ, ಶಿವ ಎಂದು ಕರೆಯಬಹುದು. ರಾಮಕೃಷ್ಣ, ಶಿವರಾಮಕೃಷ್ಣ ಎನ್ನುವಲ್ಲಿ ಇಲ್ಲಿಯೂ ಮೊದಲ ಘಟಕ ಮಾತ್ರ ಮುಖ್ಯವೆನಿಸುವುದಿಲ್ಲ. ರಾಮಕೃಷ್ಣ ರಾಮ ಎಂದು, ಶಿವರಾಮಕೃಷ್ಣ ಶಿವ ಎಂದಷ್ಟೇ ಕರೆಯುವುದು ಸರಿಯಲ್ಲ. ಇಲ್ಲಿಯೂ ಮೊದಲ ಘಟಕ ಮಾತ್ರ ಮುಖ್ಯವೆನಿಸುವುದಿಲ್ಲ. ರಾಮಕೃಷ್ಣ ರಾಮ ಎಂದು, ಶಿವರಾಮಕೃಷ್ಣ ಶಿವ ಎಂದಷ್ಟೇ ಕರೆಯುವುದು ಸರಿಯಲ್ಲ. ಇಲ್ಲಿಯೂ ರಾಮಕೃಷ್ಣ, ಶಿವರಾಮಕೃಷ್ಣ ಎಂದು ನೋಡುವುದು ಸೂಕ್ತ ಎನಿಸುತ್ತದೆ. ರಾಮೇಗೌಡ ಶಿವಯ್ಯದಲ್ಲಿನ ನಿರ್ದಿಷ್ಟ ನಿಜನಾಮ ರಾಮ, ಶಿವ ಇದ್ದಂತೆ. ರಾಮಕೃಷ್ಣ ಶಿವರಾಮಕೃಷ್ಣದಲ್ಲಿನ ಎರಡೂ ನಿರ್ದಿಷ್ಟಗಳು

ಸೇರಿ ನಿಜನಾಮವಾಗುವಂಥವು ಮತ್ತು ಅಣ್ಣಯ್ಯ, ತಮ್ಮಯ್ಯ, ತಂಗಮ್ಮದಂಥ ಹೆಸರಿನಲ್ಲಿನ ಎರಡೂ ವಾರ್ಗಿಕಗಳು ಸೇರಿ ವ್ಯಕ್ತಿನಾಮಗಳು ಎಂದು ಪರಿಗಣಿಸಲಾಗಿದೆ.

ವ್ಯಕ್ತಿನಾಮಗಳು ಹಲವು ರೀತಿಯಲ್ಲಿ ಇರುವ ಅನೇಕ ಹೆಸರುಗಳನ್ನು ನೋಡಿದರೆ ಗೊತ್ತಾಗುತ್ತದೆ. ಪ್ರಾದೇಶಿಕವಾಗಿ ಮತ್ತು ಸಾಮಾಜಿಕವಾಗಿ ವ್ಯಕ್ತಿನಾಮಗಳು ಬದಲಾಗುತ್ತ ಹೋಗುತ್ತವೆ. ಒಂದು ಹೆಸರು ಪ್ರಾದೇಶಿಕವಾಗಿ ನಾಲ್ಕು ರೀತಿಯಲ್ಲಿ ಕಾಣಬಹುದು.

ಉದಾಹರಣೆಗೆ,

೧) ಪಿ. ಪಿ. ಅಂಗಡಿ, ಆರ್.ಜಿ. ಕೋಡಗುಂಟ, ಎಂ.ಜಿ. ಬಿರದಾರ್, ಎಸ್.ಎಸ್. ಪಾಟೀಲ್ ಮುಂತಾದ ಹೆಸರುಗಳು.

೨) ಚಂದ್ರಶೇಖರ ಪಾಟೀಲ, ಚಂದ್ರಶೇಖರ ಕಂಬಾರ, ಶಿವಾಜಿ ತಳವಾರ್, ಬಸಪ್ಪ ಕುರುಬರ, ಸುಬ್ಬು ಹೊಲೆಯಾರ್ ಮುಂತಾದವು.

೩) ಎಚ್.ಜಿ. ಪುಟ್ಟಸ್ವಾಮಿ, ಕೆ.ಬಿ. ಗಣಪತಿ, ಎನ್.ಎನ್. ಶ್ರೀನಿವಾಸ್, ಆರ್.ಸಿ. ವೆಂಕಟೇಶ್ ಮುಂತಾದವು.

೪) ನಂಜಯ್ಯ ಹೊಂಗನೂರು, ಕಾಳೆಗೌಡ ನಾಗವಾರ, ಕೃಷ್ಣಮೂರ್ತಿ ಹನೂರು, ಜಯಲಕ್ಷ್ಮಿ ಸೀತಾಪುರ, ರಮೇಶ್‌ರಾಮಸಮುದ್ರ ಇನ್ನು ಮುಂತಾದವು.

ನಾಲ್ಕು ಬಗೆಯ ಹೆಸರುಗಳಲ್ಲಿ ನಿಜನಾಮ ಒಂದೇ ರೀತಿಯಲ್ಲಿ ಬಂದಿಲ್ಲ ಎನ್ನುವುದು ಸ್ಪಷ್ಟ ಮೊದಲನೇ ಮಾದರಿಯಲ್ಲಿ ಅಂಗಡಿ, ಕೋಡಗುಂಟಿ, ಬಿರದಾರ್, ಪಾಟೀಲ್ ವ್ಯಕ್ತಿಯನಾಮವಲ್ಲ. ಇದರಲ್ಲಿ ಮೊದಲ ಅಕ್ಷರ ಪಿ.ಪಿ.ಗಳು ನಿಜನಾಮದ ಸಂಕೇತಗಳು. ಆರ್.ಜಿ. ಕೋಡಗುಂಟಿಯಲ್ಲಿ ಆರ್ ಎನ್ನುವುದು ರಮೇಶ್, ಇದೇ ಆ ವ್ಯಕ್ತಿಯ ನಿಜನಾಮ. ಇಲ್ಲಿ ಅದು ಗೌಣವಾಗಿ ಕುಲನಾಮ ಮುಖ್ಯವಾಗಿ ಕಾಣುತ್ತದೆ.

ಎರಡನೆಯ ಮಾದರಿಯಲ್ಲಿ ಭಿನ್ನವಾದ ಮಾದರಿ ಇದೆ. ಇಲ್ಲಿ ಮೊದಲು ವ್ಯಕ್ತಿಯ ನಾಮ ಬಂದು ನಂತರ ಆ ವ್ಯಕ್ತಿಯ ವೃತ್ತಿ, ಜಾತಿಯನ್ನು ಸೂಚಿಸುವ ಪದ ಬಂದಿದೆ.

ಮೂರನೆಯ ಮಾದರಿಯು ಮೊದಲನೆಯ ಮಾದರಿಯಂತೆ ಸಂಕೇತ ಪದ ನಂತರ ಕುಲನಾಮದಂತೆ ಕಂಡರೂ ಅದೇ ವ್ಯಕ್ತಿಯ ನಾಮವಾಗಿದೆ. ಪುಟ್ಟಸ್ವಾಮಿ, ಗಣಪತಿ, ಶ್ರೀನಿವಾಸ, ವೆಂಕಟೇಶ್ ಇವೇ ನಾಮವಾಗಿದೆ.

ನಾಲ್ಕನೆಯ ಮಾದರಿಯಲ್ಲಿ ಮೊದಲು ವ್ಯಕ್ತಿಯ ನಾಮ ಬಂದು ಆನಂತರ ಆ ವ್ಯಕ್ತಿಯ ಊರು ಬಂದಿದೆ.

ಚರಿತ್ರೆಯುದ್ದಕ್ಕೂ ಮತ್ತು ಕಾವ್ಯ, ಪುರಾಣ, ಶಾಸನಗಳಲ್ಲಿ ದೊರೆಯುವ ವ್ಯಕ್ತಿನಾಮಗಳನ್ನು ಗಮನಿಸಿದರೆ ಹತ್ತಾರು ಆಕರಗಳಿಂದ ಹೆಸರುಗಳನ್ನು ಪಡೆದುಕೊಂಡಿರುವುದು ಕಂಡುಬರುತ್ತದೆ.

ಜನರು ತಮ್ಮ ಮಕ್ಕಳಿಗೆ ಹೆಸರಿಡುವಾಗ ತಮ್ಮ ಪ್ರಾದೇಶಿಕ ದೇವರ ಹಸರು, ತಮ್ಮ ಇಷ್ಟ ದೇವತೆಯ ಹೆಸರುಗಳನ್ನು ಇಟ್ಟಿರುತ್ತಾರೆ. ದೇವರ ಹೆಸರನ್ನಿಡುವುದರ ಉದ್ದೇಶ ಅವನಿಗೆ ಯಾವುದೇ ತೊಂದರೆ ಬರದಿರಲೆಂದು. ಉದಾಹರಣೆಗೆ : ಶಂಕರ್, ಮಾದೇವ, ಕೃಷ್ಣ, ಗಂಗಾಧರ, ವಿಷ್ಣು, ಮಹೇಶ್ವರ, ಬ್ರಹ್ಮಾವರ್, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಪದ್ಮಾವತಿ ಮುಂತಾದವರು.

ಶೈವ ಸಂಪ್ರದಾಯಕ್ಕೆ ಸೇರಿದವರಲ್ಲಿ ಈಶ್ವರನಿಗೆ ಸಂಬಂಧಿಸಿದ ಹೆಸರುಗಳನ್ನೂ, ವೈಷ್ಣವರು ವಿಷ್ಣುವಿನ ಹೆಸರುಗಳನ್ನೂ ಇಟ್ಟುಕೊಳ್ಳುವುದು ಇದೆ. ಆದರೆ ಶೈವರು ವಿಷ್ಣು ಪರವಾದ ಹೆಸರುಗಳನ್ನು ಇಟ್ಟುಕೊಳ್ಳುವುದು ತೀರಾ ಕಡಿಮೆ.

ಚರಿತ್ರೆಯುದ್ದಕ್ಕೂ ಜನರು ಪುರಾಣಗಳಲ್ಲಿ ಬರುವ ಅನೇಕ ವ್ಯಕ್ತಿಗಳ ಹೆಸರನ್ನು ತಮ್ಮ ಮಕ್ಕಳಿಗೆ ಇಡುತ್ತ ಬಂದಿದ್ದಾರೆ. ರಾಮ, ಲಕ್ಷ್ಮಣ, ಭರತ, ಶತ್ರುಜ್ಞ, ಪರಶುರಾಮ, ಧರ್ಮ,'ಭೀಮ, ಅರ್ಜುನ, ಕೃಷ್ಣ, ಬಲರಾಮ, ಸೀತೆ, ಊರ್ಮಿಳಾ, ರಾಧೆ, ರುಕ್ಮಿಣಿ ಮುಂತಾದ ಉತ್ತಮ ಚರಿತ್ರೆಯುಳ್ಳ ವ್ಯಕ್ತಿಗಳ ಅವರಂತೆ ಇವರಾಗಲಿ ಎನ್ನುವ ಭಾವನೆಯಿಂದ ನಾಮಕರಣ ಮಾಡಿರುತ್ತಾರೆ. ಆದರೆ ಪುರಾಣ ಪಾತ್ರದ ಮೌಲ್ಯಗಳನ್ನು ವ್ಯಕ್ತಿಯ ನಾಮಕ್ಕೆ ಆರೋಪಿಸಿ ಈ ಹೆಸರು ಇಡುತ್ತಾರೆ. ಆರೋಪಿಸಿದ ತಕ್ಷಣ ಹಾಗೆ ಎಂದೇನೂ ಇಲ್ಲ. ಭೀಮ ಹೆಸರುಳ್ಳವನು ಕಡ್ಡಿಯಂತಿರಬಹುದು. ಅರ್ಜುನ ಹೆಸರಿನವನು ಮಂದಬುದ್ಧಿಯವನಿರಬಹುದು. ಧರ್ಮದ ಹೆಸರಿನವನು ಸಮಾಜಕಂಟಕನೂ ಆಗಿರಬಹುದು. ಈ ಹೆಸರು ಆತನಿಗೆ ಆರೋಪಿಸಿದರೂ ಇಲ್ಲಿ ಕೇವಲ ಆತನ ಗುರುತಿಗಾಗಿ ಮಾತ್ರ ಈ ಹೆಸರು ಚಲಾವಣೆಯಲ್ಲಿರುತ್ತದೆ.

ಚರಿತ್ರೆಯಲ್ಲಿ ಬಾಳಿಹೋದ ಉತ್ತಮ ಚರಿತ್ರೆಯುಳ್ಳ ಶೂರ, ಧೀರ, ಬುದ್ಧಿವಂತ ಹೆಸರನ್ನು ಈಗಲೂ ಅನೇಕರು ತಮ್ಮ ಮಕ್ಕಳಿಗೆ ನಾಮಕರಣ ಮಾಡುವುದನ್ನು ನೋಡುತ್ತೇವೆ. ಉದಾಹರಣೆಗೆ : ಬುದ್ಧ, ಬಸವಣ್ಣ, ಗೌತಮ, ಅಂಬೇಡ್ಕರ್, ಮಹಾವೀರ, ವಿಷ್ಣುವರ್ಧನ, ಅಮೋಘವರ್ಷ, ನೃಪತುಂಗ, ಚೆನ್ನಬಸವಣ್ಣ, ಅಕ್ಕಮಹಾದೇವಿ, ಮೀರಾ, ಅಕ್ಬರ್, ಶರೀಫ್ ಹೀಗೆ ಹಲವಾರು ಹೆಸರುಗಳನ್ನು ಉದಾಹರಿಸಬಹುದು. ಚರಿತ್ರೆಯಲ್ಲಿ ಕೆಟ್ಟ ವ್ಯಕ್ತಿತ್ವ ಉಳ್ಳವನ ಹೆಸರನ್ನು ಸಾಮಾನ್ಯವಾಗಿ ಯಾರೂ ಇಡುವುದಿಲ್ಲ. ಚರಿತ್ರೆಯಲ್ಲಿ ಸೇರಿದ ಗಾಂಧಿಯ ಹೆಸರನ್ನು ಇಟ್ಟಿರುವುದನ್ನು ನೋಡುತ್ತೇವೆ. ಆದರೆ ನಾಥೂರಾಮ್ ಗೂಡ್ಸೆ ಹೆಸರನ್ನು ಯಾರೂ ಇಡುವುದಿಲ್ಲ.

'ಮಹಾತ್ಮಗಾಂಧಿ' ಹೆಸರಿನಲ್ಲಿ ವಾರ್ಗಿಕ ಭಾಗವನ್ನು ಮಾತ್ರ ಜನಸಾಮಾನ್ಯರು ಸ್ವೀಕರಿಸಿದ್ದಾರೆ. ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲದಲ್ಲಿ ದಲಿತ ವರ್ಗಕ್ಕೆ ಸೇರಿದ ವ್ಯಕ್ತಿಯೊಬ್ಬ ಗಾಂಧಿ+ಅಣ್ಣ = ಗಾಂಧಣ್ಣ ಹೆಸರುಳ್ಳ ವ್ಯಕ್ತಿ ಇದ್ದಾನೆ. ಯಳಂದೂರು ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಆಲ್ಕೆರೆ ಅಗ್ರಹಾರ ಗ್ರಾಮದಲ್ಲಿ 'ಗಾಂಧಿ ಪುಟ್ಟಮಾದಯ್ಯ' ಹೆಸರುಳ್ಳ ವ್ಯಕ್ತಿ ಕಂಡುಬರುತ್ತಾನೆ. ಹಾಸನ ಜಿಲ್ಲೆಯಲ್ಲಿ 'ವಿನಯಗಾಂಧಿ' ಹೆಸರುಳ್ಳ ವ್ಯಕ್ತಿ ಇದ್ದಾನೆ. ಮೈಸೂರಿನಲ್ಲಿ ಶ್ರೀ 'ರಮೇಶ್‌ಗಾಂಧಿ' ಹೆಸರಿನವರು ಇದ್ದಾರೆ. ಟಿ. ನರಸೀಪುರ ತಾಲ್ಲೂಕು, ತಲಕಾಡು ಗ್ರಾಂದಲ್ಲಿ 'ಅಂಬೇಡ್ಕರ್' ಹೆಸರುಳ್ಳ ವ್ಯಕ್ತಿಗಳಿದ್ದಾರೆ. 'ವಿವೇಕಾನಂದ' 'ಪರಮಹಂಸ' ಮತ್ತು 'ಅರವಿಂದ' ಮುಂತಾದ ದಾರ್ಶನಿಕರ ಹೆಸರುಳ್ಳ ವ್ಯಕ್ತಿಗಳು ಕಂಡುಬರುತ್ತಾರೆ.

ಭಾರತದ ಮಾಜಿ ಪ್ರಧಾನಮಂತ್ರಿ ದಿವಂಗತ ಶ್ರೀಮತಿ 'ಇಂದಿರಾಗಾಂಧಿ' ಹೆಸರಿನ ಪ್ರಭಾವದಿಂದ ಮೈಸೂರಿನಲ್ಲಿ 'ಇಂದಿರಾಗಾಂಧಿ' ಹೆಸರುಳ್ಳ ವ್ಯಕ್ತಿಗಳಿದ್ದಾರೆ. 'ರವೀಂದ್ರನಾಥ ಠಾಕೂರ್' ಮತ್ತು 'ಜಯಪ್ರಕಾಶ್ ನಾರಾಯಣ' ಅವರುಗಳ ಹೆಸರಿನ ಪ್ರಭಾವದಿಂದ ನಮ್ಮಲ್ಲಿ ರವೀಂದ್ರನಾಥ ಠಾಕೂರ್ ಮತ್ತು ಜಯಪ್ರಕಾಶ್ ನಾರಾಯಣ ಹೆಸರುಗಳು ಬೆಳಕಿಗೆ ಬಂದಿವೆ. 'ಗೌತಮಬುದ್ಧ' ಹೆಸರಿನ ಪ್ರಭಾವದಿಂದ 'ಬುದ್ಧ' ಹೆಸರುಳ್ಳ ವ್ಯಕ್ತಿಗಳು ಕಂಡುಬರುತ್ತಾರೆ. 'ಗೌತಮ' 'ಬುದ್ಧ' ಎಂದು ಬಿಡಿ, ಬಿಡಿ ನಿರ್ದಿಷ್ಟ ಭಾಗದ ಹೆಸರುಳ್ಳ ವ್ಯಕ್ತಿಗಳಿದ್ದಾರೆ. 'ವಿವೇಕಾನಂದ' 'ಪರಮಹಂಸ' ಮತ್ತು 'ಅರವಿಂದ' ಮುಂತಾದ ದಾರ್ಶನಿಕರ ಹೆಸರುಳ್ಳ ವ್ಯಕ್ತಿಗಳು ಕಂಡುಬರುತ್ತಾರೆ.

ಚರಿತ್ರೆಯಿಂದ ಹೆಸರುಗಳನ್ನು ಪಡೆದಂತೆ ನಿಸರ್ಗದಿಂದಲೂ ಅನೇಕ ಹೆಸರುಗಳನ್ನು ಪಡೆದಿದ್ದಾರೆ. ಸಮುದ್ರಗುಪ್ತ ಎನ್ನುವ ಹೆಸರು ಸಾವಿರಾರು ವರ್ಷಗಳ ಹಿಂದೆಯೇ ಬಳಕೆಯಾಗಿರುವುದನ್ನು ಗಮನಿಸಬಹುದು. ಭೂಮಿ, ಆಕಾಶ, ಸಮುದ್ರ, ನೀರು, ಗಾಳಿ, ಸೂರ್ಯ, ಚಂದ್ರ ಮತ್ತಿತರ ಪ್ರಕೃತಿಗೆ ಸಂಬಂಧಿಸಿದ ನೂರಾರು ಹೆಸರುಗಳನ್ನು ವ್ಯಕ್ತಿನಾಮವಾಗಿ ಬಳಸಿಕೊಂಡಿದ್ದೇವೆ. ವಸುಧಾ, ವಸುಂಧರಾ, ಗಂಗೆ, ಸಾಗರ, ಭೂಮಿಕಾ, ಆಕಾಶ, ಧರೆ, ಧರಣಿ, ಧರಿತ್ರಿ, ಮೇಘ, ಮೇಘರಾಜ, ಸೂರ್ಯ, ಚಂದ್ರ, ಜ್ವಾಲಾ ಮುಂತಾದ ಹೆಸರುಗಳ ಪಟ್ಟಿಯನ್ನೇ ನೀಡಬಹುದು.

ಹಾಗೆಯೇ ಕ್ರೀಡಾಪಟುಗಳಾದ ಸಚಿನ್, ಕಪಿಲ್‌ದೇವ್, ಸೋಯಬ್‌ಅಕ್ತರ್, ಇಮ್ರಾನ್‌ಖಾನ್, ಚಲನಚಿತ್ರ ತಾರೆಯರಾದ ಅಮೀರ್‌ಖಾನ್, ಶಾರೂಕ್‌ಖಾನ್, ರಾಜಕುಮಾರ್, ವಿಷ್ಣುವರ್ಧನ್, ಅರ್ಜುನ್, ಶಿವರಾಜ್‌ಕುಮಾರ್ ಮುಂತಾದ ಪ್ರಸಿದ್ಧ ವ್ಯಕ್ತಿಗಳ ಹೆಸರುಗಳನ್ನೂ ನೂರಾರು ಮಕ್ಕಳಿಗೆ ಇಟ್ಟಿದ್ದಾರೆ. ಈ ಪ್ರಕ್ರಿಯೆ ಈಗಲೂ ಚಾಲ್ತಿಯಲ್ಲಿದೆ.

ಕುಟುಂಬದ ಹಿರಿಯರ ಹೆಸರುಗಳನ್ನು ತಮ್ಮ ಮಕ್ಕಳಿಗೆ ಬಹಳ ಹಿಂದಿನಿಂದಲೂ ನಾಮಕರಣ ಮಾಡುತ್ತಾ ಬಂದಿದ್ದಾರೆ. ಒಂದು ಕುಟುಂಬದಲ್ಲಿ ವಯಸ್ಸಾದ ಯಜಮಾನ ತೀರಿಕೊಂಡ ಮೇಲೆ ಆತನ ನೆನಪಿಗಾಗಿ ಅದೇ ಕುಟುಂಬದ ಮಗುವಿಗೆ ಆ ಹೆಸರು ಇಡಲಾಗುತ್ತದೆ. ತಾತನ ಹೆಸರು 'ರಂಗಪ್ಪ' ಎಂದು ಇದ್ದರೆ ಮೊಮ್ಮಗನಿಗೆ 'ರಂಗಪ್ಪ' ಎಂದು, ತಂದೆಯ ಹೆಸರು 'ಕೆಂಪೇಗೌಡ' ಎಂದು ಇದ್ದರೆ ಮಗನ ಹೆಸರು ಕೆಂಪೇಗೌಡ ಎಂದು ಇರುವುದನ್ನೂ ನೋಡಿದ್ದೇವೆ.

ಮೌಲ್ಯ ಆರೋಪಿತ ವಸ್ತುಗಳ ಹೆಸರುಗಳನ್ನು ಮನುಷ್ಯ ವ್ಯಕ್ತಿನಾಮವಾಗಿ ಬಳಸಿಕೊಂಡಿದ್ದಾನೆ. ಬಂಗಾರ, ಚಿನ್ನ, ಬೆಳ್ಳಿ, ಹಾಲು, ವಜ್ರ, ಪುಷ್ಪ, ಕಮಲ, ಹೊನ್ನು ಮುಂತಾದ ಮೌಲ್ಯವನ್ನು ಆರೋಪಿಸುವ ಹೆಸರುಗಳಿಗೆ ಸಂಬಂಧವಾಚಿ ಪದಗಳನ್ನು ಸೇರಿಸಿ ಇಲ್ಲವೇ ವಾರ್ಗಿಕವೋ ಸೇರಿಸಿ ವ್ಯಕ್ತಿಗಳಿಗೆ ಹೆಸರನ್ನು ಇಡಲಾಗಿದೆ. ಉದಾಹರಣೆಗೆ : ಹೊನ್ನಪ್ಪ, ಚಿನ್ನಪ್ಪ, ಹೊನ್ನಮ್ಮ, ವಜ್ರಮುನಿ, ಹಾಲಮ್ಮ, ಹಾಲಪ್ಪ, ಬಂಗಾರಪ್ಪ, ಹೊನ್ನೇಗೌಡ, ಚಿನ್ನೇಗೌಡ ಮುಂತಾದ ಹೆಸರುಗಳನ್ನು ಕೊಡಬಹುದು.

ಮುದ್ದು ಪ್ರೀತಿಯ ಹೆಸರುಗಳ ರಚನೆಯನ್ನು ಎರಡು ರೀತಿಯಲ್ಲಿ ಕಾಣುತ್ತೇವೆ.

೧) ನಿಜನಾಮವನ್ನು ಮೊಟಕುಗೊಳಿಸಿ ಕರೆಯುವುದು

೨) ನಿಜನಾಮವನ್ನು ಬಿಟ್ಟು ಬೇರೆ ಬಳಸುವುದು

ಉದಾಹರಣೆಗೆ :

ವಿಜಯಮ್ಮಳಿಗೆ	–	ವಿಜಿ ಎಂದು
ರಾಜಮ್ಮಳಿಗೆ	–	ರಾಜಿ ಎಂದು
ರುಕ್ಮಿಣಿಗೆ	–	ರುಕ್ಕು ಎಂದು
ಸರೋಜಮ್ಮಳಿಗೆ	–	ಸರೂ ಎಂದು
ಸರಸ್ವತಿಗೆ	–	ಸರಸು ಎಂದು
ಅನಿತಳಿಗೆ	–	ಅನಿ ಎಂದು ಕರೆಯುವುದೂ ಉಂಟು.

ಅಡ್ಡ ಹೆಸರುಗಳು ಸಾಮಾನ್ಯವಾಗಿ ವ್ಯಕ್ತಿಯ ಆಕಾರ, ನಡೆನುಡಿ ಇತ್ಯಾದಿಗಳನ್ನು ಅವಲಂಬಿಸಿ ರೂಪುಗೊಳ್ಳುತ್ತವೆ. ಇನ್ನು ಕೆಲವೊಮ್ಮೆ ಹೆಸರಿನ ಮೊದಲು ಬಂದು ಸಹ ನಿರ್ದಿಷ್ಟವಾಗುತ್ತದೆ. ಉದಾಹರಣೆಗೆ : ಬ್ಲೇಡ್‌ಬೈರ, ಸ್ಪಾಟ್‌ನಾಗ, ಬಡಿಮ್ ಮಾದ, ಮಚ್‌ಮುನಿಯ, ಮುಂತಾದವು.

ಸ್ತ್ರೀಯರ ಹೆಸರುಗಳಲ್ಲಿ ತಂದೆಯ/ಪತಿಯ ಹೆಸರು ವಾರ್ಗಿಕವಾಗಿ ಬಂದಂತಹುದು. ಸುನೀತಾ ವಿಲಿಯಮ್ಸ್, ನಿರುಪಮಾ ರಾವ್, ಯಶೋಧರ ದಾಸಪ್ಪ, ಲತಾ ರಾಜಶೇಖರ್, ಫಲ್ಗುಣಿ ರಾಜಕುಮಾರ್, ಸುಶೀಲ ಕೇಶವಮೂರ್ತಿ ಮುಂತಾದವು.

ಸದ್ಯದ ಪರಿಸ್ಥಿತಿಯಲ್ಲಿ ಜಾತಿ, ಧರ್ಮ, ಜನಾಂಗ ಮುಂತಾದವನ್ನೂ ಗುರ್ತಿಸಬಹುದಾಗಿದೆ.

❑

೫. ಶ್ರಮವಿಭಜನೆ ಆರ್ಥಿಕ ವ್ಯವಸ್ಥೆ ಮತ್ತು ಅಂಬೇಡ್ಕರ್

-ಎಂ. ರಾಜಪ್ಪಾಜಿ

"ಅಂತರರಾಷ್ಟ್ರೀಯತೆ ಕಾರ್ಮಿಕನ ಮತ ಅಥವಾ ನಂಬುಗೆ. ಕಾರ್ಮಿಕ ರಾಷ್ಟ್ರೀಯತೆಯಲ್ಲಿ ಏಕೆ ನಂಬುಗೆ ಹೊಂದಿದ್ದಾರೆಂದರೆ, ಅದು ಪ್ರಜಾಪ್ರಭುತ್ವದ ಚಕ್ರಗಳಾದ ಪ್ರಾತಿನಿಧಿಕ ಸಂಸತ್ತು. ಜವಾಬ್ದಾರಿ ಕಾರ್ಯಾಂಗ, ಸಂವಿಧಾನಾತ್ಮಕ ರೂಢಿ ನಿಯಮ ಮುಂತಾದ ರಾಷ್ಟ್ರೀಯ ಭಾವನೆಗಳಿರುವ ಒಂದುಗೂಡಿನ ಸಮುದಾಯದಲ್ಲಿ ಚೆನ್ನಾಗಿ ಕೆಲಸ ಮಾಡುತ್ತದೆ. ಕಾರ್ಮಿಕರಿಗೆ ರಾಷ್ಟ್ರೀಯತೆ ಒಂದು ಗುರಿಮುಟ್ಟುವ ಸಾಧನ ಅಥವಾ ಮಾರ್ಗವಾಗಿದೆ. ಅದೇ ಗುರಿಯಾಗಿರುವುದಿಲ್ಲ. ಇದಕ್ಕಾಗಿ ಕಾರ್ಮಿಕ ನಂಬಿರುವ ತನ್ನ ಜೀವನದ ಅತ್ಯಾವಶ್ಯಕವಾದ ಮೂಲತತ್ವಗಳನ್ನು ಬಲಿಕೊಡಲು ಒಪ್ಪಲಾರ".

– ಬಿ. ಆರ್. ಅಂಬೇಡ್ಕರ್

(ಡಿಸೆಂಬರ್ ೧೯೪೩ರಲ್ಲಿ ಮುಂಬಯಿಯ ಆಲ್ ಇಂಡಿಯಾ ರೇಡಿಯೋ ಕೇಂದ್ರದಿಂದ ಪ್ರಸಾರ ಮಾಡಿದ ಭಾಷಣದಿಂದ)

ಪ್ರಸ್ತುತ ಸಾಮಾಜಿಕ ವಿಜ್ಞಾನಗಳಲ್ಲಿ ಬಹುಮುಖ್ಯವಾಗಿ ಪ್ರಭಾವಶಾಲಿ ಅಧ್ಯಯನದ ವಿಷಯವಾಗಿ ಹೊರ ಹೊಮ್ಮುತ್ತಿರುವ ಅರ್ಥಶಾಸ್ತ್ರವೂ ಅನೇಕ ಆಯಾಮಗಳಾಗಿ ವಿಭಜನೆಗೊಂಡಿದೆ. ಅವುಗಳಲ್ಲಿ ಶ್ರಮ ಅರ್ಥವ್ಯವಸ್ಥೆ ಗಮನಾರ್ಹ ವಾದುದ್ದಾಗಿರುತ್ತದೆ. ಒಂದು ಅರ್ಥವ್ಯವಸ್ಥೆಯಲ್ಲಿನ ಎಲ್ಲಾ ಉತ್ಪಾದನಾ ಪ್ರಕ್ರಿಯೆಗಳಲ್ಲಿ ಶ್ರಮವು ಒಂದು ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಇಲ್ಲಿ ಶ್ರಮವೆಂಬುದು ಬಹುವಿಶಾಲವಾದ ಅರ್ಥದಲ್ಲಿ ನೋಡುವುದಾದರೆ, ದೈಹಿಕ ಹಾಗೂ ಮಾನಸಿಕ ಎರಡೂ ಬಗೆಯ ಪ್ರಚಲಿತಗಳನ್ನು ಒಳಗೊಂಡಿರುತ್ತದೆ. ಈ ಎರಡು ರೀತಿಯ

ಶ್ರಮವು ವ್ಯಕ್ತಿಗಳಲ್ಲಿ ಮಾನವರು ಅಡಕವಾಗಿರುವುದರಿಂದ ಶ್ರಮವನ್ನು ಮಾನವನಿಂದ ಬೇರ್ಪಡಿಸುವ ಸಾಧ್ಯತೆಯೂ ಅಸಾಧ್ಯ. ಹೀಗಾಗಿ ಶ್ರಮ ಆರ್ಥಿಕ ವ್ಯವಸ್ಥೆಯಲ್ಲಿ ಶ್ರಮದಿಂದ ಕುರಿತಾದ ಪ್ರತಿಯೊಂದು ವಿಷಯಗಳನ್ನು ವ್ಯಕ್ತಿಗತ ರೂಪುರೇಷೆಯಲ್ಲಿ ಅಧ್ಯಯನವನ್ನು ಮಾಡಲಾಗುವುದು. ಅಂದರೆ, ಉತ್ಪಾದನಾ ಪ್ರಕ್ರಿಯೆಯಲ್ಲಿ ಬಳಸಲ್ಪಡುವ ಇನ್ನಿತರ ಉತ್ಪಾದನಾಂಗಗಳಾದ ಭೂಮಿ ಮತ್ತು ಬಂಡವಾಳ ಇನ್ನಿತರ ಬಂಡವಾಳಗಳಿಗಿಂತ ಶ್ರಮವು ಹೆಚ್ಚಿನ ರೀತಿಯಲ್ಲಿ ವಿಭಿನ್ನ ಹಾಗೂ ವೈಶಿಷ್ಟ್ಯ ರೂಪದಲ್ಲಿ ಕಂಡುಬರುತ್ತದೆ. ಈ ಕಾರಣಕ್ಕಾಗಿಯೇ ಇದರ ಅಧ್ಯಯನಕ್ಕಾಗಿ ಪ್ರತ್ಯೇಕವಾದಂತಹ ರೂಪುರೇಷೆಯನ್ನು ತಯಾರಿಸುವ ಅಗತ್ಯತೆ ಇದೆ.

ಒಂದು ಅರ್ಥವ್ಯವಸ್ಥೆಯಲ್ಲಿನ ಶ್ರಮದ ಒಟ್ಟು ಬೇಡಿಕೆ ಮತ್ತು ನೀಡಿಕೆಯೂ ಮಾರುಕಟ್ಟೆ ಹಾಗೂ ಇವುಗಳನ್ನು ನಿರ್ಧರಿಸುವ ಅಂಶಗಳಲ್ಲಿ ವೈಜ್ಞಾನಿಕ ದೃಷ್ಟಿಯಿಂದ ವಿಶ್ಲೇಷಣೆಗೆ ಒಳಪಡಿಸಬೇಕಾಗುತ್ತದೆ. ಇದರ ಜೊತೆಗೆ ಉತ್ಪಾದನಾ ಪ್ರಕ್ರಿಯೆಯಿಂದ ಹೊರಬರುವಂತಹ ಸರಕು ಮತ್ತು ಸೇವೆಗಳ ಮೌಲ್ಯದಲ್ಲಿ ಶ್ರಮದ ಕೊಡುಗೆಯು ಬಹುಮುಖ್ಯವಾದುದು. ಈ ವಿಷಯವನ್ನು ಆರಂಭದಿಂದಲೂ ಆರ್ಥಿಕ ತಜ್ಞರು ಪ್ರಬಲವಾಗಿ ಪ್ರತಿಪಾದಿಸುತ್ತಲೇ ಬಂದಿರುವುದನ್ನು ಕಾಣಬಹುದು.

ಉತ್ಪನ್ನ ಪ್ರಕ್ರಿಯೆಯಲ್ಲಿ ಒಳಪಡಿಸುವಂತಹ ಶ್ರಮವು ಮಾನವರಲ್ಲಿ ಅಡಕವಾಗಿರುವುದರಿಂದ ಶ್ರಮದ ಬಳಕೆಯೆಂದರೆ ಮಾನವರ ಬಳಕೆಯೇ ಎಂದಾಗುತ್ತದೆ. ಆರ್ಥಿಕ ಉತ್ಪಾದನಾ ಪ್ರಕ್ರಿಯೆಯಲ್ಲಿ ಮನುಷ್ಯರನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಯಲ್ಲಿ ಅದಕ್ಕೂ ಇಲ್ಲಿ ಉತ್ಪಾದನಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ರೀತಿ-ನೀತಿ ಹಾಗೂ ಅವಧಿ ಬಹುಮುಖ್ಯ. ಶ್ರಮಕ್ಕೆ ಪ್ರತಿಯಾಗಿ ಅವರಿಗೆ ನೀಡುವಂತಹ ಸಂಭಾವನೆ ಎಂದರೆ, ಕೂಲಿ ಮತ್ತು ಇದರ ಸ್ವರೂಪ ಮುಂತಾದ ಎಲ್ಲಾ ವಿಷಯಗಳು ಅಡಕವಾಗಿರುತ್ತದೆ. ಉತ್ಪಾದನಾ ಪ್ರಕ್ರಿಯೆ ತೊಡಗಿಸಿಕೊಳ್ಳುವ ಪ್ರತಿಯಾಗಿ ಪಡೆಯುವ ಸಂಭಾವನೆಯು ಮಾನವರ ಅಥವಾ ಶ್ರಮಿಕರ ಜೀವನ ಮಟ್ಟವನ್ನು ಸುಧಾರಿಸುವ ಹಾಗೂ ಪ್ರಭಾವಿಸುವ ನಿರ್ಣಾಯಕ ಅಂಶವಾಗಿರುತ್ತದೆ. ಹಾಗೂ ಶ್ರಮಿಕ ವರ್ಗದ ದುಡಿಮೆಯ ಸ್ವರೂಪ.

ಕೆಲಸದಲ್ಲಿನ ದುಡಿಮೆ ಹಾಗೂ ವಾತಾವರಣ ಇವುಗಳೆಲ್ಲವೂ ಕೂಡ ಮುಖ್ಯ ಅಂಶಗಳೆಂದು ಪರಿಗಣಿಸಲಾಗುವುದು.

ಈ ರೀತಿಯಾಗಿ ಶ್ರಮ ವಿಭಜನೆಯ ಆರ್ಥಿಕ ವ್ಯವಸ್ಥೆಯಲ್ಲಿ ಮೇಲೆ ವಿವರಿಸಿದಂತೆ ಈ ಕೆಳಕಂಡ ಬಹುಮುಖ್ಯವಾದಂತಹ ಅಂಶಗಳನ್ನು ಅಧ್ಯಯನ ಮಾಡುವುದು ಅತ್ಯವಶ್ಯಕವಾಗಿರುತ್ತದೆ.

೧. ಶ್ರಮ ಬೇಡಿಕೆ ಮತ್ತು ಅದರ ವಿತರಕರು
೨. ಶ್ರಮದ ನೀಡಿಕೆ ಮತ್ತು ನಿರ್ಧಾರಕಗಳು
೩. ಶ್ರಮದ ಮಾರುಕಟ್ಟೆ ಹಾಗೂ ಇತರೆ ಮಾರುಕಟ್ಟೆಗಳ ನಡುವಿನ ಸಂಬಂಧ
೪. ಕೂಲಿಗಾರ ಮತ್ತು ಆತನು ನಿರ್ಧರಿಸುವ ಅಂಶಗಳು
೫. ಕೆಲಸ ಮಾಡುವ ಪರಿಸರದ ಸ್ವರೂಪ, ಪೂರಕ ಸೌಲಭ್ಯಗಳು ಹಾಗೂ ಇನ್ನೂ ಮುಂತಾದವುಗಳು, ಶ್ರಮಿಕರ ಆರೋಗ್ಯದ ಮೇಲೆ ಪ್ರಭಾವ ಬೀರುವುದರಿಂದ ಇವುಗಳ ಅಧ್ಯಯನ
೬. ಶ್ರಮಿಕರಿಗೆ ದೊರೆಯಬೇಕಾಗಿರುವ ಇತರೆ ಸೌಲಭ್ಯಗಳು
೭. ಕಾರ್ಮಿಕ ಸಂಘಟನೆಗಳ ಸ್ವರೂಪ, ರಚನೆ ಹಾಗೂ ಪಾತ್ರ
೮. ಕಾರ್ಮಿಕ ಜೀವಾವಿಮೆ ಹಾಗೂ ಇತರೆ ಸೌಲಭ್ಯಗಳು
೯. ಶ್ರಮಿಕರ ವಸತಿ, ಶಿಕ್ಷಣ, ಕುಡಿಯುವ ನೀರು ಮತ್ತು ನೈರ್ಮಲ್ಯ ಹಾಗೂ ಮನರಂಜನೆ ಸೌಲಭ್ಯಗಳು
೧೦. ಕೈಗಾರಿಕಾ ಪ್ರಜಾಪ್ರಭುತ್ವ
೧೧. ಶ್ರಮಿಕರ ಶಾಸನಗಳು

ಈ ಮೇಲೆ ಪ್ರಸ್ತಾಪಿಸಲಾಗಿರುವಂತಹ ಪ್ರತಿಯೊಂದು ವಿಚಾರಧಾರೆಗಳೂ ಸಹ ಶ್ರಮ ಅರ್ಥಶಾಸ್ತ್ರದಲ್ಲಿ ಬಂದಿರುವುದರಿಂದ ಇವುಗಳ ಅಧ್ಯಯನ ಹಾಗೂ ವಿಶ್ಲೇಷಣೆಯು ಒಂದರ್ಥದಲ್ಲಿ ಶ್ರಮಿಕರ, ಅಂದರೆ, ಮಾನವಕುಲದ ಜೀವನಮಟ್ಟ ಹಾಗೂ ಸ್ಥಿತಿಗತಿಗಳನ್ನು ಕುರಿತಾದ ವಿಷಯಗಳೇ ಆಗಿರುತ್ತದೆ. ಆದರೆ, ಇಲ್ಲಿ ಶ್ರಮವನ್ನು ಉತ್ಪದನಾ ಅಂಗ ಕ್ರಿಯೆಯಲ್ಲಿ ಉತ್ಪಾದನಾಂಗವಾಗಿ ಬಳಸುವುದರಿಂದ ಇದನ್ನು ಶ್ರಮ ವಿಭಜನೆಯ ಆರ್ಥಿಕ ವ್ಯವಸ್ಥೆ ಅಥವಾ ಶ್ರಮ ಅರ್ಥಶಾಸ್ತ್ರವೆಂದು ಕರೆಯಲಾಗುವುದು. ಆದ್ದರಿಂದಲೇ ಇದನ್ನು ಮಾನವಾಭಿವೃದ್ಧಿಯ ದೃಷ್ಟಿಕೋನದಲ್ಲಿ ಜನರ ಜೀವನಮಟ್ಟವು ಪ್ರಮುಖವೆನಿಸುತ್ತದೆ.

ಉತ್ಪಾದನಾ ಪ್ರಕ್ರಿಯೆಯಲ್ಲಿ ಬಹುಮುಖ್ಯವಾದ ನಿರ್ಣಾಯಕ ಪಾತ್ರವನ್ನು ವಹಿಸುವಂತಹ ಶ್ರಮವು ಮಾನವನಲ್ಲಿ ಅಡಕವಾಗಿರುವ ಉತ್ಪಾದನೆಯ ಭಾಗವಾಗಿ ಶ್ರಮಜೀವಾಳು ಉತ್ಪನ್ನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಾ ಇರುವುದರಿಂದ ಇತರೆ ಉಪಾದನಾಂಗಗಳಿಗಿಂತ ಶ್ರಮದ ಸ್ವರೂಪ ಮತ್ತು ಪ್ರಾಮುಖ್ಯತೆಯು ವಿಶಿಷ್ಟವಾದುದೆಂದು ಈಗಾಗಲೇ ತಿಳಿಸಲಾಗಿರುತ್ತದೆ. ಹಾಗೆಯೇ ಉತ್ಪಾದನೆಯಾದ ಸರಕು ಮತ್ತು ಸೇವೆಯಲ್ಲಿ ಶ್ರಮದ ಪಾತ್ರವು ಪ್ರಮುಖ ಹಾಗೂ ನಿರ್ಣಾಯಕವಾಗಿದ್ದು, ಇದಕ್ಕೆ ಪ್ರತಿಫಲವಾಗಿ ಸಿಗುವಂತಹ ಸಂಭಾವನೆಯಾದ ಕೂಲಿಯೂ ಪ್ರಾಮುಖ್ಯತೆಯನ್ನು ಪಡೆದುಕೊಂಡಿದೆ. ಶ್ರಮಬಳಕೆ ಮತ್ತು ಅದರ ಸಂಭಾವನೆ ಮುಂತಾದ

ವಿಷಯಗಳೆಲ್ಲವೂ ಬಹುಮುಖ್ಯವೆನಿಸುತ್ತದೆ. ಸರಕುಗಳನ್ನಷ್ಟೇ ಅಲ್ಲದೆ, ಅನೇಕ ಬಗೆಯ ಸೇವೆಗಳನ್ನು ಸೃಷ್ಟಿಸುವಂತಹ ಪ್ರಕ್ರಿಯೆಯಲ್ಲಿ ಬಳಸಲ್ಪಡುವ ಶ್ರಮವು ಎಲ್ಲಾ ಮಾನವರಲ್ಲಿ ಅಡಕವಾಗಿರುವುದರಿಂದ ಅವುಗಳ ನಡುವಿನ ತಾರತಮ್ಯ ಭೇದಭಾವಸಲ್ಲದು ಹಾಗೂ ಶ್ರಮವಿರುವ ಎಲ್ಲಾ ಮಾನವರನ್ನು ಉತ್ಪಾದನ ಪ್ರಕ್ರಿಯೆಯಲ್ಲಿ ಬಳಸಿಕೊಂಡು ಇದಕ್ಕೆ ಪ್ರತಿಯಾಗಿ ನೀಡಬೇಕಾದ ನ್ಯಾಯಸಮ್ಮತ ಸಂಭಾವನೆಯನ್ನು ಕೊಡುವುದು. ಶ್ರಮಿಕ ಸಹವಾದ ಮಾರ್ಗವೇ ಆಗಿದೆ. ಆದರೆ, ಅನೇಕ ಕಾರಣಗಳಿಂದಾಗಿ ಅನೇಕ ಸಂದರ್ಭಗಳಲ್ಲಿ ಈ ಶ್ರಮಿಕರನ್ನು ತಾರತಮ್ಯದಿಂದ ದುಡಿಸಿಕೊಳ್ಳಲಾಗುತ್ತದೆ.

ಈ ಮಹತ್ವಪೂರ್ಣವಾದಂತಹ ವಿಷಯಗಳನ್ನು ಕುರಿತಂತೆ ವಿಶ್ವಮಟ್ಟದ ಅನೇಕ ಆರ್ಥಿಕ ಚಿಂತಕರು ಹಾಗೂ ತಜ್ಞರುಗಳು ಕಾಲದಿಂದ ಕಾಲಕ್ಕೆ ಅನೇಕ ರೂಪುರೇಷೆಗಳನ್ನು ಸಿದ್ಧಾಂತಗಳನ್ನು, ಅಭಿವೃದ್ಧಿಪಡಿಸಿ ಶ್ರಮಿಕರ ಉಪಯೋಗ ಕುರಿತಂತೆ ಅನೇಕ ಸಂಗತಿಗಳನ್ನು ಹೊರತಂದಿದ್ದಾರೆ. ಅಂತಹವರಲ್ಲಿ ಶ್ರಮಿಕ ವರ್ಗದ ವಿಮೋಚಕರಾಗಿ ಉದಯಿಸಿದಂತಹ ಬಾಬಾಸಾಹೇಬ್ ಅಂಬೇಡ್ಕರ್ ಅವರು ಒಬ್ಬ ಶುದ್ಧ ಅರ್ಥವಿಜ್ಞಾನಿಯಾಗಿ ಹಾಗೂ ಮಾನವ ಸಮಾಜದ ವಿಶ್ಲೇಷಕರಾಗಿ ಭಾರತದಲ್ಲಿನ ಶ್ರಮಶೋಷಣೆಯ ಮತ್ತು ತಾರತಮ್ಯದ ಬಗೆಗಳನ್ನು ಕುರಿತು ಆಳವಾದ ಅಧ್ಯಯನ ಹಾಗೂ ಸಂಶೋಧನೆಗಳನ್ನು ನಡೆಸುವ ಮುಖೇನ ಹೊಸ ಸಿದ್ಧಾಂತವನ್ನೇ ಈ ಜಗತ್ತಿಗೆ ನೀಡಿದ್ದಾರೆ.

ಶ್ರಮ ಶೋಷಣೆ

ಶ್ರಮ ಶೋಷಣೆಯನ್ನು ಕುರಿತಂತೆ ಬಂಡವಾಳ ವ್ಯವಸ್ಥೆಯಲ್ಲಿ ಬಹುಮುಖ್ಯವಾಗಿ ಕಂಡುಬರುವಂತಹ ಸಂಗತಿಯನ್ನು ವೈಜ್ಞಾನಿಕವಾದ ವಿಶ್ಲೇಷಣೆಗೆ ಒಳಪಡಿಸಿರುವ ಕೀರ್ತಿಯೂ ಕಾರ್ಲ್‌ಮಾರ್ಕ್ಸ್ ಅವರಿಗೆ ಸಲ್ಲುತ್ತದೆ. ಬಂಡವಾಳ ಶಾಹಿ ವ್ಯವಸ್ಥೆಯಲ್ಲಿ ಶ್ರಮಿಕರನ್ನು ಹೆಚ್ಚು-ಹೆಚ್ಚು ಅವಧಿಗೆ ತೊಡಗಿಸಿಕೊಂಡು ಸರಿಸಮನಾದ ಸಂಭಾವನೆಯನ್ನು ನೀಡದೇ ಅವರನ್ನು ಶೋಷಿಸುತ್ತಿರುವಂತಹ ಅಮಾನವೀಯವಾದ ವ್ಯವಸ್ಥೆಯ ಸ್ವರೂಪವನ್ನು ಕಾರ್ಲ್‌ಮಾರ್ಕ್ಸ್ ತನ್ನ 'ದಾಸ್ ಕ್ಯಾಪಿಟಲ್' ಎನ್ನುವ ಗ್ರಂಥದಲ್ಲಿ ಸವಿಸ್ತಾರವಾಗಿ ತೆರೆದಿಟ್ಟಿರುತ್ತಾರೆ. ತನ್ನ ಈ ಸೈದ್ಧಾಂತಿಕವಾದ ನಿರೂಪಣೆಯಲ್ಲಿ ಮಾರ್ಕ್ಸ್ ಕೇವಲ ಎರಡು ವರ್ಗಗಳನ್ನು ಮಾತ್ರ ಗುರುತಿಸುತ್ತಾರೆ. ಮೊದಲನೆಯದು ಬಂಡವಾಳ ವರ್ಗ ಹಾಗೂ ಎರಡನೆಯದು ಕಾರ್ಮಿಕ ವರ್ಗ ಅಥವಾ ಶ್ರಮಿಕವರ್ಗವಾಗಿರುತ್ತದೆ.

ಬಂಡವಾಳಗಾರರು ಕಾರ್ಮಿಕ ವರ್ಗವನ್ನು ಹೆಚ್ಚು ಹೆಚ್ಚಾಗಿ ಶೋಷಣೆಗೆ ಒಳಪಡಿಸುವ ಮುಖೇನ ಅಲ್ಲಿಂದ ಬರುವಂತಹ ಆದಾಯದ ಮೇಲಿನ ಬಹುಪಾಲನ್ನು ತಾವೇ ಅನುಭವಿಸಿ, ಕಾರ್ಮಿಕರ ಸ್ಥಿತಿಗತಿಗಳು ಅಧೋಗತಿಗೆ ಇಳಿಯಲು ಇವರೇ ಪ್ರಮುಖ ಕಾರಣಕರ್ತರಾಗುತ್ತಾರೆ. ಈ ಬಗೆಯ ಶೋಷಣೆಯನ್ನು ತಡೆಗಟ್ಟಲೂ ಸಮಸ್ತ ಕಾರ್ಮಿಕರೆಲ್ಲರೂ ಒಂದುಗೂಡಿ ಬಂಡವಾಳಶಾಹಿಗಳ ವಿರುದ್ಧ ಪ್ರತಿಭಟಿಸುವ ಮೂಲಕ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಲು ಶ್ರಮಿಕವರ್ಗದವರನ್ನು ಒಳಗೊಂಡ ಒಂದು ಕಾರ್ಮಿಕ ರಾಜ್ಯವನ್ನು ಸ್ಥಾಪಿಸುತ್ತಾರೆ. ಇಲ್ಲಿ ಬಹುಮುಖ್ಯವಾಗಿ ಕಂಡುಬರುವ ಅಂಶಗಳೆಂದರೆ, ಈಗಾಗಲೇ ತಿಳಿಸಲಾಗಿರುವ ಬಂಡವಾಳಗಾರರು ಹಾಗೂ ಶ್ರಮಿಕರು ಎನ್ನುವ ಎರಡು ವರ್ಗಗಳು ಮಾತ್ರ ಕಂಡುಬರುತ್ತವೆ. ಇನ್ನುಳಿದಂತೆ ಬೇರೆ ಯಾವುದೇ ಬಗೆಯ ಧರ್ಮ, ಜಾತಿ ಹಾಗೂ ವರ್ಣ, ಲಿಂಗಾಧಾರಿತ ಶೋಷಣೆಗಳು ಇಲ್ಲಿ ಕಂಡುಬರುವುದಿಲ್ಲ.

ಬಾಬಾಸಾಹೇಬ್ ಅಂಬೇಡ್ಕರ್ ಅವರು ಶುದ್ಧ ಅರ್ಥವಿಜ್ಞಾನಿಯಾಗಿ ವಿತ್ತಿಯ ಪ್ರಕ್ರಿಯೆಯಲ್ಲಿ ಬಹುಮುಖ್ಯವಾಗಿ ಶ್ರಮವು ವಿನಿಯೋಗಿಸಲ್ಪಡುವುದರಿಂದ ಇದರ ಮಹತ್ವವನ್ನು ಎತ್ತಿಹಿಡಿಯುತ್ತಾರೆ. ಮುಂದುವರೆದು ಇವರು ಒಬ್ಬ ಸಾಮಾಜಿಕ ಚಿಂತಕರಾಗಿ ಶೋಷಣಾರಹಿತ ಉತ್ಪನ್ನ ವ್ಯವಸ್ಥೆಯನ್ನು ಜಾರಿಗೆ ತರಬೇಕು ಹಾಗೂ ಉತ್ಪಾದನ ಪ್ರಕ್ರಿಯೆಯಲ್ಲಿ ಶ್ರಮಜೀವಿಗಳನ್ನು ತೊಡಗಿಸಿಕೊಳ್ಳುವಾಗ ಭೇದಭಾವವು ಇರಬಾರದು ಎಂಬುದನ್ನು ಪ್ರಬಲವಾಗಿ ಪ್ರತಿಪಾದಿಸಿರುತ್ತಾರೆ. ವ್ಯತಿರಿಕ್ತವಾಗಿ ಭಾರತೀಯ ಸನಾತವಾದಿ ವ್ಯವಸ್ಥೆಯಲ್ಲಿ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಮತಮೌಢ್ಯಗಳ ದೆಸೆಯಿಂದಾಗಿ ಶ್ರಮಿಕರನ್ನು ಉತ್ಪಾದನೆಯಲ್ಲಿ ತೊಡಗಿಸುವಿಕೆಯಲ್ಲಿ ಇರುವಂತಹ ಅನೇಕ ರೀತಿಯಲ್ಲಿನ ತಾರತಮ್ಯಗಳನ್ನು ಬೆಳಕಿಗೆ ತಂದಿರುತ್ತಾರೆ.

ಅಸ್ಪೃಶ್ಯರು ಮತ್ತು ಶೋಷಿತ ಸಮುದಾಯಗಳ ಶ್ರಮಿಕರು ಕೆಲವು ನಿರ್ದಿಷ್ಟ ಕೆಲಸಕಾರ್ಯಗಳಲ್ಲಿ ತೊಡಗಿಸಿಕೊಳ್ಳಬಾರದು, ಧರ್ಮ ಮತ್ತು ಜಾತಿಯ ಕಾರಣಕ್ಕಾಗಿ ಕೆಲವು ನಿರ್ದಿಷ್ಟವಾದಂತಹ ಉದ್ಯೋಗಗಳನ್ನಷ್ಟೇ ಕೈಗೊಳ್ಳಬೇಕು. ಅಲ್ಲದೆ ಉತ್ಪನ್ನ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವಂತಹ ಅಸ್ಪೃಶ್ಯವರ್ಗದ ಶ್ರಮಿಕರಿಗೆ ಪೂರ್ಣ ಪ್ರಮಾಣದ ಕೂಲಿಯನ್ನು ನೀಡದೆ ತಾರತಮ್ಯ ನೀತಿಯನ್ನು ಅನುಸರಿಸಲಾಗುವುದು. ಹೆಚ್ಚು ಸಮಯ ದುಡಿಸಿಕೊಂಡು ಕಡಿಮೆ ಸಂಭಾವನೆ ನೀಡುವುದು. ಶ್ರಮಿಕರು ಮಾಡಬಹುದಾದ ಸಣ್ಣಪ್ರಮಾಣದ ತಪ್ಪುಗಳಿಗೂ ಅಪಾರ ಪ್ರಮಾಣದ ಜುಲ್ಮಾನೆಯನ್ನು ವಿಧಿಸುವುದು ಹಾಗೂ ಉಗ್ರವಾದ ಶಿಕ್ಷೆಯನ್ನು ಕೊಡುವುದು. ಇಂತಹ ಅಮಾನವೀಯವಾದಂತಹ ಆಚರಣೆಗಳನ್ನು ಖಂಡತುಂಡಾಗಿ ಖಂಡಿಸಿದ

ಅಂಬೇಡ್ಕರ್ ಅವರು ಭಾರತದ ಸಮಾಜದಲ್ಲಿ ನಿಮ್ನವರ್ಗದ ಜನರು ನಿರ್ದಿಷ್ಟವಾದ ಉದ್ಯೋಗಗಳನ್ನು ಕೈಗೊಳ್ಳುವ ಅವಕಾಶಗಳನ್ನು ನಿಷೇಧಿಸುವುದು. ಅವಕಾಶ ವಂಚನೆಯ ಮೂಲಕ ಇವರನ್ನು ಹೊರಗಿಡುವಂತಹ ಹುನ್ನಾರವನ್ನು ಕೈಗೊಳ್ಳುತ್ತಾರೆ ಎಂದು ಪ್ರತಿಪಾದಿಸುತ್ತಾರೆ.

ಹೀಗಾಗಿ, ಅಸ್ಪೃಶ್ಯರ ವರ್ಗ ಅಥವಾ ಧಮನಿತ ಶ್ರಮಿಕರು ಅನೇಕ ಬಗೆಯಲ್ಲಿನ ಶೋಷಣೆಗಳಿಗೆ ಒಳಗಾಗುತ್ತಾರೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ಆಯಾಮಗಳನ್ನು ಒಳಗೊಂಡಂತೆ ಶ್ರಮಶೋಷಣೆಯೂ ಸಮಾನ ಅಭಿವೃದ್ಧಿಯ ಪ್ರಯತ್ನಕ್ಕೆ ಅಡ್ಡಿಯಾಗಿದೆ. ಉತ್ಪಾದನೆಯ ಪ್ರಕ್ರಿಯೆಯಲ್ಲಿ ಇತರೆ ಉತ್ಪಾದನಾಂಗಗಳು ಮತ್ತು ಇನ್ನಿತರ ಶ್ರಮಿಕವರ್ಗದವರಿಗೆ ಸಿಗುತ್ತಿರುವಂತಹ ಸಮಾನ ಕೆಲಸಕ್ಕೆ ಸಮಾನ ವೇತನವನ್ನು ಪಡೆಯದೇ ಇವರು ಶೋಷಣೆಗೆ ಒಳಗಾಗಿದ್ದಾರೆ. ಇದನ್ನೇ ಆರ್ಥಿಕ ತಜ್ಞರು ಹಾಗೂ ಚಿಂತಕರು ಆಗಿರುವಂತಹ ಅಂಬೇಡ್ಕರ್ ಅವರು "ಶ್ರಮಮಾರುಕಟ್ಟೆಯಲ್ಲಿನ ಅಪ್ರಮಾಣ ಋಣ ಉತ್ಪಾದನಾಂಗ ಸಂಭಾವನೆ ವ್ಯವಸ್ಥೆಯಾಗಿದೆ" ಎಂದು ಘೋಷಿಸಿದ್ದಾರೆ. ಈ ರೀತಿಯಾಗಿ ಅಸ್ಪೃಶ್ಯ ವರ್ಗದವರೂ ಎನ್ನುವಂತಹ ಬಲವಾದ ಕಾರಣಕ್ಕಾಗಿಯೇ ಶ್ರಮದ ಶೋಷಣೆ, ತಾರತಮ್ಯ ಹಾಗೂ ವಂಚಿತತೆ ಇವುಗಳಿಂದ ರಾಷ್ಟ್ರದ ಸರ್ವತೋಮುಖ ಹಾಗೂ ಏಕರೂಪ ಅಭಿವೃದ್ಧಿಯು ಅಸಾಧ್ಯವೆಂದು ಅಂಬೇಡ್ಕರ್ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. ಇಂತಹ ಮಾನವೀಯ ಮೌಲ್ಯಗಳ ಮೇಲೆ ನಡೆಯುತ್ತಿರುವ ಶೋಷಣೆಯು ನಿಲ್ಲದೇ ಸಮಾನ ಅಭಿವೃದ್ಧಿಯಾಗಲೀ ಹಾಗೂ ಸಾಮಾಜಿಕ ನ್ಯಾಯವಾಗಲೀ ಸಾಕಾರಗೊಳ್ಳಲು ಅಸಾಧ್ಯ.

ಶತಶತಮಾನಗಳಿಂದ ಆಚರಣೆಯಲ್ಲಿರುವ ಭಾರತೀಯ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಪದ್ಧತಿಗಳಿಂದಾಗಿ ಜಾತಿವ್ಯವಸ್ಥೆಯೂ ರಾಷ್ಟ್ರದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿಯೇ ಬಹುಮುಖ್ಯವಾದ ತೊಡಕಾಗಿ ಪರಿಣಮಿಸಿದೆ. ಸಾಮಾಜಿಕವಾಗಿ ಮತ್ತು ಮಾನವೀಯತೆಯ ನೆಲೆಯಿಂದಾಗಿ ಹಾಗೂ ರಾಷ್ಟ್ರದ ಸರ್ವಾಂಗೀಣ ಅಭಿವೃದ್ಧಿಯ ದೃಷ್ಟಿಯಿಂದಲೂ ಅಸ್ಪೃಶ್ಯತೆಯ ಆಚರಣೆಯು ಶೋಷಣೆ ಹಾಗೂ ವಂಚನೆಗಳ ರೂಪದಲ್ಲಿ ನಡೆದು ಬಂದಿರುವ ಇದು, ಅಕ್ಷಮ್ಯ ಹಾಗೂ ಅಮಾನುಷವಾದ ಅಪರಾಧವಾಗಿದೆ. ಶ್ರಮ ವಿಭಜನೆಯ ಆರ್ಥಿಕ ವ್ಯವಸ್ಥೆಯ ಹಿನ್ನೆಲೆಯಲ್ಲಿ ನೋಡುವುದಾದರೆ ಅಸ್ಪೃಶ್ಯತೆ ಹಾಗೂ ಇದಕ್ಕೆ ಸಂಬಂಧಿಸಿದಂತೆ ಇರುವ ಇನ್ನಿತರ ಆಚರಣೆಗಳಿಂದ ಅಭಿವೃದ್ಧಿ ಅಥವಾ ಪ್ರಗತಿ ಯಾವ ರೀತಿಯಲ್ಲಿ ಕುಂಠಿತಗೊಂಡಿರುತ್ತದೆ ಎಂಬುದನ್ನು ಅಂಬೇಡ್ಕರ್ ಅವರು ಇದೇ ಸಂದರ್ಭದಲ್ಲಿ ಜಗತ್ತಿನಲ್ಲಿ ಕಂಡುಬರುವ ಇತರೆ ಸ್ವರೂಪದ ಶೋಷಣೆಯೊಂದಿಗೆ ಹೋಲಿಕೆ ಮಾಡಿ ಹಾಗೂ ತುಲನಾತ್ಮಕವಾಗಿ ಅಧ್ಯಯನವನ್ನು ಮಾಡಿ ಸಾದರಪಡಿಸಿರುತ್ತಾರೆ.

ಜಗತ್ತಿನ ಇತಿಹಾಸವನ್ನು ಅಧ್ಯಯನ ಮಾಡುವ ದಿಸೆಯಲ್ಲಿ ತೊಡಗಿ ೧೫ ಮತ್ತು ೧೬ನೇ ಶತಮಾನದಲ್ಲಿ ಬಹುಮುಖ್ಯವಾಗಿ ಐರೋಪ್ಯದ ರೋಮ್‌ನಲ್ಲಿ ಅಸ್ತಿತ್ವದಲ್ಲಿದ್ದ ಗುಲಾಮಗಿರಿಯ ಪದ್ಧತಿಯನ್ನು ಅಂಬೇಡ್ಕರ್ ಅವರು ಅಧ್ಯಯನವನ್ನು ಮಾಡಿರುತ್ತಾರೆ. ಅಲ್ಲಿನ ಗುಲಾಮಿ ಪದ್ಧತಿ ಹಾಗೂ ಭಾರತೀಯ ಸನಾತನರಿಂದ ಆಚರಿಸಲ್ಪಟ್ಟಿರುವ ಅಸ್ಪೃಶ್ಯತೆ ಇವೆರೆಡೂ ಸಹ ಮೇಲು ನೋಟಕ್ಕೆ ಅನೇಕ ರೀತಿಯ ಸಾಮ್ಯತೆಗಳನ್ನು ಹೊಂದಿರುತ್ತೇವೆ. ಆದರೆ, ಇವೆರೆಡೂ ವ್ಯವಸ್ಥೆಗಳು ಅಮಾನುಷ ವಾಗಿದ್ದು, ಮಾನವ ವಿರೋಧಿಯಾದ ಕೃತ್ಯಗಳಾಗಿದ್ದು, ಎರಡರಲ್ಲೂ ಮಾನವನ ಸ್ವಾತಂತ್ರ್ಯ ಭ್ರಾತೃತ್ವ, ಪ್ರೀತಿ, ಸಹಬಾಳ್ವೆ ಸಹಕಾರ ಸಮಾನತೆ ಹಾಗೂ ಸಮೂಹ ಜೀವನದ ಜೊತೆಗೆ ಸ್ವಾಭಿಮಾನ ಎಲ್ಲವೂ ಕಾಣೆಯಾಗಿರುತ್ತವೆ. ತಮ್ಮತನವನ್ನು ಬಿಟ್ಟು ಇತರರ ಹಾಗೂ ಬೇರೆಯವರ ಹಿತಾಸಕ್ತಿಗಳಿಗೆ ಹಾಗೂ ಆಶೆಗಳಿಗೆ ಬದ್ಧವಾಗಿ ನಡೆಯುವ ಮಾನವ ವಿರೋಧಿ ಜೀವನ ಕ್ರಮವು ಗೋಚರಿಸುತ್ತವೆ. ಇದು ಪ್ರಕೃತಿಯ ನೀತಿ ನಿಯಮಕ್ಕೂ ವಿರೋಧವಾಗಿರುತ್ತದೆ. ಏಕೆಂದರೆ, ಮಾನವರಲ್ಲದೆ ಇತರೆ ಜೀವರಾಶಿಗಳಾದ ಪ್ರಾಣಿ, ಪಕ್ಷಿ ಸಂಕುಲಗಳಲ್ಲಿ ಕೂಡ ಸ್ವಾತಂತ್ರ್ಯ, ಸಹಬಾಳ್ವೆಯು ಕಂಡುಬರುತ್ತದೆ. ಆದರೆ, ಈ ಎರಡೂ ಪದ್ಧತಿಗಳನ್ನು ಅಳವಡಿಸಿಕೊಂಡಿರುವ ವ್ಯವಸ್ಥೆಯೂ ಮಾನವ–ಮಾನವರ ನಡುವೆ ಆಗಾಧವಾದ ಕಂದಕ ನಿರ್ಮಾಣವಾಗಿ ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಗುಲಾಮರು ಹಾಗೂ ಭಾರತದಲ್ಲಿ ಅಸ್ಪೃಶ್ಯರು ದಂಗೆ ಎದ್ದು, ಒಟ್ಟುಗೂಡಿ ಬಾಳಲಾಗುವ ಸಂದರ್ಭವೂ ಏರ್ಪಡುತ್ತದೆ.

ಗುಲಾಮ ಹಾಗೂ ಅಸ್ಪೃಶ್ಯತಾ ಆಚರಣೆಯ ಪದ್ಧತಿಗಳು ಮೇಲು ನೋಟಕ್ಕೆ ಮುಕ್ತ ಸಾಮಾಜಿಕ ವ್ಯವಸ್ಥೆಗಳೆಂದು ಪರಿಗಣಿಸಲಾಗದು. ಭಾರತದಲ್ಲಿನ ಶ್ರಮಶೋಷಣೆ ಸ್ವರೂಪವನ್ನು ಮತ್ತು ತೀವ್ರತೆಯನ್ನು ವಿವರಿಸಲು ಬಾಬಾಸಾಹೇಬ್ ಅಂಬೇಡ್ಕರ್ ಅವರು ಒಂದು ಬಹುಮುಖ್ಯವಾದ ನಿದರ್ಶನವನ್ನು ನೀಡಿದ್ದಾರೆ. ಅದೆಂದರೆ, ಗುಲಾಮಿ ಪದ್ಧತಿ ಹಾಗೂ ಅಸ್ಪೃಶ್ಯತೆಗಳೆರಡೂ ಅನೇಕ ಸಾಮ್ಯತೆಗಳನ್ನು ಹೊಂದಿದ್ದಾಗ್ಯೂ ಇವುಗಳ ನಡುವಿನ ಕೆಲವು ಮೂಲಭೂತವಾಗಿರುವ ವ್ಯತ್ಯಾಸಗಳು ಕಂಡುಬರುತ್ತವೆ. ಅವುಗಳನ್ನು ಅಂಬೇಡ್ಕರ್ ಅವರು ಕೆಳಕಂಡಂತೆ ಗುರುತಿಸಿರುತ್ತಾರೆ. ಅವುಗಳೆಂದರೆ,

೧. ಪುರಾತನ ರೋಮಿನಲ್ಲಿದ್ದ ಗುಲಾಮರ ಯುದ್ಧ ನಿರಾಶ್ರಿತರು, ಸೋತ ಪಡೆಯ ಸೈನಿಕರು, ಸಾಲಗಾರರು ಹಾಗೂ ಇನ್ನಿತರ ಅಪರಾಧಿಗಳಾಗಿ ಶಿಕ್ಷೆಗೆ ಒಳಗಾದವರು. ಹಾಗಾಗಿ ಗುಲಾಮಿಯ ಪದ್ಧತಿಯು ಸನಾತನ ಮತ್ತು ವಂಶಪಾರಂಪರ್ಯವಾಗಿ ಬಂದಿರುವಂತಹ ವರ್ಗದವರೆಂದೇ ಗುರುತಿಸಲ್ಪಡುತ್ತಾರೆ.

೨. ರೋಮಿನಲ್ಲಿನ ಗುಲಾಮರು ಅನೇಕ ಬಗೆಯ ಕೈಗಾರಿಕಾ, ಕರಕುಶಲ ಹಾಗೂ ವೈಯಕ್ತಿಕ ಸೇವೆಗಳಲ್ಲಿ ಪರಿಣಿತಿಯನ್ನು ಹೊಂದಿದ್ದವರಾಗಿದ್ದು, ಇವರ ಸೇವೆಯನ್ನು ಶ್ರೀಮಂತ ಬಂಡವಾಳಶಾಹಿ ವ್ಯವಸ್ಥೆಯ ಜನಸಮುದಾಯದವರು ಇಷ್ಟಪಡುತ್ತಾರೆ. ಆದರೆ, ಭಾರತದಲ್ಲಿನ ಅಸ್ಪೃಶ್ಯರನ್ನು ಯಾವುದೇ ಕುಶಲತೆ ಹಾಗೂ ಪರಿಣಿತಿಗಳನ್ನು ಪಡೆಯದೇ ಇರುವವರನ್ನು ಅಸ್ಪೃಶ್ಯರೆಂದು ಪರಿಗಣಿಸಲಾಗುವುದು.

೩. ಗುಲಾಮರನ್ನು ವ್ಯಾಪಾರ, ವಾಣಿಜ್ಯ ಉದ್ದೇಮ ಮುಂತಾದ ಚಟುವಟಿಕೆಗಳಲ್ಲಿ ನಿಯೋಜಿಸಲಾಗುತ್ತಿತ್ತು. ಆದರೆ, ಅಸ್ಪೃಶ್ಯರು ಸಂಪೂರ್ಣವಾಗಿ ಕಡೆಗಣಿಸಲ್ಪಟ್ಟವರಾಗಿದ್ದರು.

೪. ಗುಲಾಮರು ತಮ್ಮ ಮಾಲೀಕರ ಅಧೀನದಲ್ಲಿ ನಿಗದಿತ ಅವಧಿಗೆ ಮಾತ್ರ ಸೇವೆಯನ್ನು ಸಲ್ಲಿಸುತ್ತಿದ್ದರು. ನಂತರ ಬಿಡುಗಡೆ ಹೊಂದಿ ಗುಲಾಮರೆಂಬ ಕಳಂಕ ಮುಕ್ತಿಯನ್ನು ಪಡೆಯಬಹುದಾಗಿತ್ತು. ಆದರೆ, ಅಸ್ಪೃಶ್ಯರು ಅಸ್ಪೃಶ್ಯತೆಯ ಕಳಂಕವು ನಿರಂತರವಾದುದು.

೫. ಗುಲಾಮ ಪದ್ಧತಿಯ ಅವಧಿಯ ಉದ್ದಕ್ಕೂ ಗಳಿಸುವ ಹಣವನ್ನು ತಮ್ಮ ಬಳಿಯಲ್ಲಿಯೇ ಇಟ್ಟುಕೊಂಡು ಸ್ವಂತ ಉಪಯೋಗಗಳಿಗಾಗಿ ಬಳಸುವ ಸ್ವಾತಂತ್ರ್ಯವು ಅವರಿಗೆ ಇತ್ತು. ಭಾರತೀಯ ಅಸ್ಪೃಶ್ಯರಿಗೆ ಸಂಪಾದನೆಯ ಅವಕಾಶಗಳು ವ್ಯಾಪಕವಾಗಿಲ್ಲ.

೬ ರೋಮಿನಲ್ಲಿ ಗುಲಾಮರು ಕೆಲವು ಗೌರವಾನ್ವಿತ ಉದ್ಯೋಗ ಹಾಗೂ ವೃತ್ತಿಗಳನ್ನು ಹೊಂದಿದ್ದರು. ಉದಾಹರಣೆಗೆ, ಅಧ್ಯಾಪಕರು, ವ್ಯಾಕರಣಕಾರರು, ತಾಂತ್ರಿಕರು, ವೈದ್ಯರು ಇನ್ನೂ ಮುಂತಾದವುಗಳಲ್ಲಿ ತೊಡಗಿಸಿಕೊಳ್ಳುವ ಅವಕಾಶಗಳು ಇತ್ತು. ಬದಲಾಗಿ ಅಸ್ಪೃಶ್ಯತೆಯ ಕಳಂಕವು ಅಂಟಿಕೊಂಡೇ ಇರುತ್ತದೆ.

೭ ರೋಮಿನಲ್ಲಿ ಗುಲಾಮರು ಸಾಧಾರಣ ಪ್ರಮಾಣದಲ್ಲಿ ಸ್ವಾತಂತ್ರ್ಯವನ್ನು ಹೊಂದಿದ್ದರು. ಆದರೆ ಭಾರತದಲ್ಲಿ ಅಸ್ಪೃಶ್ಯರಿಗೆ ಸ್ವಾತಂತ್ರ್ಯವೇ ಇಲ್ಲ.

೮. ಮಾಸ್ಟರ್‌ನ ಸೇವೆಗೆ ಸದಾಸಿದ್ಧರಾಗಿ ಮತ್ತು ಸಮರ್ಪಕವಾಗಿ ಇರಬೇಕಾದುದರಿಂದ ಗುಲಾಮರ ಸ್ಥಿತಿಗತಿಗಳ ಬಗ್ಗೆ ಮಾಸ್ಟರ್‌ಗಳಿಗೆ ಅತೀವ ಕಾಳಜಿಯಿತ್ತು.

೯. ಪರಿಣತಿ ಹೊಂದಿದ ಗುಲಾಮರು ಮಾಸ್ಟರ್‌ರ ಜೊತೆಗೆ ಬಹುಮುಖ್ಯ ವಾಗಿದ್ದರು. ಆದರೆ, ಅಸ್ಪೃಶ್ಯರಿಗೆ ಇದು ಇರಲಿಲ್ಲ.

೧೦. ಗುಲಾಮ ಪದ್ಧತಿಯು ದೈಹಿಕ ಹಿಂಸೆಯಾಗಿತ್ತು. ಭಾರತೀಯ ಅಸ್ಪೃಶ್ಯತೆಯು ಮಾನಸಿಕ ಹಿಂಸೆಯಾಗಿರುತ್ತದೆ.

ಅಂಬೇಡ್ಕರ್ ಅವರು ವಿಶ್ಲೇಷಣೆಗೆ ಒಳಪಡಿಸುವಂತಹ ವಿಚಾರಗಳು ಅಸ್ಪೃಶ್ಯ ವರ್ಗದ ಶ್ರಮಿಕರನ್ನು ಅನೇಕ ಬಗೆಯಾಗಿ ಶೋಷಿಸುವ ಪದ್ಧತಿಯು ಭಾರತದ ಸಂದರ್ಭದಲ್ಲಿ ಇಂದಿಗೂ ಕಂಡುಬರುತ್ತದೆ. ಹೀಗೆ, ಮಾರ್ಕ್ಸ್‌ನ ಕಾರ್ಮಿಕ ಶೋಷಣಾಸಿದ್ಧಾಂತಕ್ಕಿಂತ ವಿಭಿನ್ನವಾದಂತಹ ಸಿದ್ಧಾಂತವನ್ನು ಅಂಬೇಡ್ಕರ್ ಅವರು ಸಾದರಪಡಿಸಿದ್ದಾರೆ. ಬಂಡವಾಳಶಾಹಿ ಅರ್ಥವ್ಯವಸ್ಥೆಯಲ್ಲಿ ಕಾರ್ಮಿಕರ ಶೋಷಣೆಯು ಆರಂಭದಲ್ಲೇ ನಡೆಯುತ್ತದೆಯಾದರೂ ಅಂತಿಮವಾಗಿ ಅದು ಕೊನೆಗೊಂಡು ಸಮಾಜವಾದ ಏರ್ಪಡುವ ಸಾಧ್ಯತೆಯಿರುತ್ತದೆ. ಆದರೆ, ಅಂಬೇಡ್ಕರ್ ಅವರ ನಿರೂಪಣೆಯನ್ನು ಭಾರತದ ಸಂದರ್ಭದಲ್ಲಿ ವಿಶ್ಲೇಷಿಸುವಾಗ ಧರ್ಮ ಮತ್ತು ಜಾತಿ ಆಧಾರಿತ ಕಾರಣಗಳಿಂದಾಗಿ ಈ ವರ್ಗದ ಶ್ರಮಿಕರಿಗೆ ನಿರಂತರವಾಗಿ ಶೋಷಣೆಯು ನಡೆಯುತ್ತದೆ ಹಾಗೂ ಇನ್ನೂ ಮುಂದುವರಿದಿದೆ. ಇದಕ್ಕೆ ಆರ್ಥಿಕ ಕಾರಣವಷ್ಟೇ ಅಲ್ಲ, ಆರ್ಥಿಕೇತರ ಅಂಶಗಳಾದ ಸಾಮಾಜಿಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಆಯಾಮಗಳು ಶ್ರಮ ಶೋಷಣೆಯಲ್ಲಿ ಅಡಕವಾಗಿರುತ್ತದೆ. ಮುಂದುವರೆದು ಇದೇ ಕಾರಣಕ್ಕಾಗಿ ಅನೇಕ ಆರ್ಥಿಕೇತರ ಅಂಶಗಳಿಂದ ದಲಿತರನ್ನು ಅಸ್ಪೃಶ್ಯರೆಂದು ವಂಚಿಸಲಾಗುತ್ತಿದೆ. ಹೀಗೆ, ದಲಿತರ ಶೋಷಣೆ, ದಬ್ಬಾಳಿಕೆ, ತಾರತಮ್ಯ ಹಾಗೂ ವಂಚನೆಗಳು ನಿರಾತಂಕವಾಗಿ ಮುಂದುವರೆದಿರುವುದರಿಂದ ಮಾನವ ಅಭಿವೃದ್ಧಿಯ ಪರಿಕಲ್ಪನೆಯ ಸಾಧ್ಯತೆಯೂ ಸಾಕಾರಗೊಳ್ಳಲು ಸಾಧ್ಯವಾಗಿರುವುದಿಲ್ಲ.

ಇದರಿಂದಾಗಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಸಾದರಪಡಿಸಿದಂತಹ ಶ್ರಮ ಶೋಷಣೆಯ ಸಿದ್ಧಾಂತವು ಸಮಕಾಲೀನ ಸಂದರ್ಭದಲ್ಲಿ ಹೆಚ್ಚು ಹೆಚ್ಚು ಚಿಂತನೆಗೆ ಒಳಪಡುತ್ತದೆ. ಕಾರಣ ಜಗತ್ತಿನಾದ್ಯಂತ ಅಭಿವೃದ್ಧಿ ಚಿಂತನೆಯು ೧೯೯೦ರ ನಂತರ ಆದಾಯ ಮತ್ತು ವಿತ್ತಿಯ ಗಳಿಕೆಯ ಆದಾಯದಿಂದ ಮಾನವ ಅಭಿವೃದ್ಧಿಯು ಆಯಾಮವನ್ನು ಪಡೆದುಕೊಂಡಿದೆ. ಇದರ ಅರ್ಥ ಆರ್ಥಿಕಾಭಿವೃದ್ಧಿಗಿಂತ ಇಂದು ಮಾನವ ಅಭಿವೃದ್ಧಿಯೂ ಬಹುಮುಖ್ಯವಾಗಿದೆ. ಮಾನವ ಅಭಿವೃದ್ಧಿ ಎಂದರೆ, ಶೋಷಣೆ, ತಾರತಮ್ಯ ಹಾಗೂ ವಂಚನೆಗಳಿಲ್ಲದ ಸರ್ವರಿಗೂ ಮುಕ್ತಿಗೆ ಅವಕಾಶವಿರುವ ಆಯ್ಕೆಗಳು, ಈ ಆಯ್ಕೆಗಳು ತಲಾದಾಯ, ಆರೋಗ್ಯ ಹಾಗೂ ಶಿಕ್ಷಣ ಇನ್ನೂ ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿದ್ದು, ಇವುಗಳ ಸಾಧನೆಗೆ ಆರ್ಥಿಕಾಭಿವೃದ್ಧಿಯು ಸಾಧನಮಾತ್ರವಾಗಿದೆ.

ಅಂಬೇಡ್ಕರ್ ಅವರು ಕಾರ್ಮಿಕರನ್ನು ಶೋಷಣಾ ಮುಕ್ತರನ್ನಾಗಿಸುವ ಸಲುವಾಗಿ ಬ್ರಿಟಿಷ್ ಆಡಳಿತದಲ್ಲಿ ಕಾರ್ಮಿಕ ಮಂತ್ರಿಯಾಗಿದ್ದಾಗ ಕಾರ್ಮಿಕರಿಗೆ

ಸಂಬಂಧಿಸಿದಂತೆ ಏಕರೀತೀಯ ಶಾಸನಗಳನ್ನು ರೂಪಿಸಿ ಅವುಗಳನ್ನು ಬಳಕೆಗೆ ತಂದಿರುತ್ತಾರೆ. ಕನಿಷ್ಠ ಕೂಲಿ ಕಾಯಿದೆ, ಕೈಗಾರಿಕಾ ಉದ್ಯೋಗ ಕಾಯಿದೆ, ಕಾರ್ಖಾನೆ ಕಾಯಿದೆಯ. ಇಂತಹ ವಿಚಾರಗಳ ನೆಲೆಯೂ ಅಂದು ರೂಪುಗೊಂಡಿರುತ್ತದೆ. ಆದರೆ ಇಂದಿಗೂ ಈ ಕಾಯಿದೆಗಳು ಭಾರತ ಸರ್ಕಾರದ ಕಾರ್ಮಿಕ ನೀತಿಯಲ್ಲಿ ಅಗ್ರಸ್ಥಾನವನ್ನು ಪಡೆದುಕೊಂಡಿರುತ್ತದೆ. ಸ್ವಾತಂತ್ರ್ಯದ ನಂತರ ಕಾರ್ಮಿಕ ಯೋಗಕ್ಷೇಮ ಮತ್ತು ಕೈಗಾರಿಕಾ ಶಾಂತಿಕಾಯಿದೆಗಳಲ್ಲಿ ಕೆಲವು ಸುಧಾರಣೆಗಳನ್ನು ತರಲಾಗಿರುತ್ತದೆ. ಆದರೆ ಮೂಲ ಆಶ್ರಯದಲ್ಲಿ ಯಾವುದೇ ರೀತಿಯಾದಂತಹ ಬದಲಾವಣೆಗಳನ್ನು ತರದೆ ಇರುವುದು ಗಮನಾರ್ಹವಾದ ಅಂಶ. ಈ ಕಾಯಿದೆಗಳ ಜೊತೆಗೆ ನಿರುದ್ಯೋಗಿಗಳಿಗೆ ಉದ್ಯೋಗ ದೊರಕಿಸಲು ನೆರವಾಗುವ ಉದ್ಯೋಗ ವಿನಿಮಯ ಕಚೇರಿಗಳ ಸ್ಥಾಪನೆ ಮತ್ತು ಕಾರ್ಮಿಕರ ಪರಿಹಾರ ಯೋಜನೆ, ಕಡ್ಡಾಯ ವಿಮಾ ಯೋಜನೆಗಳನ್ನು ಜಾರಿಗೆ ತರಲು ಪ್ರಯತ್ನಿಸಿರುವುದನ್ನು ಕಾಣಬಹುದು.

ಅಂಬೇಡ್ಕರ್ ಅವರು ಬ್ರಿಟಿಷ್ ವೈಸ್‌ರಾಯ್ ಕಾರ್ಮಿಕರ ಕಾರ್ಯಕಾರಿ ಮಂಡಳಿಯ ಕಾರ್ಮಿಕ ಪ್ರತಿನಿಧಿಯಾಗಿ ೧೯೪೨ನೇ ಜುಲೈ ೨೦ರಂದು ನೇಮಕಗೊಂಡು, ಸುಮಾರು ೪ ವರ್ಷಗಳ ಅವಧಿಗೆ ಅಂದರೆ, ೧೯೪೬ನೇ ಜೂನ್‌ವರೆಗೆ ಕೆಲಸವನ್ನು ನಿರ್ವಹಿಸುವ ಮೂಲಕ ದುಡಿಯುವ ವರ್ಗದ ಕಲ್ಯಾಣಕ್ಕಾಗಿ ಶ್ರಮಿಸಿದ್ದಾರೆ. ಕಾರ್ಮಿಕರ ಬಗೆಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡಿರುವ ಇವರು ೧೯೪೨-೪೬ ಅವಧಿಯಲ್ಲಿ ಈ ವರ್ಗದ ಅಭ್ಯುದಯಕ್ಕಾಗಿ ಅಂಬೇಡ್ಕರ್ ಅವರು ಮೂರು ಅಂಶಗಳ ಕಾರ್ಯಕ್ರಮಗಳನ್ನು ಹಾಕಿಕೊಂಡಿರುತ್ತಾರೆ. ಅವುಗಳೆಂದರೆ,

೧. ದುಡಿಯುವ ವರ್ಗಕ್ಕೆ ಸಾಮಾಜಿಕ ಭದ್ರತೆ ಮತ್ತು ರಕ್ಷಣೆಯನ್ನು ಒದಗಿಸುವುದು.

೨. ಭಾರತದ ಆರ್ಥಿಕ ವ್ಯವಸ್ಥೆಯಲ್ಲಿ ಬದಲಾವಣೆಯನ್ನು ತರಲು ಹಾಗೂ ಕಾರ್ಮಿಕರ ಚಳುವಳಿಯನ್ನು ಬಲಪಡಿಸಲು ಕಾರ್ಮಿಕ ಸಂಘಗಳಿಗೆ ಕಡ್ಡಾಯವಾಗಿ ಮಾನ್ಯತೆಯನ್ನು ಕೊಡುವುದು ಹಾಗೂ ಕಾರ್ಮಿಕರ ನೀತಿಯನ್ನು ರೂಪಿಸುವಲ್ಲಿ ಕಾರ್ಮಿಕರು ಮತ್ತು ಮಾಲೀಕರಿಗೆ ಸಮಾನವಾದ ಅವಕಾಶಗಳನ್ನು ಕೊಡುವುದು.

೩. ಕಾರ್ಮಿಕ ವಿವಾದ ಬಗೆಹರಿಸಲು ಮತ್ತು ಕಾರ್ಮಿಕರ ಕಾಯಿದೆಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಸಲುವಾಗಿ ಪ್ರತ್ಯೇಕವಾದಂತಹ ಆಡಳಿತ ವ್ಯವಸ್ಥೆಯು ಇರಬೇಕು ಎಂದು ಪ್ರಬಲವಾಗಿ ಪ್ರತಿಪಾದಿಸಿರುತ್ತಾರೆ.

ಇದೇ ಅವಧಿಯಲ್ಲಿ ಬಾಬಾಸಾಹೇಬ್ ಅಂಬೇಡ್ಕರ್ ಅವರು ಕಾರ್ಮಿಕರ ಕಲ್ಯಾಣಕ್ಕೋಸ್ಕರ ಈ ಕೆಂಕಂಡ ವಿಚಾರಗಳ ಬಗ್ಗೆ ಗಂಭೀರವಾದ ಚರ್ಚೆಯನ್ನು ನಡೆಸಿರುವುದು ಕಂಡುಬರುತ್ತದೆ. ಅವುಗಳೆಂದರೆ,

೧. ಕಾರ್ಮಿಕರ ಸಮಸ್ಯೆಗಳನ್ನು ಚರ್ಚಿಸಲು ನಿಯಮಾನುಸಾರವಾಗಿ ಕಾರ್ಮಿಕರ ಸಮಾವೇಶ ಮತ್ತು ಸ್ಥಾಯಿ ಸಮಿತಿಗಳ ಸಭೆಯನ್ನು ಕರೆಯುವುದು.

೨. ಕಾರ್ಮಿಕರಿಗೆ ಸಂಬಂಧಿಸಿದಂತೆ ಇರುವ ಕಾಯಿದೆಗಳಲ್ಲಿ ಸಂಸ್ಕರಣೆಯನ್ನು ತರುವುದು.

೩. ಕಾರ್ಮಿಕರಿಗೆ ಮುಖ್ಯ ಆಯುಕ್ತರನ್ನು ನೇಮಿಸುವುದು.

೪. ಕಾರ್ಮಿಕರಿಗೆ ಕನಿಷ್ಠ ವೇತನ ನಿಗದಿಪಡಿಸುವ ಸಲುವಾಗಿ ಸಮಿತಿಯೊಂದನ್ನು ನೇಮಿಸುವುದು.

೫. ಕಾರ್ಮಿಕರ ಸಂಘ-ಸಂಸ್ಥೆಗಳಿಗೆ ಮಾನ್ಯತೆ ಮಾಡುವುದು.

ಅಂಬೇಡ್ಕರ್ ಅವರು ಶ್ರಮಿಕ ವರ್ಗದವರ ವಿಚಾರಗಳನ್ನು ವೈಸ್‌ರಾಯ್ ಕಾರ್ಯಕಾರಿ ಸಮಿತಿಯಲ್ಲಿ ನಾಲ್ಕು ಭಾರಿ ತ್ರಿಪಕ್ಷೀಯ ಕಾರ್ಮಿಕರ ಸಮಾವೇಶವನ್ನು ಮಾಡಿ ಅಲ್ಲಿ ಕೆಲವು ವಿಚಾರಗಳ ಬಗ್ಗೆ ಹೆಚ್ಚಿನ ಒತ್ತುಕೊಟ್ಟು ಚರ್ಚಿಸಿರುತ್ತಾರೆ. ಅವುಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಲಾಗಿದೆ.

ಅ. ೧೯೪೨ನೇ ಆಗಸ್ಟ್ ೭ರಂದು ಅಂಬೇಡ್ಕರ್ ಅವರು ಪ್ರಪ್ರಥಮ ತ್ರಿಪಕ್ಷೀಯ ಕಾರ್ಮಿಕ ಸಮಾವೇಶವನ್ನು ನವದೆಹಲಿಯಲ್ಲಿ ಕರೆದಿರುತ್ತಾರೆ. ಈ ಸಮಾವೇಶದ ಮೂಲ ಉದ್ದೇಶ ಕಾರ್ಮಿಕರ ಪ್ರತಿನಿಧಿಗಳು, ಮಾಲೀಕರ ಜೊತೆಗೆ ತಮ್ಮ ಸಮಸ್ಯೆಗಳನ್ನು ಚರ್ಚಿಸಿ ಅವುಗಳಿಗೆ ಸೂಕ್ತವಾದಂತಹ ಪರಿಹಾರಗಳನ್ನು ಕಂಡುಕೊಳ್ಳುವುದಾಗಿತ್ತು. ಈ ಸಮಾವೇಶದಲ್ಲಿ ಅಂಬೇಡ್ಕರ್ ಅವರು ಪ್ರಧಾನ ಭಾಷಣ ಮಾಡುತ್ತಾ ಕೆಳಕಂಡ ಅಭಿಪ್ರಾಯವನ್ನು ವ್ಯಕ್ತಪಡಿಸಿರುತ್ತಾರೆ. "It is the first time in the history of those labour conferences that the representative of the employers and employees have brought face to face with in the ambit of a joint conference. Our conference will have three main aims and objectives".

1. The promotion of uniformity in labour legislation.

2. The laying down of a procedure for the settlement of Indus trial disputes.

3. The discussing all matters of all India importance between employers and employees" ಎಂದು ಕಾರ್ಮಿಕರನ್ನು ಕೇವಲ ಕಾರ್ಖಾನೆಗಳಲ್ಲಿ ಮಾತ್ರ ಯಂತ್ರ ಯಂತ್ರಗಳ ಮಾದರಿಗಳಲ್ಲಿ ದುಡಿಸಿಕೊಂಡರೆ ಸಾಲದು. ಅವರುಗಳನ್ನು ಆಡಳಿತ ಮಂಡಳಿಯು ವಿಶ್ವಾಸಕ್ಕೆ ತೆಗೆದುಕೊಂಡು ತೀರ್ಮಾನಗಳನ್ನು ತೆಗೆದುಕೊಳ್ಳುವಂತಹ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಿದ್ದೇ ಆದರೆ

ಕಾರ್ಮಿಕ ವರ್ಗ ಮತ್ತು ಮಾಲೀಕ ವರ್ಗದಲ್ಲಿ ಸಾಮರಸ್ಯವು ಬೆಳೆದು ಕಾರ್ಖಾನೆಗಳ ಉತ್ಪನ್ನ ಹೆಚ್ಚಾಗಿ ಅಧಿಕ ಲಾಭವನ್ನು ಗಳಿಸಿ ಯಶಸ್ವಿಯತ್ತ ಸಾಗಬಹುದು.

ಆ. ಅಂಬೇಡ್ಕರ್ ಅವರು ೧೯೪೩ನೇ ಸೆಪ್ಟೆಂಬರ್ ೬ ಮತ್ತು ೭ ರಂದು ದೆಹಲಿಯಲ್ಲಿ ಎರಡನೆಯ ತ್ರಿಪಕ್ಷೀಯ ಸಮಾವೇಶದ ಅಧ್ಯಕ್ಷತೆಯನ್ನು ವಹಿಸುವ ಮೂಲಕ ಕಾರ್ಮಿಕರ ಕಲ್ಯಾಣಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳಲ್ಲಿ ಚರ್ಚೆಗಳು ನಡೆದಿರುತ್ತವೆ. ಅವುಗಳಲ್ಲಿ ಬಹುಮುಖ್ಯವಾದವುಗಳನ್ನು ಈ ಕೆಳಕಂಡಂತೆ ಸೂಚಿಸಲಾಗಿದೆ.

೧. ಸ್ಥಳೀಯ ಸಂಸ್ಥೆಗಳಲ್ಲಿ ಮತ್ತು ಶಾಸನಬದ್ಧ ಸಮಿತಿಗಳಲ್ಲಿ ಕಾರ್ಮಿಕ ವರ್ಗಕ್ಕೆ ಸೂಕ್ತವಾದ ಪ್ರಾತಿನಿಧ್ಯವನ್ನು ಕೊಡುವುದು.
೨. ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ಒದಗಿಸುವುದು.
೩. ಕಾರ್ಮಿಕರಿಗೂ ಕನಿಷ್ಠ ವೇತನದ ಸೌಲಭ್ಯವನ್ನು ಕಲ್ಪಿಸಿಕೊಡುವುದು.
೪. ತುಟ್ಟಿಭತ್ಯೆಯನ್ನು ನಿರ್ಧರಿಸುವಂತಹ ನೀತಿ-ನಿಯಮಗಳನ್ನು ರೂಪಿಸುವುದು.
೫. ಪ್ರತಿಕಾರ್ಯದಲ್ಲಿಯೂ ತ್ರಿಪಕ್ಷೀಯ ಸಮಾವೇಶಗಳನ್ನು ಏರ್ಪಡಿಸುವುದು.
೬ ಪ್ರಾವಿಡೆಂಟ್ ಫಂಡ್‌ಗೆ ಸಂಬಂಧಿಸಿದಂತೆ ಕಾಯಿದೆಯೊಂದನ್ನು ರಚಿಸುವುದು. ಇನ್ನೂ ಮುಂತಾದ ವಿಷಯಗಳನ್ನು ಚರ್ಚಿಸಲಾಗಿರುತ್ತದೆ.

ಇ. ಮೂರನೆಯ ತ್ರಿಪಕ್ಷೀಯ ಸಮಾವೇಶವನ್ನು ೧೯೪೪ನೇ ಅಕ್ಟೋಬರ್ ೨೭-೨೮ರಂದು ನವದೆಹಲಿಯಲ್ಲಿ ನಡೆಸಲಾಗಿರುತ್ತದೆ. ಈ ಸಮಾವೇಶದ ಅಧ್ಯಕ್ಷತೆಯನ್ನು ಅಂಬೇಡ್ಕರ್ ಅವರು ವಹಿಸಿ ಕಾರ್ಮಿಕರ ಕೆಲವು ಬಹುಮುಖ್ಯ ಸಮಸ್ಯೆಗಳ ಬಗೆಗೆ ಚರ್ಚಿಸಲಾಗಿರುತ್ತದೆ. ಅವುಗಳೆಂದರೆ,

೧. ೧೯೨೩ರ ಕಾರ್ಮಿಕ ಪರಿಹಾರ ಕಾಯಿದೆಯ ಅಡಿಯಲ್ಲಿ ಕಡ್ಡಾಯ ವಿಮಾ ಯೋಜನೆಯನ್ನು ರೂಪಿಸುವುದು.

೨. ೧೯೨೯ರ ವ್ಯಾಪಾರ ಉದ್ಯೋಗವಿವಾದ ಕಾಯಿದೆಯಲ್ಲಿ ಪರಿಷ್ಕರಣೆಯನ್ನು ತರುವುದು.

೩. ರಾಜ್ಯವು ಕಾರ್ಮಿಕರ ಕಾಯಿದೆ ವಿಮಾಯೋಜನೆಯನ್ನು ಜಾರಿಗೊಳಿಸುವುದು.

೪. ಕನಿಷ್ಟ ವೇತನವನ್ನು ನಿಗದಿಪಡಿಸಲು ಶಾಸನಬದ್ಧ ಸಮಿತಿಯೊಂದನ್ನು ರಚಿಸುವುದು.

೫. ಅಖಿಲ ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ರಚಿಸಲು ಅವಕಾಶ ಮಾಡಿಕೊಡುವುದು.

೬. ಕನಿಷ್ಟ ವೇತನವನ್ನು ನಿಗದಿಪಡಿಸಲು ಶಾಸನಬದ್ಧ ಸಮಿತಿಯೊಂದನ್ನು ರಚಿಸುವುದು.

೬. ಕಠಿಣ ಹಾಗೂ ಹೆಚ್ಚು ಕೆಲಸ ಮಾಡುವ ಕಾರ್ಮಿಕರಿಗೆ ವಿಶೇಷ ಪಡಿತರ ವ್ಯವಸ್ಥೆ ಮಾಡುವುದು. ಇನ್ನೂ ಹಲವಾರು ಅತ್ಯಾವಶ್ಯಕವಾಗಿ ಕಾರ್ಮಿಕರಿಗೆ ಬೇಕಾಗಿರುವಂತಹ ವಿಚಾರಗಳನ್ನು ಚರ್ಚಿಸಲಾಗಿರುತ್ತದೆ.

ಈ. ನಾಲ್ಕನೆಯ ತ್ರಿಪಕ್ಷೀಯ ಸಮಾವೇಶವನ್ನು ೧೯೪೫ನೇ ನವೆಂಬರ್ ೨೭-೨೮ರಂದು ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನವದೆಹಲಿಯಲ್ಲಿ ಜರುಗಿರುತ್ತದೆ. ಈ ಸಮಾವೇಶದಲ್ಲಿ ಕಾರ್ಮಿಕರ ಅನೇಕ ಸಮಸ್ಯೆಗಳನ್ನು ಕುರಿತು ಸುದೀರ್ಘವಾಗಿ ಚರ್ಚೆಯನ್ನು ಮಾಡಲಾಗಿರುತ್ತದೆ. ಅವುಗಳೆಂದರೆ,

೧. ಕಾರ್ಖಾನೆಗಳಲ್ಲಿ ಕಾರ್ಮಿಕರ ದುಡಿಮೆಯ ವೇಳೆಯನ್ನು ಕಡಿಮೆ ಮಾಡುವ ಕಾಯಿದೆಯೊಂದನ್ನು ರೂಪಿಸುವುದು.

೨. ಮುಷ್ಕರ ಸಮಯದಲ್ಲಿ ಕಾರ್ಖಾನೆಗಳು ಮುಚ್ಚಿದ ಸಂದರ್ಭದಲ್ಲಿ ಕಾರ್ಮಿಕರ ಸಮಸ್ಯೆಗಳಿಗೆ ತಕ್ಕ ಪರಿಹಾರಗಳನ್ನು ಕಂಡುಹಿಡಿಯುವುದು.

೩. ಕಾರ್ಖಾನೆಗಳಲ್ಲಿ ತಾತ್ಕಾಲಿಕವಾಗಿ ಸೇವೆಗೆ ಸೇರಿದ ಕಾರ್ಮಿಕರುಗಳ ಸೇವೆಯನ್ನು ಮುಂದುವರಿಸಲು ಕಾಯಿದೆಯನ್ನು ರೂಪಿಸುವುದು.

೪. ಕಾರ್ಖಾನೆಗಳಲ್ಲಿ ಕಾರ್ಮಿಕರಿಗೆ ಕಡಿಮೆ ವೆಚ್ಚದಲ್ಲಿ ಉಪಹಾರವನ್ನು ನೀಡುವಂತಹ ವ್ಯವಸ್ಥೆಯನ್ನು ಕಲ್ಪಿಸುವುದು.

೫. ಕಾರ್ಮಿಕರಿಗೆ ತಾಂತ್ರಿಕ ತರಬೇತಿಯನ್ನು ನೀಡುವ ವ್ಯವಸ್ಥೆಯನ್ನು ಮಾಡುವುದು.

೬. ಕಾರ್ಮಿಕರಿಗೆ ಪ್ರತ್ಯೇಕವಾದ ಆರೋಗ್ಯ ಸಂಶೋಧನಾ ಕೇಂದ್ರಗಳನ್ನು ಸ್ಥಾಪಿಸುವುದು.

೭. ಕಾರ್ಮಿಕರಿಗೆ ಬೋನಸ್ ಸೌಲಭ್ಯದ ಕಾಯಿದೆಯನ್ನು ರೂಪಿಸುವುದು.

೮. ಕಾರ್ಮಿಕರ ಬಗೆಗೆ ಅಂಕಿ ಅಂಶಗಳನ್ನು ಸಂಗ್ರಹಿಸಲು ಕಾಯಿದೆ ರೂಪಿಸುವುದು.

೯. ವೇತನ ಸಹಿತ ರಜೆಯನ್ನು ನೀಡುವ ಕಾಯಿದೆಯನ್ನು ರೂಪಿಸುವುದು.

೧೦. ಕಾರ್ಮಿಕ ಕಲ್ಯಾಣ ನಿಧಿಯನ್ನು ನಿಧಿಯನ್ನು ಸ್ಥಾಪಿಸುವುದು.

ಅಂಬೇಡ್ಕರ್ ಅವರು ಬ್ರಿಟಿಷ್ ಸರ್ಕಾರದ ವೈಸ್‌ರಾಯ್ ಕಾರ್ಯಕಾರಿ ಸಮಿತಿಯಲ್ಲಿ ಕಾರ್ಮಿಕರ ಸದಸ್ಯರಾಗಿ ಕಾರ್ಮಿಕ ವರ್ಗದವರ ಸಾಮಾಜಿಕ ಭದ್ರತೆ ಹಾಗೂ ಅವರುಗಳ ಕಲ್ಯಾಣ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಲ್ಲಿ ಅವಿರತವಾಗಿ ದುಡಿದಿದ್ದಾರೆ. ಇವರ ಕರ್ತೃತ್ವ ಶಕ್ತಿ ಮತ್ತು ಕಾರ್ಮಿಕರ ಪರವಾದ ಧೋರಣೆಗಳು ಕಾರ್ಮಿಕ ಹಾಗೂ ಶೋಷಕ ಸಮುದಾಯದಲ್ಲಿ ಶಾಂತಿ ಸಂತೋಷ ಹಾಗೂ ಪ್ರಗತಿಯನ್ನು ಉಂಟುಮಾಡುವ ಹಲವಾರು ನೀತಿ-ನಿಯಮ ಹಾಗೂ ಕಾಯಿದೆಗಳನ್ನು ರೂಪಿಸುವಲ್ಲಿ ಸಫಲರಾಗಿದ್ದಾರೆ.

ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ನಾಲ್ಕು ಬಹುಮುಖ್ಯವಾದ ತ್ರಿಪಕ್ಷೀಯ ಸಮಾವೇಶಗಳನ್ನು ೧೯೪೨-೪೬ರವರೆಗೆ ನಡೆಸಿರುವ ಪ್ರಯುಕ್ತ ಕೆಲವು ಕಾಯಿದೆಗಳನ್ನು ರೂಪಿಸಲು ಸಾಧ್ಯವಾಗಿಸಿರುತ್ತದೆ. ಅವುಗಳೆಂದರೆ,

೧. ಕಾರ್ಮಿಕರ ಪರಿಹಾರ ತಿದ್ದುಪಡಿ ಕಾಯಿದೆ - ೧೯೪೨
೨. ಹತ್ತಿನೂಲಿನ ಗಿರಣಿ ಕಾಯಿದೆ - ೧೯೪೨
೩. ವಾರದ ರಜೆಯ ಕಾಯಿದೆ
೪. ಕಾರ್ಖಾನೆಯ ಅಂಕಿ-ಅಂಶಗಳ ಕಾಯಿದೆ - ೧೯೪೨
೫. ರೈಲ್ವೆ ನೌಕರರ ಕೆಲಸದ ಅವಧಿಯ ಕಾಯಿದೆ - ೧೯೪೨
೬. ಗಣಿ ಕೈಗಾರಿಕೆಯಲ್ಲಿ ಕೆಲಸ ಮಾಡುವ ಮಹಿಳೆಯರಿಗೆ ಹೆರಿಗೆ ಸೌಲಭ್ಯ ಕಾಯಿದೆ - ೧೯೪೩
೭. ಯುದ್ಧ ಗಾಯಾಳುಗಳ ಪರಿಹಾರ ವಿಮಾ ಕಾಯಿದೆ - ೧೯೪೩-೧೯೪೪.
೮. ಕಾರ್ಖಾನೆ ತಿದ್ದುಪಡಿಯ ಕಾಯಿದೆ - ೧೯೪೫
೯. ಮಹಿಳೆಯರ ಹೆರಿಗೆ ಭತ್ಯಾ (ತಿದ್ದುಪಡಿ) ಕಾಯಿದೆ - ೧೯೪೫-೧೯೪೬.
೧೦. ಕಾರ್ಯನಿರತ ಕಾರ್ಮಿಕರ ಪರಿಹಾರ (ತಿದ್ದುಪಡಿ) ಕಾಯಿದೆ - ೧೯೪೬.
೧೧. ಭಾರತ ಗಣಿಗಾರಿಕೆ ತಿದ್ದುಪಡಿ ಕಾಯಿದೆ - ೧೯೪೬.
೧೨. ಕಾರ್ಖಾನೆ ಕಾಯಿದೆ ತಿದ್ದುಪಡಿ - ೧೯೪೬.

ಅಂಬೇಡ್ಕರ್ ಅವರು ಕಾರ್ಮಿಕ ಕಾಯಿದೆಗೆ ಸಂಬಂಧಿಸಿದಂತೆ ಹಲವಾರು ನೀರು-ನಿಯಮ ಹಾಗೂ ಕಾಯಿದೆಗಳನ್ನು ಶಿಫಾರಸ್ಸಿನ ಮೂಲಕ ಬ್ರಿಟಿಷ್ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ. ಇವರ ಶಿಫಾರಸ್ಸಿನ ಮೇರೆಗೆ ಬ್ರಿಟಿಷ್ ಸರ್ಕಾರವು ೧೯೪೫ನೇ ಏಪ್ರಿಲ್ ೯ ರಂದು ಕಾರ್ಮಿಕ ಮುಖ್ಯ ಆಯುಕ್ತರನ್ನು ನೇಮಕ ಮಾಡಿರುತ್ತದೆ. ಕಾರ್ಮಿಕ ಮುಖ್ಯ ಆಯುಕ್ತರ ಕಾರ್ಯಗಳೆಂದರೆ, ಕಾರ್ಖಾನೆಗಳಲ್ಲಿ ಉಂಟಾಗುವಂತಹ ವಿವಾದಗಳನ್ನು ಬಗೆಹರಿಸುವುದು. ಖಾಸಗಿ ಮತ್ತು ಸರ್ಕಾರಿ ಕಾರ್ಖಾನೆಗಳಲ್ಲಿ ಕಾರ್ಮಿಕ ಕಲ್ಯಾಣಕ್ಕೆ ಪೂರಕವಾಗಿರುವ ಕಾಯಿದೆಗಳನ್ನು ಜಾರಿಗೆ ತರುವುದು ಬಹುಮುಖ್ಯವಾದಂತಹ ಕಾರ್ಯಗಳಾಗಿರುತ್ತವೆ.

ಅಂಬೇಡ್ಕರ್ ಅವರು ಕಾರ್ಮಿಕ ವರ್ಗದವರ ಹಿತಾಸಕ್ತಿಗಳನ್ನು ಕಾಪಾಡುವ ಸಲುವಾಗಿ ಈ ಕೆಳಗೆ ಸೂಚಿಸಲಾಗಿರುವಂತಹ ಅಧಿಕಾರಿಗಳನ್ನು ನೇಮಕ ಮಾಡಬೇಕೆಂದು ಬ್ರಿಟಿಷ್ ಸರ್ಕಾರವನ್ನು ಒತ್ತಾಯಿಸಿರುತ್ತಾರೆ. ಅವುಗಳೆಂದರೆ.

೧. ಕಾರ್ಮಿಕರ ಮುಖ್ಯ ಆಯುಕ್ತರ ಕೇಂದ್ರ ಕಚೇರಿಯೂ ದೆಹಲಿಯಲ್ಲಿ ಇರಬೇಕು.

೨. ಮೂರು ಪ್ರಾದೇಶಿಕ ಕಾರ್ಮಿಕ ಆಯುಕ್ತರ ಕೇಂದ್ರ ಕಚೇರಿಗಳನ್ನು ಮುಂಬಯಿ, ಕಲ್ಕತ್ತ ಹಾಗೂ ಲಾಹೋರ್‌ಗಳಲ್ಲಿ ಸ್ಥಾಪಿಸಬೇಕು.

೩. ಉಪಮುಖ್ಯ ಕಾರ್ಮಿಕರ ಆಯುಕ್ತರ ಕೇಂದ್ರ ಕಚೇರಿಯನ್ನು ನವದೆಹಲಿಯಲ್ಲಿ ಸ್ಥಾಪಿಸಬೇಕು.

೪. ೬ ರಾಜಿ ಅಧಿಕಾರಿ ಹಾಗೂ ೨೮ ಕಾರ್ಮಿಕ ಪರಿವೀಕ್ಷಣಾಧಿಕಾರಿಗಳನ್ನು ವಿವಿಧ ಕೇಂದ್ರಗಳಲ್ಲಿ ನೇಮಿಸುವುದು.

೫. ಔದ್ಯೋಗಿಕ ಪರಿಣಿತ ಕೇಂದ್ರ ಪರಿವೀಕ್ಷಣಾಧಿಕಾರಿಯನ್ನು ನೇಮಿಸುವುದು.

ಸಮಗ್ರ ಶ್ರಮಿಕ ವರ್ಗದವರ ಶೋಷಣೆಯನ್ನು ತಪ್ಪಿಸಿ ದೇಶದ ಆರ್ಥಿಕ ಪ್ರಗತಿಯಲ್ಲಿ ಇವರುಗಳು ಸಹ ಪಾಲ್ಗೊಳ್ಳಬೇಕು. ಈ ಮೂಲಕ ಆರ್ಥಿಕ ಪರಿಸ್ಥಿತಿ ಬಲಪಡಿಸಲು ಅಂಬೇಡ್ಕರ್ ಅವರು ಅನೇಕ ಕಾಯಿದೆಗಳನ್ನು ಕಾರ್ಮಿಕರಿಗೆ ಸಂಬಂಧಿಸಿದಂತೆ ರೂಪಿಸಿರುತ್ತಾರೆ. ರಾಷ್ಟ್ರಕ್ಕೆ ಸ್ವಾತಂತ್ರ್ಯ ಬಂದ ನಂತರದ ಅವಧಿಯಲ್ಲಿ ಸಂವಿಧಾನಕ್ಕೆ ಅನುಗುಣವಾಗಿ ಕೋಟ್ಯಾಂತರ ಶ್ರಮಿಕ ವರ್ಗದವರ ಹಿತಾಸಕ್ತಿಯನ್ನು ಕಾಪಾಡುವ ಸಲುವಾಗಿ ಸಂಪೂರ್ಣವಾಗಿ ತೊಡಗಿಸಿಕೊಂಡಿರುತ್ತಾರೆ. ಬ್ರಿಟಿಷ್ ಸರ್ಕಾರದ ಕಾರ್ಯಕಾರಿ ಸಮಿತಿಯ ಕಾರ್ಮಿಕರ ಸದಸ್ಯರಾಗಿ ಕಾರ್ಮಿಕರ ಕಲ್ಯಾಣಕ್ಕಾಗಿ ಕಾಯಿದೆಗಳನ್ನು ರೂಪಿಸಿದ್ದರೂ. ಇವರು ಏಕೆ ಕಮ್ಯೂನಿಸ್ಟ್ ಚಳುವಳಿಯಿಂದ ದೂರ ಉಳಿದಿದ್ದರು ಎಂಬ ಪ್ರಶ್ನೆ ನಮ್ಮ ಎದುರಿಗೆ ಬಂದು ನಿಲ್ಲುತ್ತದೆ. ಅದೇನೇ ಇದ್ದರು. ಅಂಬೇಡ್ಕರ್ ಅವರು ಸ್ವತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾ ನಂತರ ಬ್ರಿಟಿಷ್ ಹಾಗೂ ಭಾರತೀಯ ಜಾತಿಹಿಂದುಗಳ ವಿರುದ್ಧ ಪ್ರತಿಭಟಿಸಿ ಕಾರ್ಮಿಕರ ಸಾಮಾಜಿಕನ್ಯಾಯವನ್ನು ಒದಗಿಸಿಕೊಡುವಲ್ಲಿ ಶ್ರಮಿಸಿರುವುದನ್ನು, ಪ್ರಸ್ತುತವಾಗಿ ಪ್ರತಿವರ್ಷವೂ ಮೇ ೧ ರಂದು ಆಚರಿಸುವಂತಹ ಕಾರ್ಮಿಕ ದಿನಾಚರಣೆಯಲ್ಲಿ ಅಂಬೇಡ್ಕರ್ ಅವರಿಗೆ ಯಾವ ಒಬ್ಬ ಕಾರ್ಮಿಕರನ್ನೂ ಸಹ ಕೃತಜ್ಞತೆಯನ್ನು ಸಲ್ಲಿಸುವುದಿಲ್ಲ. ಇದು ಒಂದು ದುರಂತ. ಕಾರ್ಮಿಕ ಬಂಧುಗಳು ಬಾಬಾಸಾಹೇಬ್ ಅಂಬೇಡ್ಕರ್ ಅವರ ಕಾರ್ಮಿಕರ ಬಗೆಗಿನ ಕಾಳಜಿಯನ್ನು ಅರಿತುಕೊಂಡು ಸಾಗಬೇಕಾಗಿದೆ.

ಪರಾಮರ್ಶನ ಗ್ರಂಥಗಳು

೧. ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹ ಮತ್ತು ಭಾಷಣಗಳು, ಸಂಪುಟ ೧, ೨, ೬ ಭಾಗ ೧, ೨, ೧೦.

೨. ಅರವಿಂದ ಮಾಲಗತ್ತಿ ೨೦೦೪, ಸಾಂಸ್ಕೃತಿಕದಂಗೆ, ರಾಜ್ ಪ್ರಕಾಶನ, ಮೈಸೂರು.

೩. ದತ್ತಾತ್ರೇಯ ಇಕ್ಕಳಕಿ. (ಸಂ.) ೨೦೦೬, ಅಂಬೇಡ್ಕರ್ ಚಿಂತನೆ, ಸುಮೇಧ ಪ್ರಕಾಶನ, ಗುಲಬರ್ಗಾ.

೪. ವಿದ್ಯಾಸಾಗರ ಐ.ಎಸ್. ೨೦೦೬, ಅಂಬೇಡ್ಕರ್ ಮತ್ತು ಮಾನವೀಯ ಮೌಲ್ಯಗಳು, ಸುಮೇಧ ಪ್ರಕಾಶನ, ಗುಲಬರ್ಗಾ.

೫. ಸುಮಾ, ಬಿ.ಯು. ೨೦೦೮, ಡಾ. ಬಿ.ಆರ್. ಅಂಬೇಡ್ಕರ್ (ವರ್ತಮಾನದೊಂದಿಗೆ ಮುಖಾಮುಖಿ) ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ, ಬೆಂಗಳೂರು.

೬ ಮಂಗ್ಳೂರುವಿಜಯ. (ಸಂ). ೨೦೦೨, ಸಂಘರ್ಷ (ಅಂಬೇಡ್ಕರ್ ಜೀವನ ಸಾಧನೆ) ಸಂಬುದ್ಧ ಪ್ರಕಾಶನ, ಬೆಂಗಳೂರು.

೭. Dr. Babasaheb Ambedkar : Writings and Speeches. Vol-1, 2, 6, 10.

೮. Abraham. P. 2002, Ambedkar's Contribution for Econamic Planning and Development - Its Relevance, Kanishka Publishers, Distributors, New Delhi.

೯. Deo Prakash, 2004, Socio-Economic Thoughts of B. R. Ambedkar, Manak Publications, Pvt. Ltd. New Delhi.

೬. ಮೂಗಿನ ಮಹಿಮೆ ಬಲ್ಲವರಾರು?

–ಜೆ. ಲೋಹಿತ್

ಮೂಗು ಮನುಷ್ಯನ ಪಂಚೇಂದ್ರಿಯಗಳಲ್ಲಿ ಒಂದು. ಇದು ಮುಖದ ಮಧ್ಯದಲ್ಲಿ ಮುಂದಕ್ಕೆ ಚಾಚಿಕೊಂಡು ಮುಖದ ಅಂದವನ್ನು ಹೆಚ್ಚಿಸುವಂತಹ ಅಂಗವಾಗಿದೆ. ಮೂಗು ಮನುಷ್ಯನಿಗೆ ಉಸಿರಾಟಕ್ಕೆ ಅತ್ಯಾವಶ್ಯಕವಾದ ಅಂಗವೂ, ಲೈಂಗಿಕ ಅವಯವವೂ, ಬಾಹ್ಯ ಪ್ರಪಂಚದ ಅನುಭವವನ್ನುಂಟು ಮಾಡುವ, ವಾಸನೆಯನ್ನು ಗ್ರಹಿಸುವ, ಶಬ್ದೋಚ್ಚಾರಣೆಯನ್ನು ಮಾಡುವ, ವ್ಯಕ್ತಿಗೆ ಮಾನವನ್ನು ತಂದುಕೊಡುವ ಅಂಗವೂ ಹಾಗೂ ಗಾಳಿಯನ್ನು ಸೋಸುವ ಒಂದು ಯಂತ್ರವೂ ಆಗಿದೆ. ಹಾಗೆಯೇ ನಮ್ಮ ದೇಹದ ಆರೋಗ್ಯವನ್ನು ಕಾಪಾಡುವ ರಕ್ಷಕನೂ ಆಗಿದೆ. ಇದಲ್ಲದೆ ಮೂಗು ಕನ್ನಡಕವನ್ನು ಧರಿಸಲು ಆಧಾರಸ್ತಂಭವಾಗಿದೆ. ಈ ಮೂಗಿಲ್ಲದಿದ್ದರೆ ಕನ್ನಡಕವನ್ನು ಎಲ್ಲಿ ಇಡಬೇಕಾಗಿತ್ತು? ಸ್ವಲ್ಪ ಯೋಚಿಸಿ! ಇದನ್ನೆಲ್ಲ ನೋಡಿದಾಗ ಮೂಗು ಸಾಮಾನ್ಯವಾದದ್ದೇನಲ್ಲ. ಇದು ಅದ್ಭುತವಾದದ್ದು. ಇದರ ಮಹಿಮೆ ಅಪಾರವಾದುದು ಎಂಬುದು ಅರಿವಾಗುತ್ತದೆ. ಒಟ್ಟಿನಲ್ಲಿ ಮೂಗಿಗೂ ಮನುಷ್ಯನಿಗೂ ಒಂದು ರೀತಿಯ ಅವಿನಾಭಾವ ಸಂಬಂಧವಿದೆ.

ಮೂಗು ಮನುಷ್ಯನೊಬ್ಬನಿಗೇ ಪ್ರಮುಖವಾದ ಅಂಗವಲ್ಲ. ಇದು ದೇವಾನುದೇವತೆಗಳಿಗೂ, ಪ್ರಾಣಿ ಪಕ್ಷಿಗಳಿಗೂ ಪ್ರಮುಖವಾದ ಅಂಗವಾಗಿದೆ.

ಮೂಗಿಗೆ ನಾಸಿಕ, ನಾಸ, ಘ್ರಾಣೇಂದ್ರಿಯ ಎಂದು ಹೇಳುವರು. ಇಂಗ್ಲಿಷಿನಲ್ಲಿ ನೋಸ್ (NOSE) ಎನ್ನುವರು. ಪಕ್ಷಿಗಳ ಮೂಗನ್ನು ಕೊಕ್ಕುಚಂಚು ಎನ್ನುವರು. ಪ್ರಾಣಿಗಳ ಮೂಗನ್ನು ಆಯಾ ಪ್ರಾಣಿಗಳ ಹೆಸರಿನಿಂದಲೇ ಹೇಳುವರು. ಉದಾ : ನಾಯಿ ಮೂಗು, ಹಂದಿ ಮೂಗು ಇತ್ಯಾದಿ.

ಪುರಾಣಗಳ ಕಾಲದಿಂದಲೂ ಮೂಗಿಗೆ ಒಂದು ಸ್ಥಾನ–ಮಾನ, ಪ್ರಾಶಸ್ತ್ಯ, ಮನ್ನಣೆ, ಗೌರವಾದರಗಳು ದೊರೆತಿದೆ. ಕೇವಲ ಎರಡಿಂಚಿನ ಮೂಗು ರಾಮಾಯಣದ ಕತೆಗೆ ನಾಂದಿಯಾಯಿತು ಎಂದರೆ ಈ ಮೂಗಿನ ಮಹಿಮೆ

ಹೇಗಿರಬೇಕು ಎಂಬುದನ್ನು ನೋಡಬಹುದಾಗಿದೆ. ಇದು ದುಷ್ಟರಿಗೆ ಶಿಕ್ಷೆ, ಶಿಷ್ಟರಿಗೆ ರಕ್ಷೆ ನೀಡುವುದರಲ್ಲಿ ಪಾತ್ರಧಾರಿಯಾಗಿದೆ ಎಂಬುದು ಮನನವಾಗುವುದು.

ಮಾತು ಬರುವವರನ್ನು ವಾಚಾಳಿಗಳು, ಪಂಡಿತರು, ಮಾತುಗಾರರು ಎಂದೆಲ್ಲಾ ಹೇಳಿದರೆ ಮಾತು ಬಾರದವರನ್ನು 'ಮೂಗ'ರು ಎಂದು ಹೇಳುವರು. ಏಕೆಂದರೆ ಮೂಗು ಶಬ್ದೋಚ್ಚಾರಣೆಯ ಅಂಗ. ಅದೇ ಸರಿಯಾಗಿ ಕೆಲಸ ನಿರ್ವಹಿಸದಿದ್ದರೆ ಮಾತೆಲ್ಲಿಂದ ಬರುವುದು. ಆದ್ದರಿಂದಲೇ 'ಮೂಗನಾದವನಿಗೆ ಬಾಯಿಯಿಲ್ಲ, ಬಾಯಿಯಿದ್ದು ಗಟ್ಟಿ ಮಾತನಾಡದವನಿಗೆ ವ್ಯಕ್ತಿತ್ವವಿಲ್ಲ, ವ್ಯಕ್ತಿತ್ವವಿಲ್ಲದವನು ವ್ಯಕ್ತಿಯೇ ಅಲ್ಲ' ಎನ್ನುವುದು. ಹೇಗಿದೆ ನೋಡಿ! ಒಂದಕ್ಕೊಂದು ಎಷ್ಟರಮಟ್ಟಿಗೆ ಕೊಂಡಿಯಂತೆ ಹೆಣೆದುಕೊಂಡಿದೆ ಎಂಬುದನ್ನು ನೋಡಿದಾಗ ಮೂಗಿನ ಮಹತ್ವದ ಅರಿವಾಗುತ್ತದೆ.

ಮೂಗಿನಿಂದಲೇ ಖ್ಯಾತನಾಮರಾದವರು ಕೆಲವರಿದ್ದಾರೆ. ಉದಾ: ಕ್ಲಿಯೋಪಾತ್ರಳು ತನ್ನ ಮೂಗಿನಿಂದಲೇ ರೋಮ್‌ನಲ್ಲಿ ಪ್ರಸಿದ್ಧಿಯನ್ನು ಪಡೆದಿದ್ದಳು.

ನಾಸಿಕದ ಮಾಟದಿಂದಾ ಕ್ಲಿಯೋಪಾತ್ರಳಿಗೆ ।
ದಾಸರಾದರು ಶೂರ ಸೀಸರ್ ಆ್ಯಂಟನಿಗಳ್ ॥
ದೇಶಚರಿತೆಗಮವರ ಜಸಕಮಂಕುಶವಾಯ್ತು ।
ನಾಸಾಪುಟದ ರೇಖೆ – ಮಂಕುತಿಮ್ಮ ॥ ಎಂದಿದ್ದಾರೆ ಡಿ.ವಿ.ಜಿ

ಹಾಗೆಯೇ ನಮ್ಮ ಚಲನಚಿತ್ರ ರಂಗದಲ್ಲಿ ಶ್ರೀದೇವಿ ಎಂಬ ತಾರೆ ತನ್ನ ಮುಖದ ಅಂದವನ್ನು ಇಮ್ಮಡಿಗೊಳಿಸಿಕೊಳ್ಳಲು ಮೂಗನ್ನು ಶಸ್ತ್ರಚಿಕಿತ್ಸೆ ಮಾಡಿಸಿಕೊಂಡು ಖ್ಯಾತನಾಮಳಾದಳು, ಹೀಗೆ ಮೂಗು ಮುಖಕ್ಕೆ ಸೌಂದರ್ಯವನ್ನು ತಂದುಕೊಡುವುದರೊಂದಿಗೆ ಖ್ಯಾತನಾಮರಾಗುವಂತೆಯೂ ಮಾಡುತ್ತದೆ ಎಂಬುದು ಇದರಿಂದ ತಿಳಿಯುತ್ತದೆ.

ಮೂಗು ವ್ಯಕ್ತಿಯ ಮುಖದ ಲಕ್ಷಣವನ್ನು ಎತ್ತಿ ತೋರಿಸುವುದರಿಂದಲೇ ಮಕ್ಕಳು ಹುಟ್ಟಿದಾಗ ಮಗುವನ್ನು ನೋಡಲು ಬಂದವರು ಮಗುವಿನ ಮುಖ ನೋಡಿದಕೂಡಲೇ ಅಳೆಯುವುದು ಮೂಗನ್ನೇ. ಕೆಲವರು ಮಗುವಿನ ಮೂಗನ್ನು ಇಟ್ಟು ಎಸಳಿನಂತಿದೆ ಎಂದರೆ, ಕೆಲವರು ಇದೇನು ರೈಲುಹರಿದಂತೆ ಮೂಗು ಅಪ್ಪಚ್ಚಿಯಾಗಿ ಅಪ್ಪರಮೂಗಾಗಿದೆ ಎನ್ನುವರು. ಮತ್ತೆ ಕೆಲವರು ಇದೇನು ಗೆಡ್ಡೆ ಮೂಗು ಎನ್ನುವರು. ಮತ್ತೆ ಕೆಲವರು ಮಗುವಿನ ಮೂಗು ಗಿಣಿಮೂಗಿನಂತೆ ನೀಟಾಗಿದೆ ಎನ್ನುವರು. ಇನ್ನೂ ಕೆಲವರು ಸಂಪಿಗೆ ಎಸಳಿನಂತಿದೆ ಎನ್ನುವರು. ಹೀಗೆ ಹೇಳುವುದರ ಜೊತೆಗೆ ಮಗುವಿನ ಮೂಗು ಹಳ್ಳವಾಗಿದೆ. ಅದರಿಂದ ಮಗುವಿಗೆ ಸ್ನಾನ ಮಾಡಿಸುವಾಗ ಮೂಗಿಗೆ ಎಣ್ಣೆ ಸವರಿ ಮೇಲಕ್ಕೆ ಎತ್ತುತ್ತಿರಿ ಸ್ವಲ್ಪಮಟ್ಟಿಗೆ ಸರಿಹೋಗುವುದು ಎಂದು ಸಲಹೆಯನ್ನೂ ಕೊಡುತ್ತಾರೆ.

ಮನುಷ್ಯರ ಮೂಗು ವಾಸನೆಯನ್ನು ಗ್ರಹಿಸುವಂತೆಯೇ ಪ್ರಾಣಿಗಳ ಮೂಗೂ ವಾಸನೆಯನ್ನು ಗ್ರಹಿಸುವುದರಲ್ಲಿ ಪ್ರಮುಖವಾಗಿದೆ. ಉದಾ : ನಾಯಿ, ದನಕರುಗಳು ಮುಂತಾದವು.

ನಾಯಿಯ ಮೂಗು ವಾಸನೆಯನ್ನು ಗ್ರಹಿಸುವುದರಲ್ಲಿ ಅಪ್ರತಿಮ ಪಾತ್ರ ವಹಿಸುತ್ತದೆ. ಪೋಲೀಸ್ ಇಲಾಖೆಯಲ್ಲಿ ನಾಯಿಗೆ ಉತ್ತಮವಾದ ಸ್ಥಾನಮಾನವಿದೆ. ನಾಯಿಗೆ ಇಂದು ಮನುಷ್ಯರಿಗಿಂತ ಹೆಚ್ಚಿನ ತರಬೇತಿಯನ್ನು ನೀಡಲಾಗುತ್ತಿದೆ. ಮನುಷ್ಯರಿಗಿಂತಲೂ ಚುರುಕಾದ ನಿಯತ್ತಾದ ಪ್ರಾಣಿ ಇದು. ನಾಯಿ ಮೂಗಿನಿಂದ ಮೂಸಿನೋಡಿ ಬರಿ ವಾಸನೆಯಿಂದಲೇ ಕಳ್ಳನನ್ನು ಹಿಡಿಯಲು, ಭೂಮಿಯಲ್ಲಿ ಹುದುಗಿಸಿಟ್ಟ ಬಾಂಬುಗಳನ್ನು ಪತ್ತೆ ಹಚ್ಚಲು ಸಹಾಯ ಮಾಡುತ್ತದೆ. 'ನಾಯಿ ಮೂಗು' ಗಾದೆಯ ಮಾತಾಗಿಯೂ ಪ್ರಯೋಗದಲ್ಲಿದೆ. ಕೆಲವರ ಮೂಗಿಗೆ ವಾಸನೆ ತಟ್ಟನೆ ಬಡಿಯುತ್ತದೆ. ಏನೋ ಸೀದವಾಸನೆ ಬರುತ್ತಿದೆ ನೋಡು, ಯಾರ ಮನೆಯಲ್ಲೋ ವಡೆ ಬೇಯಿಸುತ್ತಿದ್ದಾರೆ, ಯಾರ ಮನೆಯಲ್ಲೋ ಕಜ್ಜಾಯ ಬೇಯಿಸುವ ವಾಸನೆ ಬರುತ್ತಿದೆ, ಯಾರ ಮನೆಯಲ್ಲೋ ಸಂಡೆಸ್ಪೆಷಲ್ ವಾಸನೆ ಬರುತ್ತಿದೆ ಎಂದು ಯಾರು ಏನು ಮಾಡುತ್ತಿದ್ದಾರೆ ಎಂಬುದನ್ನು ವಾಸನೆಯ ಮೂಲಕ ಹೇಳಿದರೆ ನಿನ್ನದೇನು 'ನಾಯಿ ಮೂಗಾ' ಎನ್ನುವರು.

ದನಕರುಗಳೂ ಕೂಡ ವಾಸನೆಯ ಮೂಲಕ ತಮ್ಮ ಯಜಮಾನನನ್ನು ಗುರುತಿಸುತ್ತವೆ. ಯಜಮಾನ ಅಥವಾ ಅವುಗಳ ಆರೈಕೆ ಮಾಡುವವರು ಹೊರಗೆ ಹೋಗಿದ್ದು ಬರುವುದರ ಸೂಚನೆಯನ್ನು ವಾಸನೆಯ ಮೂಲಕ ಕಂಡು ಹಿಡಿದು ಅಂಬಾ ಎಂದು ಕೂಗಿ ಮಲಗಿದ್ದರೆ ದಡಬಡಿಸಿ ಎದ್ದು ನಿಲ್ಲುತ್ತವೆ. ಹಾಲು ಕರೆಯುವಾಗಲಂತೂ ಹಾಲು ಕರೆಯುವವರನ್ನು ಮೂಸಿ ಮೂಸಿ ನೋಡಿ ಹೊಸಬರಾದರೆ ಒದೆಯುತ್ತವೆ. ಅವರಿಂದ ಹಾಲು ಕರೆಸಿಕೊಳ್ಳುವುದೇ ಇಲ್ಲ.

ಕವಿಗಳೂ ಕೂಡ ಕಾವ್ಯಗಳಲ್ಲಿ ಮೂಗನ್ನು ವರ್ಣಿಸಿದ್ದಾರೆ. ಉದಾ : ಕನಕದಾಸರು ಮೂಗಿನಲ್ಲಿ ಎಷ್ಟು ಬಗೆಗಳಿವೆ ಎಂಬುದನ್ನು ವಿವರಿಸಿದ್ದಾರೆ. ಊದುಗವಟೆಯ ದಡೂತಿ ಮುಖಕ್ಕೆ ಚಿಕ್ಕದಾಗಿರುವ ಗುಜ್ಜುಮೂಗನ್ನು 'ಕಿಮ್ಮೂಗು' ಎಂದೂ, ಮುಖದ ಮಾಟಕ್ಕೆ ತಕ್ಕ ಹಾಗೆ ಇರುವ ಮೂಗನ್ನು 'ಸರಿಮೂಗು' ಎಂದೂ, ಮೂಗಿನ ಹೊಳ್ಳೆಗಳನ್ನು ಮುಂದೊಡದೇ ಚರ್ಮಕ್ಕೆ ಅಂಟಿಕೊಂಡಂತಿರುವ ಮುದುಡು ಮೂಗನ್ನು ಅರೆಮೂಗು ಎಂದೂ, ನಶ್ಯವನ್ನು ಮೂಗಿಗೇರಿಸುವ ದುಶ್ಚಟಕ್ಕೆ ಬಲಿಯಾದವರ ಮೂಗಿನ ಒಳಭಾಗ ಬಚ್ಚಲಕೊಚ್ಚೆಗುಂಡಿಯಾಗಿರುವ ಮೂಗನ್ನು ಉಜ್ಜಿ ಉಜ್ಜಿ ಕೆಂಪಗೆ ಮಾಡಿಕೊಂಡ ಹಾಗೂ ನೆಗಡಿಯಾದಾಗ ಕರವಸ್ತ್ರದಿಂದ ಚೆನ್ನಾಗಿ ಮೂಗನ್ನು ಹಿಂಡಿ ಹಿಂಡಿ ವ್ರಣವಾಗುವ ಹಾಗೆ ಕೆಂಪಗೆ

ಮಾಡಿಕೊಂಡ ಮತ್ತು ಕೋಪ ಬಂದಾಗ ಮೂಗಿನ ತುದಿ ಕೆಂಪಗಾಗುವ ಮೂಗನ್ನು 'ಕೆಮ್ಮೂಗು' ಎಂದೂ ವರ್ಣಿಸಿದ್ದಾರೆ.

ಇಲ್ಲಿಯವರೆಗೂ ಮೂಗು ಏನೇನು ಮಾಡುತ್ತದೆ ಅದರ ಆಕಾರ ಹೇಗಿರುತ್ತದೆ ಎಂಬುದನ್ನು ನೋಡಲಾಯಿತು. ಈಗ ಮೂಗಿನ ಹೊರ ಮತ್ತು ಒಳರಚನೆಗಳ ಬಗೆಗೂ ಸ್ವಲ್ಪಮಟ್ಟಿಗೆ ಗಮನಹರಿಸೋಣ.

ಮೂಗು ನೋಡುವುದಕ್ಕೆ ಪಿರಮಿಡ್ಡಿನ ಆಕಾರದಲ್ಲಿ ಎರಡು ಕಣ್ಣುಗಳ ನಡುವೆ ಇದೆ. ಇದರ ಕೊನೆಗಿರುವುದೇ ನಾಸಾಗ್ರ, ಅಂದರೆ ಮೂಗಿನ ತುದಿ. ಈ ತುದಿಯ ಅಕ್ಕಪಕ್ಕಗಳಲ್ಲಿ ವೃತ್ತಾಕಾರದ ಎರಡು ಹೊಳ್ಳೆಗಳಿವೆ.

ಹೊರನೋಟಕ್ಕೆ ಕಾಣುವ ಮೂಗನ್ನು ನೀಳಮೂಗು, ಮೋಟು ಮೂಗು, ಚಪ್ಪಟೆ ಮೂಗು, ಅಪ್ಪರ ಮೂಗು, ಸರಿಮೂಗು, ಅರೆಮೂಗು, ಕೆಮ್ಮೂಗು, ಕಿಮ್ಮೂಗು, ಹೆಮ್ಮೂಗು, ಗೆಡ್ಡೆಮೂಗು ಎಂದೆಲ್ಲಾ ಹೇಳುವರು.

ಮೂಗಿನ ಒಳರಚನೆಯನ್ನು ಗಮನಿಸಿದಾಗ ಮೂಗಿನ ಎರಡು ಹೊಳ್ಳೆಗಳ ನಡುವೆ ತೆಳುವಾದ ಮೃದ್ವಸ್ಥಿಯ ಒಂದು ಗೋಡೆಯಿದೆ. ಅದರ ಎಡ ಮತ್ತು ಬಲ – ಎರಡೂ – ಹೊಳ್ಳೆಗಳಲ್ಲಿ ಸಣ್ಣ ಸಣ್ಣ ನರಗಳಿವೆ. ಇವು ಮೂಗಿನ ಮೂಲಕ ಒಳಬಂದು ನಮ್ಮ ಶರೀರವನ್ನು ಪ್ರವೇಶಿಸುವ ಗಾಳಿಯಲ್ಲಿರುವ ಬಿಸಿಯನ್ನು ನಮ್ಮ ಮೈಯ್ಯಲ್ಲಿರುವ ಶಾಖಕ್ಕೆ ಸರಿಯಾಗಿ ಹೊಂದಿಸಿ ಒಳಬಿಡುವ ಶಕ್ತಿಯನ್ನು ಹೊಂದಿವೆ. ಮನುಷ್ಯನ ಉಚ್ವಾಸ – ನಿಶ್ವಾಸಗಳೆರಡೂ ಅಂದರೆ ನಾಸಿಕಾನಿಲಗಳು ಮೂಗಿನ ಮೂಲಕವೇ ನಡೆಯುವುದು.

ಮೂಗಿನಲ್ಲಿ ಹೊರಗಿನಿಂದ ಬರುವ ಬಿಸಿಗಾಳಿಯನ್ನು ಸೋಸುವ ಕ್ರಿಯೆ ಎರಡು ಹಂತಗಳಲ್ಲಿ ನಡೆಯುತ್ತದೆ. ಮೊದಲ ಹಂತದಲ್ಲಿ ದಪ್ಪ ದಪ್ಪ ಧೂಳಿನ ಕಣಗಳನ್ನು ಮೂಗಿನ ಹೊಳ್ಳೆಯ ಮುಂಬದಿಗಿರುವ ರೋಮಗಳು ತಡೆಯುತ್ತವೆ. ಆದರೆ ಕೆಲವೊಮ್ಮೆ ಅದನ್ನೂ ಮೀರಿ ಒಳಗೆ ಹೋದ ಸಣ್ಣಧೂಳನ್ನು ಸೀನಿನ ಮೂಲಕ ಮೂಗಿನಿಂದ ಹೊರಗೆ ದಬ್ಬುತ್ತದೆ. ಕೆಲವೊಮ್ಮೆ ಅದೂ ಸಾಧ್ಯವಾಗದೆ ಒಳಗೇ ಹೋಗಿಬಿಟ್ಟರೆ ನೆಗಡಿಯ ರೂಪದಲ್ಲಿ ಸಿಂಬಳವನ್ನು ಅಂದರೆ ನಾಸಿಕಾಮಲವನ್ನು ಸುರಿಸಿ ಅದನ್ನೆಲ್ಲಾ ಹೊರಗಟ್ಟುತ್ತದೆ. ಮೂಗಿನ ಈ ಹೊಳ್ಳೆಗಳಿಗೆ ನಾಸಾಪುಟ, ನಾಸಾರಂಧ್ರ ಎನ್ನುವರು.

ಮೂಗು ಹೀಗೆ ದೇಹದೊಳಕ್ಕೆ ಯಾವುದೇ ರೀತಿಯ ಹಾನಿಕಾರಕ ಬ್ಯಾಕ್ಟೀರಿಯಾ ಹೋಗದಂತೆ ಎಚ್ಚರಿಕೆಯಿಂದ ತಡೆಯುವ ತಡೆಗೋಡೆಯಂತಿದೆ. ಅಂದರೆ ಮೂಗು ದೇಹವನ್ನು ಶತ್ರುಗಳ ಕಾಟದಿಂದ ರಕ್ಷಿಸುವ ರಕ್ಷಕನಾಗಿ, ಸೈನಿಕನಾಗಿ ಕೆಲಸ ನಿರ್ವಹಿಸುತ್ತದೆ ಎಂದ ಮೇಲೆ ಇದರ ಮಹಿಮೆ ಅಪಾರ ತಾನೇ.

ಕೆಲವರು ಮೂಗಿನಲ್ಲಿ ಉಸಿರಾಡದೆ ಬಾಯಿಯಲ್ಲೇ ಉಸಿರಾಡುತ್ತಾರೆ. ಇದಕ್ಕೆ ಬೇರೆ ಬೇರೆ ಕಾರಣಗಳಿರಬಹುದು. ಈ ರೀತಿ ಬಾಯಿಯಲ್ಲಿ ಉಸಿರಾಡಿದಾಗ ಗಾಳಿಯಲ್ಲಿರುವ ನಮಗೆ ಶತ್ರುಗಳಾಗಿರುವ ಬ್ಯಾಕ್ಟೀರಿಯಾಗಳು ನೇರವಾಗಿ ಯಾವ ಅಡೆತಡೆಯೂ ಇಲ್ಲದೆ ಯಾವ ಭಯವೂ ಇಲ್ಲದೆ ನಿರ್ಭಯವಾಗಿ ಶರೀರದೊಳಗೆ ಪ್ರವೇಶಿಸುತ್ತವೆ. ಆ ಬ್ಯಾಕ್ಟೀರಿಯಾಗಳನ್ನು ತಡೆಯುವ ಅಥವಾ ಕೊಲ್ಲುವ ಶಕ್ತಿ ಬಾಯಿಗಿರುವುದಿಲ್ಲ. ಜೊತೆಗೆ ಹೊರಗಿನ ಗಾಳಿಯ ಬಿಸಿಗೆ ನಮ್ಮ ಶರೀರದ ಬಿಸಿಯನ್ನು ಸರಿದೂಗಿಸುವ ಸಾಮರ್ಥ್ಯವೂ ಬಾಯಿಗಿರುವುದಿಲ್ಲ. ಆದ್ದರಿಂದ ಮೂಗಿನಿಂದಲೇ ಉಸಿರಾಡುವುದು ಆರೋಗ್ಯದ ದೃಷ್ಟಿಯಿಂದ ಸರಿಯಾದ ಮಾರ್ಗ. ಈ ದೃಷ್ಟಿಯಿಂದ ನೋಡಿದಾಗ ಮನುಷ್ಯನ ಆರೋಗ್ಯವನ್ನು ಕಾಪಾಡುವ ವಿಷಯದಲ್ಲಿ ಮೂಗು ಎಂತಹ ಪ್ರಮುಖ ಪಾತ್ರವಹಿಸುತ್ತದೆ ಎಂಬುದು ಅಚ್ಚರಿಯ ಸಂಗತಿಯಾಗಿದೆ ಎನ್ನಬಹುದಲ್ಲವೇ!

ಮೂಗು ಹೀಗೆ ಉಸಿರಾಟದಲ್ಲಿ ಪ್ರಮುಖ ಪಾತ್ರವನ್ನು ವಹಿಸುವುದರ ಜೊತೆಗೆ ವಾಸನೆಯನ್ನೂ ಗ್ರಹಿಸುವ ಘ್ರಾಣಶಕ್ತಿಯನ್ನು ಪಡೆದುಕೊಂಡಿದೆ. ಈ ಘ್ರಾಣಶಕ್ತಿಯ ಪದರಗಳು ಮೂಗಿನ ಹೊಳ್ಳೆಯ ಮೇಲುಭಾಗದಲ್ಲಿ ಇವೆ. ಈ ವಾಸನೆ ಹಿಡಿಯುವ ಭಾಗಕ್ಕೆ 'ಸಿಲಿಯಾಂ' ಎಂದು ಹೆಸರು.

ಮೂಗಿನ ರಚನೆಯ ಬಗ್ಗೆ ಅರಿವಾದ ಮೇಲೆ ಈ ಮೂಗು ನಮ್ಮ ದೈನಂದಿನ ಮಾತುಕತೆಗಳಲ್ಲಿ, ಗಾದೆಗಳ ಮೂಲಕ ಹೇಗೆ ಪ್ರಚಲಿತದಲ್ಲಿದೆ ಎಂಬುದರ ಬಗೆಗೆ ಒಂದು ಇಣುಕು ನೋಟ ಬೀರೋಣ.

ಮೂಗಿನ ಬಗೆಗೆ ಹಲವಾರು ಗಾದೆಗಳು ಪ್ರಚಲಿತದಲ್ಲಿವೆ.

ಉದಾ :

ಮೂಗಿರುವವರೆಗೂ ನೆಗಡಿ ತಪ್ಪಿದ್ದಲ್ಲ
ಮೂಗಿಗಿಂತ ಮೂಗುತಿ ಭಾರ
ಮೂಗಿನ ಮುಸುರೆ ಕೊಡದವಳು ಮೂಲಂಗಿ ಪಚಡಿ ಕೊಟ್ಟಾಳ
ಮುಖಕ್ಕೆ ಮೂಗು ಚೆಂದ, ಮೂಗಿಗೆ ಮೂಗುತಿ ಚಂದ
ಮೂಗನ ಮುಂದೆ ಮೂಗು ತುರಿಸಿದಂತೆ
ಮೂಗ ಕನಸು ಕಂಡಂತೆ
ಮೂಕನಿಗೆ ಸ್ವಪ್ನ ಸಲ್ಲ, ಪೋಕನಿಗೆ ನಾಕ ಸಲ್ಲ
ಮೂಗಿನ ಮಸಿ ತೊಳೆಯಲು ಹೊಳೆಗೆ ಹೋದಾಂಗೆ
ಪಗೆಯಿಜಿಯಬನ್ದರ ಮೂಗನರಿದರೆಂಬಂತೆ
ಮೂಗಿನ ಕೆಳಗೆ ಬಾಯಿ ಅಂದ್ರೆ ಬ್ರಹ್ಮಾಂಡ ಸಿಟ್ಟು
ಮೂಗು ಡೊಂಕಿರಲು ಮೂಗುತಿ ದೂರುವುದೇ

ಮೂಗು ತೆತ್ತು ಕನ್ನಡಿ ಕೊಂಡಂತೆ
ಮೂಗ ಕಂಡ ಕನಸಿನಂತಾಯಿತ್ತೆನ್ನ ಭಕ್ತಿ
ಮೂಗು ಹಿಡಿದರೆ ಬಾಯಿ ತಾನಾಗೇ ತೆರೆಯುತ್ತದೆ
ಮೂಗು ಕುಡೀತು ಮಜ್ಜಿಗೆಯ
ಮೂಗು ಕುಯ್ದರೆ ಏನಾಯ್ತು ಹೊಳ್ಳೆ ಉಂಟಲ್ಲ
ಕೋಪದಲ್ಲಿ ಕುಯ್ದ ಮೂಗು ಶಾಂತಿಯಲ್ಲಿ ಬಂದೀತೇ
ಮೂಗಿನ ನೇರಕ್ಕೆ ಮಾತಾಡಿದ ಹಾಗೆ
ಮೂಗಿಲ್ಲದವಳಿಗೆ ಮೂಗುತಿಯಾಕೆ
ಮುಖಕ್ಕಿಂತ ಮೂಗು ಉದ್ದ
ಮೂಗನ ಕನಸು ಮೂಗನೇ ಬಲ್ಲ
ಮೂಗನಿಗೆ ಮುಡಿವಾಳ ಕೊಟ್ರೆ ಮೂಸಿನೋಡಿ ತಿಪ್ಪೆಗೆಸೆದ
ಮೂಗಿಲ್ಲದವರಲ್ಲಿ ಮೂಗುಳ್ಳವನೇ ಕುರೂಪಿ
ಒಂದು ನಿರ್ಧಾರದಿಂದ ಹೋದ ಮೂಗು ಹತ್ತು ನಿರ್ಧಾರಗಳಿಂದಲೂ ವಾಪಸ್ಸು ಬರುವುದಿಲ್ಲ
ಮೂಗು ಕುಯ್ಸಿಕೊಂಡು ಅವಲಕ್ಷಣ ಆಯಿತಲ್ಲ ಅಂದಂತೆ
ಮೂಗುದಾರವಿಲ್ಲದ ಎತ್ತು ಮುಂಡೆ ಸಾಕಿದ ಮಗ ಎರಡೂ ಒಂದೇ
ಮುಂಡೇ ಮಕ್ಕಳಿಗೆ ಮೂಗಿನ ಮೇಲೇ ಕೋಪ
ಮೂಗನೊಡನೆ ನಗುತ್ತಾ ಮಾತಾಡು, ಜಾಣನೊಡನೆ ಜಗಳವಾಡುತ್ತಾ ಮಾತಾಡು
ಮೂಗಿನ ಮೇಲೆ ಮಸಿ ಅಂದರೆ ಕೋಪ
ಮೂಟೀ ಮೂಗುತಿ ಹೋದ ದೆಸೆಯಿಂದ ಮೂಲೆ ಕಸವೆಲ್ಲ ಹೋಯಿತು

ಹೀಗೆ ಗಾದೆಗಳಲ್ಲಿ ಮೂಗು ಪ್ರಚಲಿತದಲ್ಲಿರುವಂತೆಯೇ ನುಡಿಗಟ್ಟುಗಳಲ್ಲಿ, ದಿನನಿತ್ಯದ ಮಾತುಕತೆಗಳಲ್ಲಿ ಮೂಗು ಹೇಗೆ ತೂರಿಕೊಂಡು ಬರುತ್ತದೆ ಎನ್ನುವುದನ್ನು ಈಗ ನೋಡೋಣ.

ಹತ್ತು ಆನೆಗಳನ್ನಾದರೂ ಸಾಕಬಹುದು, ಆದರೆ ಒಂದು ಹೆಣ್ಣನ್ನು ಹದ್ದುಬಸ್ತಿನಲ್ಲಿಟ್ಟುಕೊಂಡು ಸಾಕಿ ಒಳ್ಳೆಯ ಬುದ್ಧಿಕಲಿಸಿ ಬೆಳೆಸುವುದು ತುಸು ತ್ರಾಸದಾಯಕ ಎನ್ನುವ ಮಾತನ್ನು ಕೇಳುತ್ತಿರುತ್ತೇವೆ. ಆದರೆ ಎಲ್ಲಾ ಹೆಣ್ಣು ಮಕ್ಕಳನ್ನು ಸಾಕುವುದು ತ್ರಾಸದಾಯಕ ಎಂದು ಹೇಳಲು ಬರುವುದಿಲ್ಲ. ಆದರೂ ತ್ರಾಸ ಎನ್ನುವುದು ಇದ್ದೇ ಇರುತ್ತದೆ. ಸಾಮಾನ್ಯವಾಗಿ ಮನೆಯಲ್ಲಿ ಹಿರಿಯರ ಮತ್ತು ತಂದೆ-ತಾಯಿಗಳ ಮಾತು ಕೇಳದೆ ಹದ್ದುಮೀರಿ ವರ್ತಿಸುವ ಹೆಣ್ಣುಮಕ್ಕಳು ಮತ್ತು ಸರಿಯಾಗಿ ಓದದೆ, ಮನೆಗೂ ಸರಿಯಾಗಿ ಬರದೆ ಅಲ್ಲಿ ಇಲ್ಲಿ ಸುತ್ತುತ್ತಾ ಕ್ಲಬ್ಬುಗಳಲ್ಲಿ, ಬಾರುಗಳಲ್ಲಿ ಕಾಲ ಕಳೆಯುತ್ತಾ, ಕೆಟ್ಟ ಸ್ನೇಹಿತರ ಸಹವಾಸದಲ್ಲಿ ಬಿದ್ದು ಯಾರ ಬುದ್ಧಿ ಮಾತನ್ನೂ ಕೇಳದೆ ಉಡಾಫೆ ತೋರಿಸುತ್ತಿರುವ ಗಂಡು ಮಕ್ಕಳುಗಳಿಗೆ ಹಿರಿಯರು ತಂದೆ

ತಾಯಿಗಳು ಹೇಳುವ ಮಾತು ಒಂದೇ ಇವರಿಗೆ ಬೇಗ ಒಂದು 'ಮೂಗುದಾರ' ಹಾಕಿಸಿಬಿಡಬೇಕು. ಇಲ್ಲದಿದ್ದರೆ ಇವರನ್ನು ನಿಯಂತ್ರಿಸಲು, ಹತೋಟಿಗೆ ತರಲು ಸಾಧ್ಯವಿಲ್ಲ. ಅವರಾಡಿದ್ದೇ ಆಟವಾಗಿಬಿಟ್ಟಿದೆ ಎನ್ನುವ ಮಾತು ನಿತ್ಯ ಜೀವನದಲ್ಲಿ ಪ್ರಚಲಿತದಲ್ಲಿದೆ. ಈ ಮೂಗುದಾರ ಹಾಕಿಸುವುದು ಎಂದರೆ ಮದುವೆ ಮಾಡುವುದು ಎಂದರ್ಥ. ಮದುವೆ ಮಾಡಿದರೆ (ಮೂಗುದಾರ ಹಾಕಿದರೆ) ಹೆಣ್ಣು ಗಂಡನ ಅಧೀನದಲ್ಲಿರುವಳು. ಅಂದರೆ ಗಂಡನ ಅಂಕೆಯಲ್ಲಿದ್ದು ತಂದೆ ಮನೆಯಲ್ಲಿ ಆಡಿದಂತೆ ಆಡಲಾಗುವುದಿಲ್ಲ. ಹಾಗೆಯೇ ಗಂಡಿಗೆ ವಿವಾಹ ಮಾಡಿದರೆ ಮೂಗುದಾರ ಹಾಕಿದರೆ ಆತ ತನ್ನ ಹೆಂಡತಿಯ ಅಂಕೆಯಲ್ಲಿರುತ್ತಾನೆ. ಅಂದರೆ ಬೀದಿ ಸುತ್ತುವುದನ್ನು ನಿಲ್ಲಿಸಿ, ದುಂದುವೆಚ್ಚಕ್ಕೆ ಕಡಿವಾಣ ಹಾಕಿ ಹೆಂಡತಿಯ ಹದ್ದುಬಸ್ತಿನಲ್ಲಿರುತ್ತಾನೆ. ಎನ್ನುವ ಅರ್ಥದಲ್ಲಿ "ಮೂಗುದಾರ ಹಾಕಿ" ಎನ್ನುವುದು ಪ್ರಚಲಿತದಲ್ಲಿದೆ.

"ಮೂಗುದಾರ ಹಾಕಿ" ಎನ್ನುವುದು ಮನುಷ್ಯರಿಗೆ ಮಾತ್ರವಲ್ಲ, ದನಕರು ಎತ್ತು, ಎಮ್ಮೆ, ಕೋಣಗಳಂತಹ ಪ್ರಾಣಿಗಳಿಗೂ 'ಮೂಗುದಾರ' ಹಾಕುವುದು ರೂಢಿಯಲ್ಲಿದೆ. ಮೂಗುದಾರ ಹಾಕದಿದ್ದರೆ ಇವುಗಳು ಸಿಕ್ಕ ಸಿಕ್ಕವರಿಗೆ ತಿವಿಯುತ್ತಾ, ಹಾಯುತ್ತಾ ಗಾಯಗೊಳಿಸುತ್ತವೆ. ಹೊಲ ಉಳುವುದಕ್ಕೂ, ಗಾಡಿ ಹೊಡೆಯುವುದಕ್ಕೂ ಅಡ್ಡಿಪಡಿಸುತ್ತವೆ. ಹಾಗೆಯೇ ಹಾಲು ಕರೆಯಲು ಕೂತರೆ ಝಾಡಿಸಿ ಒದೆಯುತ್ತವೆ. ಈ ರೀತಿ ತಿವಿಯುವುದನ್ನು ಒದೆಯುವುದನ್ನು ತಪ್ಪಿಸಲು, ಅವುಗಳನ್ನು ಎಳೆದು ಹಿಡಿತದಲ್ಲಿಟ್ಟುಕೊಳ್ಳಲು 'ಮೂಗುದಾರ' ಹಾಕುವರು. ಹೀಗೆ ಮೂಗುದಾರ ಹಾಕಿದ ಮೇಲೆಯೇ ಅವು ಹತೋಟಿಗೆ ಬರುವುದು, ಹಿಡಿತಕ್ಕೆ ಸಿಕ್ಕುವುದು.

ಜನಪದದಲ್ಲಿಯೂ ಮೂಗುದಾರದ ಬಗೆಗೆ ಹೆಣ್ಣು ಮಗಳೊಬ್ಬಳು ಈ ರೀತಿ ಹೇಳುತ್ತಾಳೆ :

> "ಎತ್ತು ಕಾಯುವಣ್ಣ ನಮ್ಮೆತ್ತ ಕಂಡೇನೊ
> ಮುತ್ತೀನ ಹಗ್ಗ ಮೂಗುದಾಣ ಹಾಕ್ಕೊಂಡು
> ಹುತ್ತೀನ ಕೆಳಗ ಮಲಗ್ಯಾನೊ"

ಮೂಗುದಾರಕ್ಕೆ ಮೂಗುರ್ಚು ಎನ್ನುವರು. ಮಹಾಭಾರತದಲ್ಲಿಯು ಮೂಗುದಾರದ ಬಗೆಗೆ ಉಲ್ಲೇಖವಿರುವುದನ್ನು ಕಾಣಬಹುದು. ಉದಾ: ಪಾಂಡವರು ಅಜ್ಞಾತವಾಸದಲ್ಲಿರುವಾಗ ಮೂಗುದಾರ ಹಾಕಿಸಿಕೊಂಡವರಂತೆ "ಎಮ್ಮಂತೆ ಮೂಗುರ್ಚಿಗಳದಾರುಂಟು" ಎಂದು ಚಡಪಡಿಸುತ್ತಾ ಇದ್ದರಂತೆ ಎನ್ನುವ ಮಾತು ಬರುತ್ತದೆ. ಏಕೆಂದರೆ ಅವರು ಇನ್ನೊಬ್ಬರ ಅಡಿಯಾಳಾಗಿ, ಅಧೀನವಾಗಿ ದುಡಿಯುವಾಗ ಈ ರೀತಿಯ ನೋವು ಮನಸ್ಸಿಗಾಗಿರುವುದು ಸಹಜ.

ಒಟ್ಟಿನಲ್ಲಿ ಇಲ್ಲಿ **'ಮೂಗುದಾರ'** ಎನ್ನುವುದು ವ್ಯಕ್ತಿಗಳನ್ನಾಗಲೀ ಅಥವಾ ಪ್ರಾಣಿಗಳನ್ನಾಗಲೀ ನಿಯಂತ್ರಣದಲ್ಲಿ, ಹತೋಟಿಯಲ್ಲಿ ಅಥವಾ ಅಂಕೆಯಲ್ಲಿಟ್ಟುಕೊಳ್ಳಲು ಹಾಕುವ ಒಂದು ಕಡಿವಾಣ ಎನ್ನುವುದು ಇಲ್ಲಿ ಸರ್ವವಿದಿತವಾಗಿದೆ.

ಮೂಗು ಮನುಷ್ಯನಿಗೆ ಮಾನ-ಮರ್ಯಾದೆಯನ್ನು ತಂದುಕೊಡುವ ಅಂಗವಾಗಿದೆ. ಇದನ್ನು ಕತ್ತರಿಸುವುದು, ಕುಯ್ಯುವುದು ವ್ಯಕ್ತಿಯ ಮಾನ ತೆಗೆದಂತೆ. ಹಾಗೆಯೇ ಅವನ ಮರ್ಯಾದೆಯನ್ನೂ ಕಳೆದಂತೆ. ಅಂದರೆ ಮೂಗಿಗೇ ಅಷ್ಟೊಂದು ಪ್ರಾಮುಖ್ಯತೆ ಇದೆ ಎಂದಾಯಿತು. ಉದಾ : ರಾಮಾಯಣದಲ್ಲಿಯೇ ನೋಡಿ, ಲಕ್ಷ್ಮಣ ಶೂರ್ಪನಖಿಯ ಮೂಗು ಕತ್ತರಿಸಿದ್ದರಿಂದ ಅದು ಒಂದು ರೀತಿಯ ಅವಮಾನವಾಗಿ ಅದಕ್ಕಾಗಿ ಹೋರಾಟ ನಡೆದು ಸಾವಿರಾರು ಮಂದಿಯ ಸಾವಿಗೆ ಕಾರಣವಾಯಿತಲ್ಲದೆ ಇಡೀ ರಾಮಾಯಣದ ತಿರುವೇ ಬದಲಾಯಿತು. ಇತ್ತೀಚೆಗೆ ಒಬ್ಬ ಪ್ರೊಫೆಸರರು ತಮ್ಮ ಖಾಸಗಿ ಬದುಕಿನ ನಡುವೆ ಶಿಷ್ಯ ಪ್ರವೇಶಿಸಿದ್ದಕ್ಕಾಗಿ ಕೋಪಗೊಂಡು ಶಿಷ್ಯನ ಮೂಗನ್ನೇ ಕಚ್ಚಿ ಬಿಡುತ್ತಾನೆ, ಕೆಲವೊಮ್ಮೆ ಜಗಳಗಳಲ್ಲಿಯೂ ಮೂಗನ್ನು ಕಚ್ಚುವ ಸಂದರ್ಭಗಳೂ ಇವೆ. ಹಾಗೆಯೇ ಗಂಡಹೆಂಡಿರ ಜಗಳದಲ್ಲಿ ಗಂಡನ್ನೇ ಹೆಂಡತಿಯ ಮೂಗನ್ನು ಕುಯ್ದು ಹಾಕಿರುವುದೂ ನಡೆದಿದೆ. ಯುದ್ಧದ ಸಂದರ್ಭದಲ್ಲಿ ಗೆದ್ದವರು ಸತ್ತು ಬಿದ್ದಿರುವ ಶತ್ರುಗಳ ಮೂಗು ಮೊದಲಾದ ಅಂಗಗಳನ್ನು ಕತ್ತರಿಸಿ ತಮ್ಮ ನಾಡಿಗೆ ತೆಗೆದುಕೊಂಡು ಹೋಗಿ ರಾಶಿ ಹಾಕಿಕೊಂಡು ಅಪಹಾಸ್ಯ ಮಾಡುತ್ತಿದ್ದುದೂ ಉಂಟು. ಇದರಿಂದ ಸೋತವರಿಗೆ ಅವಮಾನ ಮಾಡಿದಂತಾಗುತ್ತಿತ್ತು. ಆದ್ದರಿಂದಲೇ ಮೂಗನ್ನು ಮಾನ-ಮರ್ಯಾದೆ ತರುವ ಅಂಗ ಎಂದಿರುವುದು.

ಸಾಮಾನ್ಯವಾಗಿ ಯಾವುದಾದರೂ ಒಂದು ಕೆಲಸದಲ್ಲಿ ಅಥವಾ ಒಂದು ಮಾತುಕತೆಗಳಲ್ಲಿ ಅಥವಾ ಇನ್ನೊಬ್ಬರ ವಿಷಯದಲ್ಲಿ ಅನಾವಶ್ಯಕವಾಗಿ ತನಗೆ ಸಂಬಂಧಿಸಿಲ್ಲದಿದ್ದರೂ, ಯಾರೂ ಕರೆಯದಿದ್ದರೂ ಮಧ್ಯೆ ಪ್ರವೇಶಿಸಿ ಬಾಯಿ ಹಾಕುವುದನ್ನು **'ಮೂಗು ತೂರಿಸಿಕೊಂಡು ಬರಬೇಡ'** ಎಂದು ಹೇಳುವುದು ಸರ್ವೇಸಾಮಾನ್ಯವಾಗಿದೆ. ಯಾವಾಗಲೂ ಯಾವ ವಿಷಯವು ನಮಗೆ ಸಂಬಂಧಿಸಿರುವುದಿಲ್ಲವೋ, ಆ ವಿಷಯದ ಬಗೆಗೆ ಮಧ್ಯೆ ಪ್ರವೇಶಿಸಿ ಮೂಗುಚಾಚಿ ಮಾತನಾಡುವುದು ಸರಿಯಲ್ಲ ಅಥವಾ ಯಾವ ವಿಷಯವನ್ನು ಮಾತನಾಡಿದರೆ ಅದರಿಂದ ಅಪಾರ್ಥಗಳು ಉಂಟಾಗುವುವೋ ಅಂತಹ ವಿಷಯಗಳಿಗೆ **ಮೂಗು ತೂರಿಸದೆ** ಮಾತುಬಾರದ ಮೂಗನಂತೆ ಪ್ರೇಕ್ಷಕನಂತಿರುವುದೇ ಉತ್ತಮ. ಇಲ್ಲದಿದ್ದರೆ ಎಲ್ಲದಕ್ಕೂ ಮೂಗುಚಾಚುವುದು, ಮೂಗು ತೂರಿಸುವುದು ಅಧಿಕ

ಪ್ರಸಂಗತನವಾಗುತ್ತದೆ. ಕುಟುಂಬದಲ್ಲಿ ತಂದೆ-ಮಕ್ಕಳ ಮಧ್ಯೆ, ಗಂಡ-ಹೆಂಡತಿಯರ ಮಧ್ಯೆ, ಸ್ನೇಹಿತರ ಮಧ್ಯೆ, ವ್ಯವಹಾರಗಳ ಮಧ್ಯೆ, ಮದುವೆ ಮುಂತಾದ ಕಾರ್ಯಗಳ ಮಧ್ಯೆ ಮೂಗುತೂರಿಸಿಕೊಂಡು ಹೋಗುವುದು ತಪ್ಪು. ಉದಾ: ಮಹಾಭಾರತದಲ್ಲಿ ಶ್ರೀಕೃಷ್ಣನು ಪಾಂಡವರ ಪರವಾಗಿ ದುರ್ಯೋಧನನ ಬಳಿಗೆ ರಾಯಭಾರಿಯಾಗಿ ಮೂಗುತೂರಿಸಿಕೊಂಡು ಹೋಗಿದ್ದನು. ಅದರಿಂದ ಪ್ರಯೋಜನವಾಯಿತೇ? ಆದ್ದರಿಂದ ಯಾವುದೇ ವಿಚಾರದಲ್ಲಾಗಲೀ ಅದು ನಮಗೆ ಸಂಬಂಧಿಸಿಲ್ಲದಿದ್ದರೆ ಮಧ್ಯೆ ಮೂಗು ತೂರಿಸುವುದು ಬೇಡ. ಏಕೆಂದರೆ ಯಾವುದೇ ಪೂರ್ವಾಪರ ತಿಳಿಯದೆ ಮೂಗು ತೂರಿಸಿದರೆ ಅದರಿಂದ ಯಾರಿಗೆ ನೋವಾಗುವುದೋ, ಕೆಡುಕಾಗುವುದೋ ಹೇಳಲು ಬರುವುದಿಲ್ಲ. ಅದರಿಂದ ಈ ಮೂಗು ತೂರಿಸುವ, ಮೂಗು ಚಾಚುವ ಗೊಡವೆ ನಮಗೇಕೆ ಯೋಚಿಸಿ!

ಸಾಮಾನ್ಯವಾಗಿ ಜೀವನ, ಸಂಸಾರ ಎಂದ ಮೇಲೆ ನೂರಾರು ಸಮಸ್ಯೆಗಳು, ಕಷ್ಟಗಳು, ನೋವು-ಸಂಕಟಗಳು ಬಂದೇ ಬರುತ್ತವೆ. ಹಾಗೆಂದು ಸಂಸಾರದಲ್ಲಿ "ಈಸಬೇಕು ಇದ್ದು ಜಯಿಸಬೇಕು" ಎನ್ನದೆ ಸಾವಿಗೆ ಶರಣಾಗುವುದಕ್ಕಾಗುತ್ತದೆಯೇ? ಸತ್ತರೆ ಈ ಸಮಸ್ಯೆಗಳಿಗೆ ಉತ್ತರ ಸಿಕ್ಕುವುದಿಲ್ಲ. ಸಂಸಾರದಲ್ಲೇ ಇದ್ದು ಆ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಬೇಕು. ಅದೇ ರೀತಿ **"ಮೂಗಿರುವವರೆಗೂ ನೆಗಡಿ ತಪ್ಪಿದ್ದಲ್ಲ"** ಎನ್ನುವ ಗಾದೆಮಾತು ನಿತ್ಯ ಜೀವನದಲ್ಲಿ ಪ್ರಚಲಿತದಲ್ಲಿದೆ. ನೆಗಡಿ ಬಂದಾಕ್ಷಣ ಈ ಮೂಗಿದ್ದರೆ ತಾನೇ ಈ ನೆಗಡಿ ಬರುವುದು ಎಂದು ಮೂಗನ್ನೇ ಕುಯ್ದು ಬಿಸಾಡಲಾದೀತೆ? "ಕೋಪದಲ್ಲಿ ಕುಯ್ದ ಮೂಗು ಶಾಂತಿಯಲ್ಲಿ ಬಂದೀತೆ?" ಅದಕ್ಕಾಗಿ ನೆಗಡಿ ಬಂದರೆ ಅದಕ್ಕೆ ಔಷಧೋಪಚಾರ ಮಾಡಿಕೊಳ್ಳಬೇಕು ಮೂಗಿಗೆ ಹಬೆ ತೆಗೆದುಕೊಳ್ಳುವುದೋ, ಡ್ರಾಪ್ಸ್ ಹಾಕಿಕೊಳ್ಳುವುದೋ, ಮಾತ್ರೆ ನುಂಗುವುದೋ ಮಾಡಬೇಕು. ಅದುಬಿಟ್ಟು ಮೂಗು ಕುಯ್ದರೆ ಸಮಸ್ಯೆ ಪರಿಹಾರವಾಗುವುದೇ? ನೆಗಡಿ ಎಂದರೆ ಮೂಗಿನಿಂದ ಸುರಿಯುವ ನಾಸಿಕಾಮಲ. ಅಂದರೆ ಸಿಂಬಳ ಅಥವಾ ಗೊನ್ನೆ. ಹೀಗೆ ಮೂಗಿಗೆ ನೆಗಡಿಯಾಗುವುದು ಸಾಮಾನ್ಯವಾದ ಹಾಗೂ ಯಾವುದೇ ಒಂದು ಹೆಚ್ಚುಗಾರಿಕೆ ಇಲ್ಲದ ಸಹಜ ಪ್ರಕ್ರಿಯೆಯಾಗಿದೆ.

ಕೆಲವು ವ್ಯಕ್ತಿಗಳು 'ಅಲ್ಪವಿದ್ಯೆ ಮಹಾಗರ್ವಿ' ಎಂಬಂತೆ ಸ್ವಲ್ಪ ತಿಳಿದು ಕೊಂಡಿದ್ದರೂ ತಾನು ಹೆಚ್ಚಿಗೆ ತಿಳಿದಿದ್ದೇನೆ, ತಾನು ಯಾರಿಗೆ ಕಮ್ಮಿ ಎಂದು ಅಹಂಕಾರಪಡುತ್ತಾರೆ, ಗರ್ವದಿಂದ ಬೀಗುತ್ತಾರೆ. ಇನ್ನೂ ಕೆಲವರು 'ತಿರುಕನಿಗೆ ಐಶ್ವರ್ಯ ಬಂದಿದ್ದಕ್ಕೆ ತಿಂಗಳ ಬೆಳಕಿಗೆ ಕೊಡೆ ಹಿಡಿದ' ಎಂಬಂತೆ ಎಲ್ಲೋ ನಾಲ್ಕುಕಾಸು ಸಿಕ್ಕಿತು ಎಂದು ತಲೆಯಲ್ಲೇ ನಡೆಯುವವರಿರುತ್ತಾರೆ. ಅಂತಹವರನ್ನು ಕಂಡ ಜನ ನೀನು ಹಿಂದೆ ಹೇಗಿದ್ದೆ? ಎಂತಹ ಪರಿಸ್ಥಿತಿ ಇತ್ತು ನಿನಗೆ ಎಂದು ನನಗೆ ಗೊತ್ತಿಲ್ಲವೆ? ಈಗ ನನ್ನ ಎದುರಿಗೇ ನೀನು **"ಮೂಗೇರಿಸಬೇಡ"** ಸುಮ್ಮನಿರು

ಎಂದು ಮಾತಿನಿಂದ ಚುಚ್ಚುವರು. ಇಲ್ಲಿ ಮೂಗು ಅಹಂಕಾರದ ಪ್ರಕ್ರಿಯೆಯಲ್ಲಿಯೂ ಭಾಗಿಯಾಗುವುದೆಂಬುದು ತಿಳಿಯುತ್ತದೆ.

ವಯಸ್ಸಿಗೆ ಬಂದ ಮಕ್ಕಳನ್ನು ವಿವಾಹ ಮಾಡದೆ ಇಟ್ಟುಕೊಂಡಿದ್ದರೆ, ಅವರು ಯಾರನ್ನು ತೋರಿಸಿದರೂ ಒಪ್ಪುವುದೇ ಇಲ್ಲ. ಅವರು ಮಕ್ಕಳನ್ನು ದುಡಿಸಿಕೊಂಡು ತಿನ್ನುವುದಕ್ಕೆ ಇಟ್ಟುಕೊಂಡಿದ್ದಾರೆ, ಅವರು ಈ ಕಾಲಕ್ಕೆ ಎಲ್ಲಿ ಮದುವೆ ಮಾಡುತ್ತಾರೆ ಎಂದು **'ಮೂಗುಮುರಿ'**ಯುವವರಿದ್ದಾರೆ. ಇಲ್ಲಿ ಮೂಗುಮುರಿ ಎಂದರೆ ಮೂದಲಿಸುವುದು, ಅವಹೇಳನ ಮಾಡುವುದು, ಅವಮಾನಗೊಳಿಸುವುದು ಎನ್ನುವ ಅರ್ಥದಲ್ಲಿ ಬಳಕೆಯಾಗಿರುವುದು. ಕೆಲವು ಸಂದರ್ಭಗಳಲ್ಲಿ ತಿರಸ್ಕರಿಸುವಂತಹ ಧಿಕ್ಕರಿಸುವಂತಹ ಸನ್ನಿವೇಶಗಳಲ್ಲಿಯೂ **'ಮೂಗುಮುರಿ'** ಎಂಬ ಮಾತು ಪ್ರಚಲಿತದಲ್ಲಿರುವುದು.

ವಾದ ವಿವಾದಗಳನ್ನು ಮಾಡುವಾಗ ಚರ್ಚೆಗಳನ್ನು ಮಾಡುವಾಗ ಎದುರಾಳಿಗಳನ್ನು ಸೋಲಿಸಿ ನಿರುತ್ತರಗೊಳಿಸಿಶರಣಾಗುವಂತೆ ಮಾಡುವ ಸಂದರ್ಭದಲ್ಲಿ **"ಮೂಗು ತಿಕ್ಕಿಸು" "ಮೂಗುಜ್ಜು"** ಎನ್ನುವ ಮಾತನ್ನು ಹೇಳುತ್ತೇವೆ.

ಕೆಲವು ಸಂದರ್ಭಗಳಲ್ಲಿ ಮನೆಯಲ್ಲಿ ಜಗಳವಾಡುತ್ತಿದ್ದಾಗ ಏನಿದು ನಿಮ್ಮ ಜಗಳ, ನಿಲ್ಲಿಸಬಾರದೆ, ಯಾರಾದರೂ ಒಬ್ಬರು ಸೋತರೆ ಆಯಿತು. ಅದರಲ್ಲೇನು ದೊಡ್ಡಸ್ಥಿಕೆಯಿದೆ. ಹಿರಿಯನಾದ ನೀನೇ ಸುಮ್ಮನಿದ್ದರಾಯಿತು ಎಂದಾಗ, ಹೋಗಲಿ ಬಿಡಿ ನಾನು ಸೋತರೂ ಚಿಂತೆಯಿಲ್ಲ ಅವನ **'ಮೂಗೇ ಮೇಲಾಗಲಿ'** ಎನ್ನುವುದಿದೆ, ಹಾಗೆಯೇ ಒಬ್ಬ ವ್ಯಕ್ತಿಗೆ ಗೌರವ ಪ್ರತಿಷ್ಠೆಗಳು ಹೆಚ್ಚಿದಾಗ, ಅವರ ಕೆಲಸಕಾರ್ಯಗಳನ್ನು ನೋಡಿ ಯಾರಾದರೂ ಹೊಗಳಿದಾಗ ಅವರ **ಮೂಗು ಮೇಲಾಗುವುದು** ಎಂದು ಹೇಳುವುದಿದೆ.

ಯಾವಾಗಲೂ ಎದುರು ಮಾತನಾಡದೆ ತಲೆಬಗ್ಗಿಸಿಕೊಂಡು ಜೀತದಾಳಿನಂತೆ ದುಡಿಯುತ್ತಿದ್ದರೆ ಅಂತಹವರಿಗೆ **'ಮೂಗಿಗೆ ಕವಡೆ ಕಟ್ಟಿಕೊಂಡು ದುಡಿಯುತ್ತಾರೆ'** ಎನ್ನುವ ಮಾತು ಸಾಧಾರಣವಾಗಿ ಎಲ್ಲಾ ಮನೆಗಳಲ್ಲೂ ಪ್ರಚಲಿತವಾಗಿದೆ. ನೋಡಿ, ಅವರ ಮನೆಯಲ್ಲಿ ಆಳುಕಾಳುಗಳಿಲ್ಲದೆ ಅವರೊಬ್ಬರೇ ಎಲ್ಲಾ ಮಾಡುತ್ತಾರೆ. ಹೊರಗಡೆ, ಒಳಗಡೆ ಎಲ್ಲಾ ಮೂಗಿಗೆ ಕವಡೆಕಟ್ಟಿಕೊಂಡು ದುಡಿದು ಮಕ್ಕಳನ್ನು ಸಾಕುತ್ತಿದ್ದಾರೆ ಎನ್ನುವ ಮಾತು ಕೇಳಿಬರುತ್ತದೆ. ಕೆಲವೊಮ್ಮೆ ತಾಯಂದಿರು ತಮ್ಮ ಹೆಣ್ಣು ಮಕ್ಕಳು ಗಂಡನ ಮನೆಯಲ್ಲಿ ಗಾಣದೆತ್ತಿನಂತೆ ದುಡಿಯುವುದನ್ನು ಕಂಡು **ಮೂಗೆತ್ತಿನಂತೆ ದುಡಿಯುವುದೊಂದು** ಗೊತ್ತೇ ಹೊರತು ಬಾಯಿಬಿಟ್ಟು ಏನೂ ಹೇಳುವುದಿಲ್ಲ. ಅಷ್ಟು ಮೂಗಿಗೆ ಕವಡೆ ಕಟ್ಟಿಕೊಂಡು ದುಡಿದರೂ ನನ್ನ ಮಗಳಿಗೆ ನೆಮ್ಮದಿಯಿಲ್ಲ ಎನ್ನುವ ಮಾತನ್ನು ಹೇಳುವುದನ್ನು ಕೇಳುತ್ತಿರುತ್ತೇವೆ.

ನಾಚಿಕೆಗೆಟ್ಟವರನ್ನು ಲಜ್ಜೆಗೇಡಿಗಳನ್ನು **'ಮೂಗು ನಾಚಿ'**ಗಳು ಎನ್ನುವರು. ಮರ್ಯಾದೆಯನ್ನು ಕಾಪಾಡು, ಮಾನವನ್ನು ರಕ್ಷಿಸು ಎನ್ನುವಾಗ **'ಮೂಗನುಳುಹು'** ಎನ್ನುವರು.

ಮಕ್ಕಳಾಗಲಿ, ದೊಡ್ಡವರಾಗಲಿ ಬಿದ್ದಾಗ ಅಥವಾ ಯಾವುದಾದರೂ ಅಪಘಾತವಾದಾಗ ಗಾಯಗಳಾಗುವುದು ಸಹಜ. ಕೆಲವು ಗಾಯಗಳು ಮೇಲುಭಾಗದಲ್ಲಿ ಆಗಿರುತ್ತವೆ. ಕೆಲವು ಗಾಯಗಳು ಒಳಭಾಗದಲ್ಲಿ ಆಗಿ ನೋವು ಕೊಡುತ್ತಿರುತ್ತವೆ. ಹೀಗೆ ಮೇಲೆ ಗಾಯವಾಗದೆ ಒಳಭಾಗದಲ್ಲಿ ಮಾತ್ರ ಗಾಯವಾಗಿ ನೋವು ಕೊಡುವುದನ್ನು **ಮೂಗು ಪೆಟ್ಟು** ಎನ್ನುವರು. **ಮೂಗು ಗಾಯ** ಎಂದೂ ಹೇಳುವರು.

ಯಾರಿಗಾದರೂ ಪೆಟ್ಟಾದಾಗ, ನೋವಾದಾಗ, ಮಕ್ಕಳಿಗೆ ಹಿರಿಯರು ಹೊಡೆದಾಗ ಅಥವಾ ಯಾರಾದರೂ ಸತ್ತಾಗ ಅಥವಾ ಬೇರಾವುದೋ ಒಂದು ಸಂದರ್ಭದಲ್ಲಿ ಕೆಲವರು ಜೋರಾಗಿ ಅರಚಿಕೊಂಡು, ಕಿರುಚಿಕೊಂಡು ಎದೆಬಡಿದುಕೊಂಡು ಅಳುವುದನ್ನು ನೋಡುತ್ತೇವೆ. ಆದರೆ ಕೆಲವರು ಗಟ್ಟಿಯಾಗಿ ಅಳದೆ ಸದ್ದಿಲ್ಲದೆ **'ಮೂಕರೋದನ'** ಮಾಡುವರು. ಈ ರೀತಿಯ ಮೂಕರೋದನವನ್ನು **'ಮೂಗಳಿಕ್ಕೆ'**ಎಂದೂ ಕರೆಯುವರು.

ಇದೇ ರೀತಿ ಹಲವು ನೋವುಗಳಿದ್ದರೂ ಸಹಾ ಕೆಲವರು ಯಾರೊಬ್ಬರ ಬಳಿಯೂ ಹೇಳಿಕೊಳ್ಳಲಾರದೆ **'ಮೂಕ ವೇದನೆಯನ್ನು'** ಅನುಭವಿಸುವರು ಬಿಸಿ ತುಪ್ಪದ ರೀತಿ.

ಕೆಲವರು ತಮಗೆ ಸರಿ ಎನಿಸಿದ್ದನ್ನು ಹೇಳಿದರೆ ಮತ್ತೆ ಕೆಲವರು ಅವರಿಗೆ ಸರಿ ಎನಿಸಿದ್ದನ್ನು ಹೇಳುತ್ತಾರೆ. ಯಾವುದೇ ವಿಷಯವಾಗಲಿ, ಯಾವುದೇ ಮಾತಾಗಲಿ ಅದು ಅವರವರ **ಮೂಗಿನನೇರಕ್ಕೆ** ಹೊಂದಿಸಿಕೊಂಡು ಹೇಳುತ್ತಾರೆಯೇ ಹೊರತು ಎಲ್ಲರಲ್ಲೂ ಏಕಾಭಿಪ್ರಾಯ ಮೂಡುವುದಿಲ್ಲ. ಸಾಮಾನ್ಯವಾಗಿ ಮನೆಗಳಲ್ಲಿ ನೋಡಿ ನಾವು ಏನು ಹೇಳಿದರೂ ಅವರು ಒಪ್ಪುವುದಿಲ್ಲ. ಎಲ್ಲಾ ಅವರ ಮೂಗಿನ ನೇರಕ್ಕೆ ನಡೆಯಬೇಕು. ಅವರ ಮೂಗಿನ ನೇರಕ್ಕೇ ಅವರು ಮಾತನಾಡಬೇಕು ಎನ್ನುವುದು ಕೇಳಿಬರುತ್ತದೆ.

'ಮೂಗು ಹಿಡಿದರೆ ಬಾಯಿ ತಾನಾಗೇ ತೆರೆಯುತ್ತದೆ' ಎನ್ನುವ ಮಾತು ಕೆಲವು ವಿಶೇಷ ಸಂದರ್ಭಗಳಲ್ಲಿ ಕೇಳಿಬರುತ್ತದೆ. ಕೆಲವು ಸಾರಿ ಮಕ್ಕಳು ಮಾತ್ರೆ ನುಂಗಲು ಬಾಯಿ ತೆರೆಯದಿದ್ದರೆ ಆಗ ಡಾಕ್ಟರು ಮೂಗು ಹಿಡಿದರೆ ಬಾಯಿ ತಾನಾಗೆ ತೆರೆಯುತ್ತದೆ. ಬಾಯಿಗೆ ಮಾತ್ರೆ ಹಾಕಿ ಎನ್ನುವುದನ್ನು ಸಾಧಾರಣವಾಗಿ ಕೇಳುತ್ತಿರುತ್ತೇವೆ. ಇದು ಬಾಯಿ ಬಿಡದಿದ್ದವರಿಗೆ ಬಾಯಿ ತೆರೆಸುವ ಒಂದು

ತಂತ್ರವೆನ್ನಬಹುದು. ಉದಾ: ಪೋಲೀಸ್ ಇಲಾಖೆಯಲ್ಲಿ ಕಳ್ಳರ ಬಾಯಿ ಬಿಡಿಸಲು ಪೋಲೀಸರು ಅನುಸರಿಸುವ ವಿಧಾನಕ್ಕೂ ಈ ಮಾತು ಅನ್ವಯಿಸುತ್ತದೆ.

ಊಟ ಮಾಡುವ ವಿಷಯದಲ್ಲಿಯೂ ಈ ಮೂಗು ತೂರಿಕೊಂಡು ಬರುತ್ತದೆ. ಕೆಲವರು ವಿಶೇಷ ಸಂದರ್ಭಗಳಲ್ಲಿ ಹೆಚ್ಚು ಊಟ ಮಾಡಿದ್ದರೆ ಅದನ್ನು ಇವತ್ತು ನಾನು **'ಮೂಗಿನ ಮಟ್ಟ ತಿಂದಿದ್ದೇನೆ'** ರಾತ್ರಿಗೆ ಊಟ ಬೇಡ ಎನ್ನುವರು. ಕೆಲವರು ನಿನ್ನೇ ನಾನು **'ಮೂಗಿನ ಮಟ್ಟ ಕುಡಿದಿದ್ದೆ'**. ಅದಕ್ಕೆ ಎಲ್ಲಿಯೂ ಹೋಗಲಿಲ್ಲ ಎನ್ನುವುದನ್ನು ಹಾಗೆಯೇ ಮೂಗಿನ ಮಟ್ಟ ಕುಡಿದಿದ್ದರಿಂದ ನಾನು ಏನು ಮಾತನಾಡಿದೆ ಎಂಬುದೇ ಗೊತ್ತಿಲ್ಲ ಎಂದು ಹೇಳುವುದನ್ನೂ ಕೇಳುತ್ತೇವೆ. ಇದೇ ಮಾತುಗಳನ್ನು ಕೆಲವರು ಅವಹೇಳನದ ರೀತಿಯಲ್ಲಿಯೂ ಹೇಳುತ್ತಾರೆ. ಕಂಡವರ ಮನೆ ಊಟ ಸಿಕ್ಕಿತು ಎಂದು ಮೂಗಿನ ಮಟ್ಟ ತಿಂದಿದ್ದೀಯಾ ಎನ್ನುವರು. ಹಾಗೆಯೇ ಕಂಡವರ ಕಾಸು ಎಂದು **'ಮೂಗಿನ ಮಟ್ಟ ಕುಡಿದಿದ್ದೀಯಾ'** ಎನ್ನುವರು. ಇದೇ ರೀತಿ ಯಾರಿಗಾದರೂ ಹೆಚ್ಚು ಕೆಲಸವಿದ್ದರೆ ಆಗ ಈ ದಿನ ನನಗೆ **'ಮೂಗಿನವರೆಗೂ ಕೆಲಸವಿದೆ ಬಿಡುವೇ ಇಲ್ಲ'** ಎನ್ನುವರು.

ಆಭರಣಗಳನ್ನು ಧರಿಸುವುದು ಕಿವಿಗೆ, ಕೈಗೆ, ಕತ್ತಿಗೆ, ಕಾಲಿಗೆ, ತೋಳಿಗೆ, ಸೊಂಟಕ್ಕೆ, ತಲೆಗೆ ಮಾತ್ರವಲ್ಲ, ಮೂಗಿಗೂ ಆಭರಣ ಧರಿಸುವುದಿದೆ. ಮೂಗಿಗೆ ವಿಧ ವಿಧವಾದಂತಹ ನತ್ತುಗಳನ್ನು ಹಾಕುವರು. ಹಿಂದೆ ಮೂಗಿಗೆ ತೂತು ಮಾಡಿ ಮೂಗುತಿ ಹಾಕುತ್ತಿದ್ದರು. ಮೂಗಿನ ತೂತಿಗೆ ನಾಸಾಭೇದ ಎನ್ನುವರು. ಇತ್ತೀಚೆಗೆ ಮೂಗಿಗೆ ತೂತು ಮಾಡದೆ ಹಾಗೆಯೇ ಪ್ರೆಸ್ಸಿಂಗ್ ಮಾಡಿ ವಿವಿಧ ನಮೂನೆಯ ಆಭರಣಗಳನ್ನು ಹಾಕುವರು.

ಮೂಗಿಗೆ ಹಾಕುವ ಆಭರಣಗಳನ್ನು ಮೂಗುತಿ, ನತ್ತು, ಮೂಗುಬೊಟ್ಟು ನಾಸಾಭರಣ ಎನ್ನುವರು. ಇದರಿಂದಲೇ ಏನೋ **'ಮೂಗಿಗೆ ಮೂಗುತಿ ಚೆಂದ'** ಎನ್ನುವ ಮಾತು ರೂಢಿಯಲ್ಲಿ ಬಂದಿದೆ.

ಜನಪದದ ಹೆಣ್ಣು ಮಗಳೊಬ್ಬಳು.

"ಮೂಗುತಿ ಮುಂಭಾರ ಎಣೆಗಂಟು ಹಿಂಭಾರ

ನನಗೆಣೆಯ ನೀ ತಂದ ಸೀರೆ ನೆರಿಬಾರ" ಎಂದು ಹಾಡಿದ್ದಾಳೆ.

ಕೆಲವರು ಮಾತನಾಡುವಾಗ ಸ್ಪಷ್ಟವಾಗಿ ಮಾತನಾಡುವುದಿಲ್ಲ. ಮೂಗಿನಲ್ಲೇ ಮಾತನಾಡುತ್ತಿರುತ್ತಾರೆ. ಆಗ ನೀನೇನು **ನಾಸಿಕಂಧಮನನ** ಎನ್ನುವರು. ಅಂದರೆ **ಮೂಗಿನ ದನಿಯವನು** ಎಂದರ್ಥ. ಮೂಗಿನಲ್ಲೇ ಅರ್ಥವಾಗದ ರೀತಿಯಲ್ಲಿ ಮಾತನಾಡುವವರಿಗೆ ಹೇಳುವ ಮಾತಿದು.

ಕೆಲವರು ಕೈಯಲ್ಲಿ ಮಾಡದಿದ್ದರೂ ಬಾಯಿಯಲ್ಲೇ ಬ್ರಹ್ಮಾಂಡದ ದರ್ಶನ ಮಾಡಿಸುವರು. ಅಂದರೆ ಬಾಯಲ್ಲೇ ಆಸೆ ಹುಟ್ಟಿಸಿ, ಬಯಕೆ ಬಾಯಾರುವಂತೆ ಮಾಡುತ್ತಾರೆ. ಅಂತಹವರನ್ನು ಕಂಡು ಕೆಲವರು ನೀನೇನು ನನಗೆ **'ಮೂಗಿಗೆ ತುಪ್ಪ ಹಚ್ಚಬೇಡ'** ನನಗೂ ಎಲ್ಲಾ ಗೊತ್ತಿದೆ. ಎಂದು ಹೇಳುವ ಮಾತು ರೂಢಿಯಲ್ಲಿದೆ.

ಆಶ್ಚರ್ಯ, ವಿಸ್ಮಯ, ಬೆರಗನ್ನು ವ್ಯಕ್ತಪಡಿಸುವಾಗ **'ಮೂಗಿನ ಮೇಲೆ ಬೆರಳಿಟ್ಟುಕೊಂಡರು'** ಎನ್ನುವ ಪ್ರಯೋಗವಿದೆ. "ನಿಜಶಿರವ ನೊಲೆದು ಮೂಗಿನ ಮೇಲೆ ಬೆರಳಿಟ್ಟು ಮೌನದಿಂ ನಿಂದು" ಎನ್ನುವ ಮಾತನ್ನು ನೋಡಬಹುದು.

ಯಾವುದೋ ಒಂದು ಗಹನ ಸಮಸ್ಯೆ ಎದುರಾದರೆ ಆ ಸಮಸ್ಯೆಯನ್ನು ಬಗೆಹರಿಸಲಾಗದೇ ಹೋದಾಗ ಬೇರೆ ದಾರಿ ಕಾಣದೆ ಮೌನವಾಗಿರುವುದನ್ನು **'ಮೂಗುವಡು'** ಎನ್ನುವುದಿದೆ. "ತರ್ಕ ತರ್ಕಿಸಲರಿಯದೆ ಮೂಗುವಟ್ಟಿದ್ದಿತ್ತಯ್ಯಾ" ಎನ್ನುವ ಮಾತಿದೆ.

ಜನಪದರು ತಮ್ಮಲ್ಲಾಗುತ್ತಿದ್ದ ಜಗಳಗಳನ್ನು ತಾವೇ ಬಗೆಹರಿಸಿಕೊಳ್ಳುತ್ತಿದ್ದರೇ ಹೊರತು ಪೋಲೀಸು, ಕೋರ್ಟು ಎಂದು ಸುತ್ತುತ್ತಿರಲಿಲ್ಲ. ಅವರೇ ತಪ್ಪಿತಸ್ಥರಿಗೆ ಶಿಕ್ಷೆಯನ್ನು ವಿಧಿಸುತ್ತಿದ್ದರು. ಉದಾ: ಒಬ್ಬ ವ್ಯಕ್ತಿ ಹೇಳಿದ್ದು ಸತ್ಯವೇ ಅಥವಾ ಸುಳ್ಳೇ ಎನ್ನುವುದನ್ನು ಪ್ರಮಾಣೀಕರಿಸಲು ಆತ ತನ್ನ ನಾಲಿಗೆಯನ್ನು ಮೂಗಿಗೆ ಮುಟ್ಟಿಸಬೇಕಾಗಿತ್ತು. ಅಂದು ಇದು ಶಿಕ್ಷೆಯ ಒಂದು ಬಗೆಯಾಗಿತ್ತು. ಇಂದು ಇವೆಲ್ಲ ರೂಢಿಯಲ್ಲಿಲ್ಲ.

ಮೂಗಿನ ಆಕಾರದ ಮೂಲಕ ಅವರ ಗುಣ-ಸ್ವಭಾವಗಳನ್ನೂ ಅಳೆಯುವುದಿದೆ. ಉದಾ : ನೀಳನಾಸಿಕದವರು ಬುದ್ಧಿವಂತರಂತೆ. ಮೂಗು ದೊಡ್ಡದಿದ್ದರೆ ಅವರಿಗೆ ಕೋಪ ಕಡಿಮೆಯಂತೆ.

ಕೆಲವರಿಗೆ ಸಿಕ್ಕಾಪಟ್ಟೆ ಕೋಪ ಬರುವುದು. ಅಂತಹವರನ್ನು ನೋಡಿಯೇ ಅವರಿಗೆ **'ಮೂಗಿನ ತುದಿಯಲ್ಲೇ ಕೋಪ'** ಎನ್ನುವ ಮಾತು ಪ್ರಚಲಿತದಲ್ಲಿದೆ. ಇಂತಹವರಿಗೆ ಕೋಪ ಬಂದಾಗ ಮೂಗೆಲ್ಲಾ ಕೆಂಪಗಾಗಿ ಮೂಗಿನ ಹೊಳ್ಳೆಗಳು ದೊಡ್ಡದಾಗುವುದೂ ಇದೆ.

ಕೆಲವೊಮ್ಮೆ ತಲೆಗೆ ಏನೂ ಹೊಳೆಯದಿದ್ದಾಗ ಮೂಗನ್ನು ಕೆರೆದುಕೊಂಡರೆ ಅಥವಾ ಮೂಗನ್ನು ಉಜ್ಜಿಕೊಂಡರೆ ನೆನಪಿನ ಶಕ್ತಿ ವರ್ಧಿಸುವುದಂತೆ.

ಮೂಗು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನತೆಯನ್ನು ಹೊಂದಿದೆ. ಇಡೀ ಜಗತ್ತಿನಲ್ಲಿಯೇ ಒಬ್ಬನ ಮೂಗಿದ್ದಂತೆ ಇನ್ನೊಬ್ಬನ ಮೂಗು ಇರುವುದಿಲ್ಲ. ಕೆಲವೊಮ್ಮೆ ಮೂಗಿನಿಂದಲೇ ವ್ಯಕ್ತಿಗಳನ್ನು ಗುರುತಿಸಲಾಗುವುದು. ಮತ್ತೆ ಕೆಲವೊಮ್ಮೆ ವ್ಯಕ್ತಿಗಳಿಗೆ ಮೂಗನ್ನೇ ಅಡ್ಡ ಹೆಸರಾಗಿ ಬಳಸುವುದೂ ಉಂಟು. ಉದಾ : ಗೆಡ್ಡೆ ಮೂಗಿನವನು, ಗಂಟು ಮೂಗಿನವನು, ಉದ್ದನೆ ಮೂಗಿನವನು ಇತ್ಯಾದಿ.

ಒಟ್ಟಿನಲ್ಲಿ ಮೂಗು ದಿನನಿತ್ಯದ ಜೀವನದಲ್ಲಿ, ಅವಮಾನ ಅವಹೇಳನಗಳಲ್ಲಿ, ಗೌರವ, ಪ್ರತಿಷ್ಠೆಗಳನ್ನು ತೋರಿಸುವಲ್ಲಿ, ಒಬ್ಬ ವ್ಯಕ್ತಿಯನ್ನು ಕೀಳಾಗಿ ಕಾಣುವಲ್ಲಿ, ಗಾದೆಗಳಲ್ಲಿ, ನುಡಿಗಟ್ಟುಗಳಲ್ಲಿ ಈ ಮೂಗು ಮಧ್ಯೆ ತೂರಿ ಬರುತ್ತದೆ. ಹಾಗೆಯೇ ನಾವು ಪ್ರತಿನಿತ್ಯ ಮನೆಯಲ್ಲಿ ಬೆಳಗ್ಗೆಯಿಂದ ಸಂಜೆಯವರೆಗಿನ ಮಾತುಕತೆಗಳಲ್ಲಿ ಒಂದಲ್ಲ ಒಂದು ಸಂದರ್ಭದಲ್ಲಿ ಎಲ್ಲದಕ್ಕೂ ಮೂಗುತೂರಿಸಬೇಡ, ಹೆಚ್ಚು ಮಾತನಾಡದೆ ಮೌನವಾಗಿ ಮೂಕಪ್ರೇಕ್ಷಕನಾಗಿರು ಎಂತಲೋ ಅಥವಾ ನಿನ್ನ ಮೂಗಿನ ನೇರಕ್ಕೆ ನೀನು ಮಾತನಾಡಬೇಡ, ನಮ್ಮ ಮಾತನ್ನೂ ಸ್ವಲ್ಪ ಕೇಳು ಎಂತಲೋ – ಹೀಗೆ ಅನೇಕ ವಿಷಯದ ಮಾತುಕತೆಗಳಲ್ಲಿ ಮೂಗು ಮಧ್ಯೆ ಚಾಚುತ್ತದೆ.

ಹೀಗೆ ಮೂಗು ಮನುಷ್ಯನ ಆರೋಗ್ಯದ ದೃಷ್ಟಿಯಿಂದಲೂ, ಮಾನಾಭಿಮಾನದ ಅಂಗವಾಗಿಯೂ, ವಾಸನೆಯ ಗ್ರಹಿಕೆಯಿಂದಲೂ, ಒಂದೇ ಎರಡೇ ನಾನಾ ವೈವಿಧ್ಯತೆ, ವೈಶಿಷ್ಟ್ಯಗಳಿಂದ ಮೆರುಗನ್ನು ಪಡೆದುಕೊಂಡಿದೆ. ಇದನ್ನೆಲ್ಲ ನೋಡಿದಾಗ ಮೂಗೇ ನೀನೆಷ್ಟು ಸೋಜಿಗ! ನೀನೆಷ್ಟು ಅದ್ಭುತ! ನಿನ್ನ ಮಹಿಮೆ ಅಪರಂಪಾರ ಎಂದು ಮೂಗಿನ ಮೇಲೆ ಬೆರಳಿಡುವಂತಿದೆ!

ಗ್ರಂಥ ಋಣ

೧. ಪಟ್ಟಾಂಗ – ವಾಮನನಂದಾವರ
೨. ಕನ್ನಡ ಪ್ರಭ
೩. ಕನ್ನಡ ಸಾಹಿತ್ಯ ಪರಿಷತ್ ನಿಘಂಟು

❑

೭. ಮಸ್ಕಿ ಕನ್ನಡದಾಗ ಸಂಬಂಧಿಸುವ ಒಟ್ಟುಗಳ ನಿಯಮಗಳು

–ಬಸವರಾಜ ಕೋಡಗುಂಟಿ

ಸಣ್ರೂಪಗಳು :

ಉ.ಸ್ವ	:	ಉದ್ದ ಸ್ವರ
ಗಿ.ಸ್ವ	:	ಗಿಡ್ಡ ಸ್ವರ
ಹೆ.	:	ಹೆಸರ್ಪದ
ಒ.	:	ಒಟ್ಟು
ವ್ಯ.	:	ವ್ಯಂಜನ
{ }	:	ಪದ {ಹೆಸರ್ಪದ + ಒಟ್ಟು}
( )	:	ಹೆಸರ್ಪದದ ಕೊನೆಯ ಮತ್ತು ಒಟ್ಟಿನ ಮೊದಲ ಸ್ವರ/ವ್ಯಂಜನ
[ ]	:	ಬದಲಾಗುವ/ಬದಲಾದ ಹೆಸರ್ಪದದ ಕೊನೆಯ ಉಲಿ
– –	:	ಆಗಮ (ಬಂದು ಸೇರುವ ಉಲಿ)
+	:	ಸೇರುವಿಕೆ
>	:	ಬದಲಾವಣೆ
φ	:	ಬಿದ್ದು ಹೋಗುವುದು (ಸೊನ್ನೆ ಪ್ರತ್ಯಯ)

ಕವಿರಾಜಮಾರ್ಗ ಹೇಳಿದಂತೆ ಕನ್ನಡದಾಗ ಹೆಚ್ಚು ಒಳ ನುಡಿಗಳು ಕಂಡು ಬರುತ್ತವೆ. ಮಸ್ಕಿ ಕನ್ನಡ ಅವುಗಳಾಗ ಒಂದು. ಇದು ಇಂದಿನ ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ ಜಿಲ್ಲೆಗಳಾಗ ಬಳಕೆಯಾಗುತ್ತಿದೆ. ಮಸ್ಕಿ ಕನ್ನಡವು ಉಲಿ, ಧ್ವನಿಮಾ, ಆಕ್ರುತಿಮಾ, ತಿರುಳು ಹೀಗೆ ಎಲ್ಲ ಹಂತಗಳಾಗ ಶಿಶ್ಟ ಕನ್ನಡ ಮತ್ತು ಸುತ್ತಲಿನ ಇತರ ಒಳನುಡಿಗಳೊಂದಿಗೆ ಸಾಕಶ್ಟು ಬಿನ್ನತೆಗಳನ್ನು ತೋರಿಸುತ್ತದೆ.

ವಾಕ್ಯದಾಗ ಹೆಸರ್ಪದ ಮತ್ತು ಇತರ ಪದಗಳೊಂದಿಗಿನ ಸಂಬಂದವನ್ನು ತಿಳಿಸುವುದು ಕಾರಕ ಸಂಬಂದ. ಕಾರಕ ಸಂಬಂದಗಳು ದ್ರಾವಿಡ ಮಾತುಗಳಾಗ

ಒಟ್ಟುಗಳ ಮೂಲಕ ವ್ಯಕ್ತವಾಗುತ್ತವೆ. ಇವುಗಳಿಗೆ ಪಾರಂಪರಿಕ ಕನ್ನಡ ಸೊಲ್ಲಗಟ್ಟುಗಳಾಗ (ವ್ಯಾಕರಣಗಳಾಗ) ವಿಬಕ್ತಿ ಪ್ರತ್ಯಯಗಳು ಎಂದು ಕರೆಯಲಾಗಿದೆ. ಕನ್ನಡ ಸೊಲ್ಲಗಟ್ಟು ಪರಂಪರೆಯಾಗ ಬಾರತದ ಸೊಲ್ಲಗಟ್ಟು ಪರಂಪರೆಯಂತೆಯೆ ಏಳು ವಿಬಕ್ತಿಗಳನ್ನು ವಿವರಿಸಲಾಗಿದೆ. ಅವುಗಳಿಗೆ ಕನ್ನಡದಾಗ ಬೇರೆ ಬೇರೆ ಕಾಲ ಮತ್ತು ಜಾಗಗಳಾಗ ಬೇರೆ ಬೇರೆ ಒಟ್ಟುಗಳು ಬಳಕೆಯಲ್ಲಿವೆ.

ಹೀಗೆ ಕಾರಕ ಸಂಬಂದದ ಒಟ್ಟುಗಳು ಹೆಸರ್ಪದಗಳಿಗೆ ಬಂದು ಸೇರುವಾಗ ಹೆಸರ್ಪದ ಮತ್ತು ಒಟ್ಟು ಇವುಗಳ ನಡುವೆ ಕೆಲವು ಸಂದರ್ಬಗಳಲ್ಲಿ ಆಗಮಗಳು ಬರುತ್ತವೆ. ಇವುಗಳನ್ನು ಬೇರೆ ಬೇರೆ ವಿದ್ವಾಂಸರು ಬೇರೆ ಬೇರೆ ಹೆಸರುಗಳಿಂದ ಗುರುತಿಸಿದ್ದಾರೆ. ಕಾಲ್ಡ್‌ವೆಲ್ ಅವರು ಇವುಗಳನ್ನು Inflectional Increments ಎಂದು ಕರೆದಿದ್ದಾರೆ. ಹೊಸಗಾಲದ ಸೊಲ್ಲರಿಮೆಯಾಗ (ಬಾಶಾವಿಗ್ನಾನ) Link morphs, Augments ಎಂದು ಮೊದಲಾಗಿ ಇವುಗಳನ್ನು ಕರೆಯಲಾಗಿದೆ. ಕನ್ನಡದಾಗ ಡಿ.ಎನ್. ಶಂಕರಬಟ್ಟ ಅವರು ಇವುಗಳನ್ನು ಸಂಬಂದದ ಒಟ್ಟುಗಳು ಎಂದು ಕರೆದಿದ್ದಾರೆ. ಆದರೆ ಇವುಗಳನ್ನು ಸಂಬಂದಿಸುವ ಒಟ್ಟುಗಳೆಂದು ಕರೆಯುವುದು ಒಳ್ಳೆಯದು.

ಈಗಿನ ಬರಿಕೆಯಾಗ ಮಸ್ಕಿ ಕನ್ನಡದಾಗ ಬರುವ ಸಂಬಂದಿಸುವ ಒಟ್ಟುಗಳನ್ನು ಗುರುತಿಸಿ ಅವುಗಳಿಗೆ ಸೂಕ್ತ ನಿಯಮಗಳನ್ನು ಹೇಳುವ ಪ್ರಯತ್ನವನ್ನು ಮಾಡಲಾಗಿದೆ. ಮಸ್ಕಿ ಕನ್ನಡದಾಗ -ದ್-, -ನ್- ಮತ್ತು -ರ್- ಇವುಗಳು ಸಂಬಂದಿಸುವ ಒಟ್ಟುಗಳಾಗಿ ಬರುತ್ತವೆ. ಡಿ.ಎನ್. ಶಂಕರಬಟ್ಟ ಅವರು *-ಅತ್ತ-/*-ಇತ್ತ-, *-ಇನ, *-ಅನ->- ಅಣ- ಮತ್ತು *-ಅನ್ತ ಇವುಗಳನ್ನು ಕನ್ನಡದಾಗ ಸಂಬಂದದ ಒಟ್ಟುಗಳೆಂದು ವಿವರಿಸುತ್ತಾರೆ. (ಶಂಕರಬಟ್. ೨೦೦೭. ಪು.೨೭೯) ಬದ್ರಿರಾಜು ಕ್ರಿಶ್ಣಮೂರ್ತಿ ಅವರು *-ತ್ತ್-, *-ಅನ್-/*-ಇನ್-, *-ಅನ್-ತ್ತ್-?*-ಇನ್-ತ್ತ್-ಮತ್ತು *-ಅ-/*-ಇ- ಇವುಗಳನ್ನು ಮೂಲ ದ್ರಾವಿಡಕ್ಕೆ ಆಗಮಗಳೆಂದು ತೋರಿಸಿಕೊಟ್ಟಿದ್ದಾರೆ. (ಬದ್ರಿರಾಜು ಕ್ರಿಶ್ಣಮೂರ್ತಿ.೨೦೦೩.ಪು.೨೨೧-೫) ಬದ್ರಿರಾಜು ಮತ್ತು ಶಂಕರಬಟ್ಟರ ವಿವರಣೆಗಳನ್ನು ಬೆನ್ನಿಗೆ ಇಟ್ಟುಕೊಂಡು ಮಸ್ಕಿ ಕನ್ನಡದ ಸಂಬಂದಿಸುವ ಒಟ್ಟುಗಳ ಬೆಳೆವಣಿಗೆಯನ್ನು ಅರ್ತ ಮಾಡಿಕೊಳ್ಳುವ ಒಂದು ಪ್ರಯತ್ನವನ್ನು ಈ ಕೆಳಗಿನ ಅಂಕಣದಾಗ ಮಾಡಲಾಗಿದೆ.

ಮೂಲ ದ್ರಾವಿಡ (ಬದ್ರಿರಾಜು)		ಮೂಲ ಕನ್ನಡ (ಶಂಕರಬಟ್ಟ)		ಮಸ್ಕಿ ಕನ್ನಡ
*-ತ್ತ್-	>	*-ಅತ್ತ-/*-ಇತ್ತ-	>	-ದ್-
-ಅನ್-/-ಇನ್-	>	*-ಇನ	>	-ನ್-

ಮಸ್ಕಿ ಕನ್ನಡದಾಗ ಬಳಕೆಯಾಗುವ ಹೆಸರ್ಪದಗಳನ್ನು ಸುಮಾರಾಗಿ ಒಟ್ಟು ಮೂರು ಗುಂಪುಗಳಾಗಿ ಗುಂಪಿಸಬಹುದು.

ಗುಂಪು ೧. 'ಅ' ಕೊನೆ ಹೆಸರ್ಪದಗಳು

ಗುಂಪು ೨. 'ಇ' ಕೊನೆ ಹೆಸರ್ಪದಗಳು

ಗುಂಪು ೩. 'ಉ' ಕೊನೆ ಹೆಸರ್ಪದಗಳು

ಇವುಗಳಾಗ ಸಂಬಂದಿಸುವ ಒಟ್ಟುಗಳನ್ನು ತೆಗೆದುಕೊಳ್ಳುವುದನ್ನು ಗಮನದಾಗಿಟ್ಟುಕೊಂಡು ಗುಂಪು ೩ ಇದನ್ನು ಮತ್ತೆ ಎರಡು ಒಳಗುಂಪುಗಳಾಗಿ ಒಡೆಯಬಹುದು.

ಗುಂಪು ೩.೧ 'ಉ' ಕೊನೆ ಹೆಸರ್ಪದಗಳು-ಸಂಕ್ಯಾಪದಗಳನ್ನುಳಿದು

ಗುಂಪು ೩.೨ 'ಉ' ಕೊನೆ ಹೆಸರ್ಪದಗಳು-ಸಂಕ್ಯಾಪದಗಳು

ಸಂಬಂದಿಸುವ ಒಟ್ಟುಗಳು ಬಂದು ಸೇರುವ ಹೊತ್ತಿನಾಗ ಸಂದಿ ಪ್ರಕ್ರಿಯೆಯು ನಡೆಯುತ್ತದೆ. ಇಲ್ಲಿ ಸಾಮಾನ್ಯವಾಗಿ ಹೆಸರ್ಪದದ ಕೊನೆಯ ಉಲಿ ಮತ್ತು ಒಟ್ಟಿನ ಮೊದಲ ಉಲಿ ಬದಲಾವಣೆಗೆ ಒಳಗಾಗುವ ಅವಕಾಶಗಳಿರುತ್ತವೆ. ಮಸ್ಕಿ ಕನ್ನಡದಾಗ ಇಂತಾ ಹೊತ್ತಿನಾಗ ಎಂತಾ ಬದಲಾವಣೆಗಳು ಆಗುತ್ತವೆ ಎಂಬುದನ್ನು ಅವಲೋಕಿಸಿ ಅವುಗಳಿಗೆ ನಿಯಮಗಳನ್ನು ಹೇಳಲಾಗಿದೆ. ಪ್ರತಿಯೊಂದು ಗುಂಪಿನಲ್ಲಿಯೂ ಹೆಸರ್ಪದಗಳ ಮತ್ತು ಒಟ್ಟುಗಳ ರಚನೆಯನ್ನು ಆದರಿಸಿ ಸಂಬಂದಿಸುವ ಒಟ್ಟುಗಳಿಗೆ ಎರಡೆರಡು ನಿಯಮಗಳನ್ನು ಕಟ್ಟಲು ಸಾದ್ಯವಾಗಿದೆ. ಹೆಸರ್ಪದಗಳಿಗೆ ಬಂದು ಸೇರುವ ಕಾರಕ ಸಂಬಂದದ ಒಟ್ಟು ವ್ಯಂಜನ ಮೊದಲು ಇಲ್ಲವೆ ಗಿಡ್ಡಸ್ವರ ಮೊದಲಾಗಿದ್ದರೆ ಒಂದು ನಿಯಮ (ಅ) ಮತ್ತು ಉದ್ದಸ್ವರ ಮೊದಲಾಗಿದ್ದರೆ ಇನ್ನೊಂದು ನಿಯಮ (ಆ) ಹೀಗೆ ಎರಡು ನಿಯಮಗಳನ್ನು ಪ್ರತಿಯೊಂದು ಹೆಸರ್ಪದದ ಗುಂಪುಗಳಿಗೆ ಕಟ್ಟಲಾಗಿದೆ.

ಪಾರಂಪರಿಕ ಸೊಲ್ಲಗಟ್ಟುಗಳಾಗ ಒಟ್ಟು ಏಳು ವಿಬಕ್ತಿಗಳನ್ನು ವಿವರಿಸಲಾಗಿದೆ. ಹೊಸಗಾಲದಾಗ ವಿಬಕ್ತಿಗಳಿಗೆ ಸಂಬಂದಪಟ್ಟಂತೆ ಸಾಕಶ್ಟು ಮಾತುಕತೆ, ಜಗಳಗಳು ಆಗಿವೆ. ವಿಬಕ್ತಿಗಳ ಸಂಕ್ಯೆಯು ಡಿ.ಎನ್. ಶಂಕರಬಟ್ಟ ಅವರ ಪ್ರಕಾರ ನಾಲ್ಕು (ಡಿ.ಎನ್. ಶಂಕರಬಟ್ಟ, ೨೦೦೦) ಆದರೆ ಇನ್ನೊಂದೆಡೆ ವಿಲ್ಯಂ ಮಾಡ್ತ ಅವರು ಕನ್ನಡದಲ್ಲಿ ಒಂಬತ್ತು ಕಾರಕ ಸಂಬಂದಗಳು ಇವೆ, ಅವು ಏಳು ವಿಬಕ್ತಿ ರೂಪಗಳಿಂದ ವ್ಯಕ್ತವಾಗುತ್ತವೆ ಎಂದು ಹೇಳುತ್ತಾರೆ. (ಅಗಸ್ತ್ಯಲಿಂಗಂ ಮತ್ತು ಕುಶಾಲಪ್ಪ ಕೆ.ಗವ್ಡ.೧೯೭೨) ಆದರೆ ಹೆಚ್ಚಿನ ವಿದ್ವಾಂಸರು ಒಪ್ಪಿಕೊಳ್ಳುವ ಯಾವ ಒಂದು ವಾದವೂ ಇದುವರೆಗೆ ಬಂದಿಲ್ಲ. ಹೀಗಾಗಿ ಪಾರಂಪರಿಕ ವಿವರಣೆಯನ್ನೆ ಸದ್ಯಕ್ಕೆ ಇಲ್ಲಿ ಇಟ್ಟುಕೊಳ್ಳಲಾಗಿದೆ.

ಮಸ್ಕಿ ಕನ್ನಡದಾಗ ನೆಲೆ, ಸಾದನ ಮತ್ತು ಬಿಡುಗಡೆ ಈ ಕಾರಕ ಸಂಬಂದಗಳ ಒಟ್ಟುಗಳ ಮತ್ತು ಸಂಬಂದದ ಒಟ್ಟು ಬಂದು ಹೆಸರ್ಪದಕ್ಕೆ ಸೇರುವಾಗ ಸಂಬಂದಿಸುವ ಒಟ್ಟುಗಳು ಬರುತ್ತವೆ. ಮಸ್ಕಿ ಕನ್ನಡದಾಗ –ಅ, –ಇನ್ ಇವಗಳು ಸಂಬಂದದ ಒಟ್ಟುಗಳಾಗಿವೆ. ಇವುಗಳಲ್ಲಿ –ಇನ್ ಇದು ಸಂಬಂದಿಸುವ ಒಟ್ಟನ್ನು ಪಡೆಯುವುದಿಲ್ಲ. ಉಳಿದ ಕಾರಕ ಸಂಬಂದಗಳ ಹೊತ್ತಿನಾಗ ಸಂಬಂದಿಸುವ ಒಟ್ಟುಗಳು ಬರುವುದಿಲ್ಲ.

ಇನ್ನು ಸಂಬಂದಿಸುವ ಒಟ್ಟುಗಳು ಮತ್ತು ಅವುಗಳ ನಿಯಮಗಳನ್ನು ನೋಡಬಹುದು.

ಗುಂಪು ೧. 'ಅ' ಕೊನೆ ಪದಗಳು

ನಿಯಮ ೧.ಅ.

{ಹೆ.+ಒ.}>{ಹೆ.(–ಅ)+ಒ.(ವ್ಯ/ಗಿ.ಸ್ವ)}>{ಹೆ.[–ಅ>–ಉ]+–ದ್–+ಒ.(ವ್ಯ/ಗಿ.ಸ್ವ)}

ಬಳಕೆಗಳು :

ಹೆಸರ್ಪದ ಸರ'ಸರ'

ಸಾದನ ಸಂಬಂದದ ಒಟ್ಟು – ಲೆ

ಬಳಕೆ ೧.ಅ ಸರುದ್ಲೆ ಒಡುದ್ಲು

ಬಳಕೆ ೧.ಆ ಸರದಿಂದ ಹೊಡೆದಳು

ಬಳಕೆ ೧.ಇ (she) beat (some one) with a necklace

ಬಿಡುಗಡೆ ಸಂಬಂದದ ಒಟ್ಟು –ಲಿಂದ

ಬಳಕೆ ೨.ಅ ಸರುದ್ಲಿಂದ ಮಣಿ ತೆಳ್ಗ ಬಿತ್ತು

ಬಳಕೆ ೨.ಆ ಸರದಿಂದ ಮಣಿ ಕೆಳಗೆ ಬಿದ್ದಿತು

ಬಳಕೆ ೨.ಇ gem has fall down from the necklace

ಸಂಬಂದದ ಒಟ್ಟು – ಅ

ಬಳಕೆ ೩.ಅ ಸರುದ ಮಣಿ ಬಾಳ್ ಚೊಲೊ ಅಯ್ತಿ

ಬಳಕೆ ೩.ಆ ಸರದ ಮಣಿ ತುಂಬಾ ಚೆನ್ನಾಗಿ ಇದೆ

ಬಳಕೆ ೩.ಇ The gem of the necklace is so nice

ನಿಯಮ ೧.ಆ

{ಹೆ.+ಒ}>ಹೆ.[–ಅ]+ಒ.(ಉ.ಸ್ವ)}>{ಹೆ.[–ಅ>–φ–]+–ದ್–+ಒ.(ಉ.ಸ್ವ)}

ಬಳಕೆಗಳು :

ನೆಲೆ ಸಂಬಂದದ ಒಟ್ಟು –ಆಗ

ಬಳಕೆ ೪.ಅ ಸರ್ದಾಗ ಮೂರು ಕೆಂಪು ಮಣಿ ಅದಾವ

ಬಳಕೆ ೪.ಆ ಸರದಲ್ಲಿ ಮೂರು ಕೆಂಪು ಮಣಿಗಳು ಇವೆ

ಬಳಕೆ ೪.ಇ there are three gems in the necklace

ಬಿಡುಗಡೆ ಸಂಬಂದದ ಒಟ್ಟು –ಆಲಾಸಿ

ಬಳಕೆ ೫.ಅ ಸರ್ದಾಲಾಸಿ ಮಣಿ ಬಿತ್ತು

ಬಳಕೆ ೫.ಆ ಸರದಿಂದ ಮಣಿ ಬಿದ್ದಿತು

ಬಳಕೆ ೫.ಇ gem has fall down from necklace

ಗುಂಪು ೨. 'ಇ' ಕೊನೆ ಪದಗಳು

ನಿಯಮ ೨.ಅ

{ಹೆ.+ಒ.}>{ಹೆ.[–ಇ]+ಒ.(ವ್ಯ/ಗ.ಸ್ವ)}>{ಹೆ.[–ಇ]+ಒ.(ವ್ಯ/ಗ.ಸ್ವ)}

ಬಳಕೆಗಳು:

ಹೆಸರ್ಪದ ಕುರ್ಚಿ 'ಕುರ್ಚಿ'

ಸಾದನ ಸಂಬಂದದ ಒಟ್ಟು –ಲೆ

ಬಳಕೆ ೬.ಅ ಕುರ್ಚಿಲೆ ನೂಕಿದ್ಲು

ಬಳಕೆ ೬.ಆ ಕುರ್ಚಿಯಿಂದ ತಳ್ಳಿದಳು

ಬಳಕೆ ೬.ಇ (she) beat (someone) with the chair

ಬಿಡುಗಡೆ ಸಂಬಂದದ ಒಟ್ಟು –ಲಿಂದ

ಬಳಕೆ ೭.ಅ ಕುರ್ಚಿಲಿಂದ ಅಕಿ ತೆಳಾಗ ಬಿದ್ಲು

ಬಳಕೆ ೭.ಆ ಕುರ್ಚಿಯಿಂದ ಆಕೆ ಕೆಳಗೆ ಬಿದ್ದಳು

ಬಳಕೆ ೭.ಇ (She) has fall down from the chair

ಸಂಬಂದದ ಒಟ್ಟು –ಅ

ಸಂಬಂದದ ಒಟ್ಟು ಪ್ರಸ್ತುತ ನಿಯಮಕ್ಕೆ ಒಂದು ಅಪವಾದ. 'ಇ' ಕಾರಾಂತ ಹೆಸರ್ಪದಗಳಿಗೆ ಸಂಬಂದದ ಒಟ್ಟು ಸೊನ್ನೆ ಪ್ರತ್ಯಯವಾಗಿದೆ.

ಬಳಕೆ ೮.ಅ ಕುರ್ಚಿ ಕಾಲು ಮುರುದಯ್ತಿ

ಬಳಕೆ ೮.ಆ ಕುರ್ಚಿ ಕಾಲು ಮುರಿದಿದೆ

ಬಳಕೆ ೮.ಇ the leg of the chair has been broken

ನಿಯಮ ೨.ಆ

{ಹೆ.+ಒ.}>{ಹೆ.[–ಇ]+ಒ.(ಉ.ಸ್ವ)}>{ಹೆ.[–ಇ>ф]+ಒ.(ಉ.ಸ್ವ)

ಇಲ್ಲಿ ನೆಲೆ ಸಂಬಂದದ ಒಟ್ಟು –ಆಗ ಇದು ಸಾಮಾನ್ಯವಾಗಿ _ಆ್ಯಗ ಎಂದು ಬಳಕೆಯಾಗುತ್ತದೆ. ಆದರೆ ಇಲ್ಲಿ –ಆಗ ಎಂದು ವಿವರಿಸಲಾಗಿದೆ.

ಬಳಕೆಗಳು :

ನೆಲೆ ಸಂಬಂದದ ಒಟ್ಟು -ಆಗ

ಬಳಕೆ ೯.ಅ ಕುರ್ಚ್ಯಾಗ ಯಾರ ಕುಂತಾರ

ಬಳಕೆ ೯.ಆ ಕುರ್ಚಿಯಲ್ಲಿ ಯಾರೊ ಕುಳಿತಿದ್ದಾರೆ

ಬಳಕೆ ೯.ಇ some one is sitting in the chair

ಬಿಡುಗಡೆ ಸಂಬಂದದ ಒಟ್ಟು -ಆಲಾಸಿ

ಬಳಕೆ ೧೦.ಅ ಕುರ್ಚ್ಯಾಲಾಸಿ ಬುಕ್ಕ ತೆಳಾಗ ಬಿತ್ತು

ಬಳಕೆ ೧೦.ಆ ಕುರ್ಚಿಯಿಂದ ಪುಸ್ತಕ ಕೆಳಗೆ ಬಿದ್ದಿತು

ಬಳಕೆ ೧೦.ಇ The book has fall down from the chair

ಗುಂಪು ೩.೧ 'ಉ'ಕೊನೆ ಹೆಸರ್ಪದಗಳು – ಸಂಕ್ಯಾಪದಗಳನ್ನುಳಿದು

'ಉ' ಕೊನೆಯ ಹೆಸರ್ಪದಗಳಾಗ ಬಂದು ಸೇರುವ ಒಟ್ಟು ವ್ಯಂಜನ ಮೊದಲು ಇಲ್ಲವೆ ಗಿಡ್ಡಸ್ವರ ಮೊದಲಾಗಿದ್ದರೆ ಎಲ್ಲ ಹೆಸರ್ಪದಗಳು ಒಂದೆ ನಿಯಮದೊಳಗೆ ಬರುತ್ತವೆ. ಆದರೆ ಪ್ರತ್ಯಯವು ಉದ್ದಸ್ವರ ಮೊದಲಾಗಿದ್ದರೆ ಕನ್ನಡದ ಅತವಾ ದೇಸಿ ಪದಗಳು ಎರಡು ಬಗೆಯ ಬಳಕೆ ಅವಕಾಶಗಳನ್ನು ಹೊಂದುತ್ತವೆ. ಆದರೆ ತೆಗೆದುಕೊಂಡ ಪದಗಳು ಒಂದೆ ರೀತಿಯ ಬಳಕೆ ಅವಕಾಶವನ್ನು ಹೊಂದಿವೆ. ಈ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಆದಿ ಉದ್ದಸ್ವರ ಇರುವ ಒಟ್ಟುಗಳು ಬಂದು ಸೇರುವ ಸಂದರ್ಬದಾಗ ದೇಸಿ ಪದಗಳಿಗೆ ಸೂಕ್ತವಾದ ಎರಡು ಒಳ ನಿಯಮಗಳನ್ನು ಮಾಡಲು ಸಾದ್ಯವಾಗಿದೆ.

ನಿಯಮ ೩.೧.ಅ

{ಹೆ.+ಒ}>ಹೆ.[–ಉ]+ಒ.(ವ್ಯ/ಗಿ.ಸ್ವ)}>{ನಾ.[–ಉ>–ಇ]+ಒ.(ವ್ಯ/ಗಿ/ಸ್ವ)}

ಬಳಕೆಗಳು :

ಹೆಸರ್ಪದ ಕಲ್ಲು 'ಕಲ್ಲು'

ಸಾದನ ಸಂಬಂದದ ಒಟ್ಟು -ಲೆ

ಬಳಕೆ ೧೧.ಅ ಕಲ್ಲಿಲೆ ವಡುದ್ಲು

ಬಳಕೆ ೧೧.ಆ ಕಲ್ಲಿನಿಂದ ಹೊಡೆದಳು

ಬಳಕೆ ೧೧.ಇ (she) beat (someone) with the stone

ಬಿಡುಗಡೆ ಸಂಬಂದದ ಒಟ್ಟು -ಲಿಂದ

ಬಳಕೆ ೧೨.ಅ ಕಲ್ಲಿಂದ ಕೊಪ್ಪಿ ವರಾಗ ಬಂತು

ಬಳಕೆ ೧೨.ಆ ಕಲ್ಲಿನಿಂದ ಕೊಪ್ಪೆ ಹೊರಗೆ ಬಂದಿತು

ಬಳಕೆ ೧೨.ಇ the frog has come out from the stone

ಮಸ್ಕಿ ಕನ್ನಡದಾಗ -ಉ- ಕೊನೆ ಹೆಸರ್ಪದಗಳು -ಇನ್ ಎಂಬ ಒಟ್ಟನ್ನು ಪಡೆದುಕೊಳ್ಳುತ್ತವೆ. ಆಗ ಯಾವುದೆ ಸಂಬಂದಿಸುವ ಒಟ್ಟುಗಳು ಬರುವುದಿಲ್ಲ.

ಸಂಬಂದದ ಒಟ್ಟು – ಇನ್

ಹೆಸರ್ಪದ ನೂಲು ‘ನೂಲು’

ಬಳಕೆ ೧೩.ಅ ನೂಲಿನ್ ಸೀರಿ

ಬಳಕೆ ೧೩.ಆ ನೂಲಿನ ಸೀರೆ

ಬಳಕೆ ೧೩.ಇ sari of cotton

ಗುಂಪು ೩.೧ ‘ಉ’ಕೊನೆ ಹೆಸರ್ಪದಗಳು – ಸಂಕ್ಯಾಪದಗಳನ್ನುಳಿದು

ನಿಯಮ ೩.೧ಆ.೧

{ಹೆ.+ಒ.}>{ಹೆ.[–ಉ]+ಒ.(ಉ.ಸ್ವ.)}>{ಹೆ.[–ಉ>ϕ]+ಒ.(ಉ.ಸ್ವ.)}

ಬಳಕೆಗಳು:

ನೆಲೆ ಸಂಬಂದದ ಒಟ್ಟು –ಆಗ

ಬಳಕೆ೧೪.ಅ ಕಲ್ಲಾಗ ಬಿತ್ತಿದಂಗ

ಬಳಕೆ೧೪.ಆ ಕಲ್ಲಿನಲ್ಲಿ ಬಿತ್ತಿದಂತೆ

ಬಳಕೆ೧೪.ಇ just like sowing in stones

ಬಿಡುಗಡೆ ಸಂಬಂದದ ಒಟ್ಟು –ಆಲಾಸಿ

ಬಳಕೆ ೧೫.ಅ ಕಲ್ಲಾಲಾಸಿ ಕೊಪ್ಪಿ ವರಾಗ ಬಂತು

ಬಳೆ ೧೫.ಆ ಕಲ್ಲಿನಿಂದ ಕಪ್ಪೆ ಹೊರಗೆ ಬಂದಿತು

ಬಳಕೆ ೧೫.ಇ just like sowing in stones

ನಿಯಮ ೩.೧.ಆ.೨

{ಹೆ.+ಒ.}>{ಹೆ.[–ಉ]+ಒ.(ಉ.ಸ್ವ.)}>{ಹೆ.[–ಉ>ϕ]+–ನ್–+ಒ.(ಉ.ಸ್ವ.)}

ದೇಸಿ ಹೆಸರ್ಪದಗಳು :

ಬಳಕೆಗಳು :

ನೆಲೆ ಸಂಬಂದದ ಒಟ್ಟು –ಆಗ

ಬಳಕೆ ೧೬.ಅ ಕಲ್ನ್ಯಾಗ ಬಿತ್ತಿದಂಗ

ಬಳಕೆ ೧೬.ಆ ಕಲ್ಲಿನಲ್ಲಿ ಬಿತ್ತಿದಂತೆ

ಬಳಕೆ ೧೬.ಇ Just like sowing is stones

ಬಿಡುಗಡೆ ಸಂಬಂದದ ಒಟ್ಟು –ಆಲಾಸಿ

ಬಳಕೆ ೧೭.ಅ ಕಲ್ನ್ಯಾಲಾಸಿ ಕೊಪ್ಪಿ ವರಾಗ ಬಂತು

ಬಳಕೆ ೧೭.ಆ ಕಲ್ಲಿನಿಂದ ಕಪ್ಪೆ ಹೊರಗೆ ಬಂದಿತು

ಬಳಕೆ ೧೭.ಇ the frog has come out from the stone

ತೆಗೆದುಕೊಂಡ ಹೆಸರ್ಪದಗಳು :

ಹೆಸರ್ಪದ ಬೂಟು 'ಬೂಟು'

ನೆಲೆ ಸಂಬಂದದ ಒಟ್ಟು –ಆಗೆ

ಬಳಕೆ ೧೮.ಅ ಬೂಟ್ಯಾಗೆ ಕಸ ಕುಂತಯ್ತಿ

ಬಳಕೆ ೧೮.ಆ ಬೂಟಿನಲ್ಲಿ ಕಸ ಕುಳಿತಿದೆ

ಬಳಕೆ ೧೮.ಇ the dirt is filled in shoes

ಬಿಡುಗಡೆ ಸಂಬಂದದ ಒಟ್ಟು – ಆಲಾಸಿ

ಬಳಕೆ ೧೯.ಅ ಬೂಟ್ಯಾಲಾಸಿ ಉಳ ವರಾಗ ಬಂತು

ಬಳಕೆ ೧೯.ಆ ಬೂಟಿನಿಂದ ಹುಳು ಹೊರಗೆ ಬಂದಿತು

ಬಳಕೆ ೧೯.ಇ the worm came out from shoes

ಗುಂಪು ೩.೨ 'ಉ' ಕೊನೆ ನಾಮಪದಗಳು – ಸಂಕ್ಯಾಪದಗಳು

ನಿಯಮ ೩.೨.ಅ

{ಹೆ.+ಒ}>ಹೆ.[–ಉ]+ಒ.(ವ್ಯ/ಗಿ.ಸ್ವ)}>{ಹೆ.[–ಉ]+–ರ್–+ಒ.(ವ್ಯ/ಗಿ.ಸ್ವ)}

ಬಳಕೆಗಳು:

ಹೆಸರ್ಪದ ನಾಕು 'ನಾಲ್ಕು'

ಸಾದನ ಸಂಬಂದದ ಒಟ್ಟು – ಲೆ

ಬಳಕೆ ೨೦.ಅ ನಾಕುರ್ಲೆ ಗುಣ್ಸು

ಬಳಕೆ ೨೦.ಆ ನಾಲ್ಕರಿಂದ ಗುಣಿಸು

ಬಳಕೆ ೨೦.ಇ multiply (something) with four

ಬಿಡುಗಡೆ ಸಂಬಂದದ ಒಟ್ಟು – ಲಿಂದ

ಬಳಕೆ ೨೧.ಅ ನಾಕುರ್ಲಿಂದ ವಂದು ಕಡಿಗೆ ತೆಗಿ

ಬಳಕೆ ೨೧.ಆ ನಾಲ್ಕರಿಂದ ಒಂದನ್ನು ಹೊರತೆಗೆ

ಬಳಕೆ ೨೧.ಇ deduct one from four

ಸಂಬಂದದ ಒಟ್ಟು – ಅ

ಬಳಕೆ ೨೨.ಅ ನಾಕುರ್ ಮಗ್ಗಿ ಏಳು

ಬಳಕೆ ೨೨.ಆ ನಾಲ್ಕರ ಮಗ್ಗಿಯನ್ನು ಹೇಳು

ಬಳಕೆ ೨೨.ಇ recite fourth mathematical table

ಗುಂಪು ೩.೨ 'ಉ' ಕೊನೆ ನಾಮಪದಗಳು – ಸಂಕ್ಯಾಪದಗಳು

ನಿಯಮ ೩.೨.ಆ

{ಹೆ.+ಒ.}>{ಹೆ.[–ಉ]}+ಒ.(ಉ.ಸ್ವ)}>{ಹೆ.[–ಉ>ф]+–ರ್–+ಒ.(ಉ.ಸ್ವ)}

ಬಳಕೆಗಳು :

ನೆಲೆ ಸಂಬಂದದ ಒಟ್ಟು – ಆಗೆ

ಬಳಕೆ ೨೩.ಅ ನಾಕ್ರಾಗ ಏಸು ಯಾಡು ಅದಾವ

ಬಳಕೆ ೨೩.ಆ ನಾಲ್ಕರಲ್ಲಿ ಎಷ್ಟು ಎರಡುಗಳಿವೆ

ಬಳಕೆ ೨೩.ಇ how many twos are there in four

ಬಿಡುಗಡೆ ಸಂಬಂದದ ಒಟ್ಟು – ಆಲಾಸಿ

ಬಳಕೆ ೨೪.ಅ ನಾಕ್ರಾಲಾಸಿ ವಂದು ಕಡಿಗೆ ತೆಗಿ

ಬಳಕೆ ೨೪.ಆ ನಾಲ್ಕರಿಂದ ಒಂದನ್ನು ಹೊರತೆಗೆ

ಬಳಕೆ ೨೪.ಇ deduct one from four

ಗ್ರಂತಸೂಚಿ :

೧) ಅಗಸ್ತ್ಯಲಿಂಗಂ ಬಿ. ಮತ್ತು ಗವ್ಡ ಕೆ. ಕುಶಾಲಪ್ಪ. ೧೯೭೩ Case System in Dravidian. ಅಣ್ಣಾಮಲಯ್ ವಿಶ್ವವಿದ್ಯಾಲಯ, ಅಣ್ಣಾಮಲಯ್ ನಗರ.

೨) ಕಾಲ್ಡವೆಲ್ ರಾಬರ್‍ಟ್, ೨೦೦೦. (ಮರುಮುದ್ರಣ) A Comparitive Grammar of Dravidian or South Indian Languages. ಮದ್ರಾಸು ವಿಶ್ವವಿದ್ಯಾಲಯ, ಚೆನ್ನಯ್.

೩) ಕುಳ್ಳಿ ಜೆ.ಎಸ್. ೧೯೯೧ History of Grammatical Thearies in Kannada ಅಂತಾರಾಶ್ಟ್ರೀಯ ದ್ರಾವಿಡ ಬಾಶಾವಿಜ್ನಾನ ಸಂಸ್ತೆ. ತಿರುವನಂತಮುರಂ.

೪) ಕೇಶಿರಾಜ. ೧೩ನೇ ಶತಮಾನ ಅ. ಶಬ್ದಮಣಿದರ್‍ಪಣ. ಸಂ. ರಾವ್ ಎ. ವೆಂಕಟ ಮತ್ತು ಅಯ್ಯಂಗಾರ್ ಎಚ್. ಶೇಶ. ೧೯೭೩. ಮದ್ರಾಸು ವಿಶ್ವವಿದ್ಯಾಲಯ, ಚೆನ್ನಯ್.

೫) ------ ೧೩ನೇ ಶತಮಾನ ಅ. ಅದೇ. ಸಂ,. ನರಸಿಂಹಾಚಾರ್ ಡಿ.ಎಲ್. ೧೯೮೬ (ಆರನೆಯ ಮು.) ಡಿ.ವಿ.ಕೆ. ಮೂರ್ತಿ. ಮಯ್ಸೂರು.

೬) ಕೋಡಗುಂಜಿ ಬಸವರಾಜ. ೨೦೦೪ Ablative Case Markers in Maski Kannada ಬಾರತೀಯ ಬಾಶೆಗಳಲ್ಲಿ ವಿಬಕ್ತಿ ವ್ಯವಸ್ತೆ ರಾಶ್ಟ್ರೀಯ ಕಾರ್‍ಯಾಗಾರ, ಅಣ್ಣಾಮಲಯ್ ವಿಶ್ವವಿದ್ಯಾಲಯ, ಅಣ್ಣಾಮಲಯ್ ನವಂಬರ್ ೨೦೦೪ ಇಲ್ಲಿ ಮಂಡಿಸಿದ ಪ್ರಬಂದ.

೭) ------ ೨೦೦೬. Sociative Case in Maski Kannada ३೦ನೆಯ ಅಕಿಲ ಬಾರತ ದ್ರಾವಿಡ ಬಾಶಾವಿಜ್ನಾನಿಗಳ ಸಮಾವೇಶ ತಿರುವನಂತ ಪುರಮ್ ಜೂನ್ ೨೦೦೬ ಇಲ್ಲಿ ಮಂಡಿಸಿದ ಪ್ರಬಂದ.

೮) ------- ೨೦೦೬ Instrumental Case Markers in Maski Kannada. ೨೮ನೆಯ ಅಕಿಲ ಬಾರತ ಬಾಶಾವಿಜ್ನಾನಿಗಳ ಸಮಾವೇಶ ಬನಾರಸ್ ಹಿಂದೂ ವಿಶ್ವವಿದ್ಯಾಲಯ, ಬನಾರಸ್, ನವಂಬರ್ ೨೦೦೬ ಇಲ್ಲಿ ಮಂಡಿಸಿದ ಪ್ರಬಂದ.

೯) ------ ೨೦೦೮- aga : A Locative Case Marker in Kannada and its Development in Dravidian Languages, Dravidian Studies. ಸಂ. ೫ ಮತ್ತು ೬, ಸಂ. ೩-೪ ಮತ್ತು ೧-೨. ಪು. ೧೫೩-೧೬೬.

೧೦) ಭಟ್ಟ ಡಿ.ಎನ್. ಶಂಕರ್ ೨೦೦೦. ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ. ಬಾಶಾ ಪ್ರಕಾಶನ, ಮಯ್ಸೂರು.

೧೧) ------ ೨೦೦೭ ಕನ್ನಡ ನುಡಿ ನಡೆದು ಬಂದ ದಾರಿ. ಬಾಶಾ ಪ್ರಕಾಶನ, ಹೆಗ್ಗೋಡು.

೧೨) ಬದ್ರಿರಾಜು ಕ್ರಿಶ್ಣಮೂರ್ತಿ. ೨೦೦೩. The Dravidian Languages ಕೇಂಬ್ರಿಜ್ ವಿಶ್ವವಿದ್ಯಾಲಯ ಮುದ್ರಣಾಲಯ, ನ್ಯೂಯಾರ್ಕ್.

೧೩) ಸೀತಾರಾಮಯ್ಯ ಎಂ.ವಿ. ೧೯೮೮. ಪ್ರಾಚೀನ ಕನ್ನಡ ವ್ಯಾಕರಣಗಳು. ಮಯ್ಸೂರು ವಿಶ್ವವಿದ್ಯಾಲಯ. ಮಯ್ಸೂರು.

❐

೮. ಹರಿದಾಸಿನಿಯರು-ಗಲಗಲಿ ಅವ್ವ ಮತ್ತು ಗಿರಿಯಮ್ಮ

-ಪ್ರೊ. ವಿ.ಎನ್. ಶೇಷಗಿರಿರಾವ್

ದೊಡ್ಡವರ ಪದಗಳನ್ನು ಹಾಡುವುದರಿಂದ, ಕೇಳುವುದರಿಂದ ಪುಣ್ಯವಿದೆ. ಅದರಿಂದ ಭಗವಂತನ ಅನುಗ್ರಹಕ್ಕೆ ಪಾತ್ರರಾಗುವ ಯೋಗ ಒದಗಿ ಬರುತ್ತದೆ. ಭಾವಶುದ್ಧಿಯಾದ ಭಾಗವತ ಪರನಾದವರು ನಿಜಕ್ಕೂ ಧನ್ಯರು.

ಭಾಗವತ ವೇದಶಾಸ್ತ್ರ ಪುರಾಣಗಳ ಸಾರ ; ಅದು ಜನರಲ್ಲಿ ಭಕ್ತಿಯನ್ನು ಜಾಗೃತಗೊಳಿಸುತ್ತದೆ. ಭಗವಂತನ ಕಥೆಯ ಶ್ರವಣ, ಸಂಕೀರ್ತನೆಗಳು ಭಾಗವತದಿಂದ ಲಭಿಸುತ್ತವೆ. "ಕಲಿಯುಗದಿ ಗಾನದಿ ಕೇಶವನೆಂದರೆ ಕೈಗೂಡುವನು ಶ್ರೀರಂಗ ವಿಠಲ" ಎಂದು ಪ್ರಸಿದ್ಧ ಯತಿಗಳೂ, ಹರಿದಾಸರೂ ಆದ ಶ್ರೀ ಶ್ರೀಪಾದರಾಜರು ಹೇಳಿದ್ದಾರೆ.

ಹರಿದಾಸರಂತೆ ಅತ್ಮೋನ್ನತಿಯನ್ನೂ ಸನ್ಮಾರ್ಗವನ್ನೂ ಬೋಧಿಸಿದ ಹರಿದಾಸಿನಿಯರೂ ಇದ್ದಾರೆ. ಆದರೆ ಸಂಖ್ಯೆಯಲ್ಲಿ ಅವರು ಬೆರಳೆಣಿಕೆಯಷ್ಟು ಮಾತ್ರ. ಬಹುತೇಕ ಹರಿದಾಸಿನಿಯರು ಬಾಲ ವಿಧವೆಯಾಗಿದ್ದವರು. ಹರಿದಾಸರಿಗೆ ಸಿಕ್ಕಿದಷ್ಟು ಅವಕಾಶ, ಸ್ವಾತಂತ್ರ್ಯ ಹರಿದಾಸಿನಿಯರಿಗೆ ಸಿಗಲಿಲ್ಲ. ಆರ್ಥಿಕ ಸ್ವಾವಲಂಬನೆ ಅವರಿಗಿರಲಿಲ್ಲ. ಸಂಪ್ರದಾಯದ ಒಳತೋಟಿಗೆ ಸಿಕ್ಕಿ ತೊಳಲಾಡಿದವರು ಅವರು. ಗಲಗಲಿ ಅವ್ವನವರು, ಹೆಳವನಕಟ್ಟೆ ಗಿರಿಯಮ್ಮ ಹರಪನಹಳ್ಳಿ ಭೀಮವ್ವ, ತುಳಸಾಬಾಯಿ, ತುರುಡಗಿ ತಿಮ್ಮಮ್ಮ, ಓರೆವಾಯಿ ಲಕ್ಷ್ಮೀದೇವಮ್ಮ, ಅಂಬಾಬಾಯಿ ಮುಂತಾದವರು ಹರಿದಾಸಿನಿಯಾಗಿದ್ದಾರೆ.

ಗಲಗಲಿ ಅವ್ವನವರು ಶ್ರೀ ಪ್ರಸನ್ನ ವೆಂಕಟದಾಸರ ಸಮಕಾಲೀನರು. ೧೭ನೇ ಶತಮಾನದ, ಕೊಪ್ಪಳ ಜಿಲ್ಲೆಯ ಭೋಗಪುರದವರು. ತಮ್ಮ ಇಡೀ ಜೀವನವನ್ನು ಭಗವತ್ ಚಿಂತನೆಯಲ್ಲಿ ಕಳೆದವರು. ಇವರು ಪ್ರಥಮ ಹರಿದಾಸಿನಿ. ಮದುವೆಯಾದ ಎಂಟು ವರ್ಷದಲ್ಲೇ ಗಲಗಲಿ ಅವ್ವನವರು ವಿಧವೆಯಾದರು. ಹೆಚ್ಚಿನ ಪಾಂಡಿತ್ಯ ಗಳಿಸಿ ಶಿಷ್ಯೆಯರೊಂದಿಗೆ ಮೈಸೂರಿಗೆ ಬಂದು ರಾಜ ಮರ್ಯಾದೆ ಪಡೆದರು.

ರಮೀ ಅರಸ 'ರಾಮೇಶ' ಎಂಬ ಅಂಕಿತದಲ್ಲಿ ಇವರು ಕೃತಿ ರಚನೆ ಮಾಡಿದರು. ಅವರು ಕವಿಯತ್ರಿಯೂ ಆಗಿದ್ದರು. 'ಶ್ರೀ ಕೃಷ್ಣ ಜನ್ಮದ ಹಾಡು' ಇವರ ದೀರ್ಘಕಾವ್ಯ. ಇವರ ಪ್ರಸಿದ್ಧವಾದ 'ಮುಯ್ಯದ ಹಾಡಿ'ನಲ್ಲಿ ಗಲಗಲಿ ಅವ್ವನವರು ಪಾಂಡವರ ಭಕ್ತಿಯನ್ನು ಕೃಷ್ಣನ ವಾತ್ಸಲ್ಯವನ್ನು ವರ್ಣಿಸಿದ್ದಾರೆ. ಈಕೆಯ ಹಾಡುಗಳಲ್ಲಿ ನಿಂದಾಸ್ತುತಿಗಳೇ ಅಧಿಕ ; ಆಡುನುಡಿಗಳದ್ದೇ ಪ್ರಾಬಲ್ಯ. ಭಗವಂತನನ್ನು ನಿಂದಾಸ್ತುತಿಯ ಮೂಲಕ ಹೀಗೆ ಹಾಡಿದ್ದಾರೆ:

ಸಾಕೋರಂಗ ಅರಸುತನ ಯಾಕೊ ಯಾಕೊ
ಗೋಕುಲದ ಗೊಲ್ಲರು ನುಗಿಸಿ ಗಲ್ಲವ ಹಿಂಡಿ
ಕಾಕು ಮಾಡಿದ್ದು ನಿನಗೆ ಬೇಕೋ ಬೇಕೋ

ಅವರ ಹಾಡುಗಳಲ್ಲಿ ರಸಾಳತೆ ಇದೆ, ರಂಜಕತೆಯಿದೆ; ಲೋಕ ವಿಡಂಬನಾರ್ಥವಿದೆ; ಕನ್ನಡ ಸುಲಿದ ಬಾಳೆಹಣ್ಣಿನಂತಿದೆ, ಭಗವಂತನ ದರ್ಶನಾನಂದ ಸೌಲಭ್ಯವಿದೆ, ಶಾಸ್ತ್ರವಿದೆ, ಶಾಸ್ತ್ರಾರ್ಥವಿದೆ.

ಕ್ರಿ.ಶ. ೧೮ನೇ ಶತಮಾನದ ಪೂರ್ವಾರ್ಧದಲ್ಲಿದ್ದ ಮತ್ತೊಬ್ಬ ಪ್ರಸಿದ್ಧ ಹರಿದಾಸಿನಿಯೆಂದರೆ ಹೆಳವನ ಕಟ್ಟೆ ಗಿರಿಯಮ್ಮ. ರಾಣಿ ಬೆನ್ನೂರು ಈಕೆಯು ಹುಟ್ಟಿದ ಊರು. ಚಿಕ್ಕಂದಿನಿಂದಲೇ ದೈವಿಕ ಆಚರಣೆಯಲ್ಲಿ ಆಕೆ ಮಗ್ನಳಾಗಿದ್ದಳು. ಆಕೆಗೆ ವಾಕ್‌ಸಿದ್ಧಿಯಾಗಿತ್ತು. ಮದುವೆಯಾಗಿದ್ದರೂ ವಿಷಯ ಸುಖ ವಿಮುಖಳಾಗಿ ಗಂಡನಿಗೆ ಮತ್ತೊಂದು ಮದುವೆ ಮಾಡಿಸಿದ ವೈರಾಗ್ಯಮೂರ್ತಿಯವಳು. 'ಕವಿತಾಶಕ್ತಿ ಅವಳಲ್ಲಿ ಆವಿರ್ಭವಿಸಿತ್ತು. ಆಕೆಯನ್ನು ಕರ್ನಾಟಕದ ಭಕ್ತ ಮೀರಾ ಎಂದೇ ಕರೆಯಲಾಗುತ್ತದೆ. 'ಹೆಳವನಕಟ್ಟೆ ರಂಗ' ಎಂಬ ಅಂಕಿತದಲ್ಲಿ ಆಕೆ ಕೃತಿರಚನೆ ಮಾಡಿದ್ದಾಳೆ ದೀರ್ಘಕಾವ್ಯಗಳನ್ನು ಬರೆದಿದ್ದಾಳೆ. ಕನಕದಾಸರಂತೆ ಆಕೆ ಕೀರ್ತನಕಾರಳೂ ಹೌದು, ಕವಿಯತ್ರಿಯೂ ಹೌದು. ಶ್ರೀ ಗೋಪಾಲದಾಸರು ಆಕೆಯ ರಂಗೋಲೀ ಚಮತ್ಕಾರಕ್ಕೆ ತುಂಬ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಶ್ರೀ ರಾಘವೇಂದ್ರ ಮಠದ ಶ್ರೀ ಸುಮತೀಂದ್ರ ತೀರ್ಥರು ಗಿರಿಯಮ್ಮನ ಹರಿಭಕ್ತಿ ತಪಃಶಕ್ತಿಯನ್ನು ಕಂಡು ಪುಳಕಿತರಾಗಿದ್ದರು.

ಗಿರಿಯಮ್ಮ ದಯಾರ್ದ್ರ ಹೃದಯಿ; ಮಹಿಮೆಗಳನ್ನು ಪವಾಡಗಳನ್ನು ತೋರಿಸಿದ್ದಾಳೆ. ಭಗವಂತನ ಲೀಲೆಗಳನ್ನು ಜಗತ್ತಿಗೇ ತೋರ್ಪಡಿಸಿದಳು. ಭಕ್ತರ ಯೋಗ್ಯತೆಯನ್ನು ಪ್ರಚುರಪಡಿಸಿದಳು. ಮಹಾಯೋಗಿನಿಯಾದ ಆಕೆ, ಭೀಕರ ಕ್ಷಾಮ ಉಂಟಾದಾಗ ಜನತೆಯನ್ನು ಹಸಿವು ನೀರಡಿಕೆಗಳಿಂದ ರಕ್ಷಿಸಿ, ಕ್ಷಾಮ ಡಾಮರಗಳನ್ನು ಇಲ್ಲವಾಗಿಸಿದ್ದಾಳೆ. ಊರಿನ ದೇವರಾದ ರಂಗನಾಥನ ಕೈಯಲ್ಲಿದ್ದ ಉಂಗುರ ಮಾಯವಾದಾಗ, 'ಹೊನ್ನು ತಾ ಗುಬ್ಬಿ ಹೊನ್ನು ತಾ। ನಮ್ಮ ಚಿನ್ಮಯ

ಮೂರುತಿ ರಂಗನ ಕೈಗೆ' ಎಂದು ಹಾಡಿ ಮರಳಿ ಉಂಗುರವನ್ನು ರಂಗನ ಕೈಯಲ್ಲಿ ಇಟ್ಟಿದ್ದಾಳೆ. 'ಕಲಾ ಸಂಕೀರ್ತನ ಪ್ರಾಯೈಃ' ಎಂಬ ಭಾಗವತದ ಮಾತಿನಂತೆ, ಕಲಿಯುಗದಲ್ಲಿ ನಾಮಸಂಕೀರ್ತನೆಯ ಮಹತ್ವವನ್ನು ನೂರ್ಮಡಿ ಮಾಡಿದ್ದಾಳೆ. ಕವಿಯತ್ರಿಯಾಗಿ 'ಚಂದ್ರಹಾಸ ಚರಿತ್ರೆ', 'ಸೀತಾಕಲ್ಯಾಣ'ಗಳೆಂಬ ನೀಳ್ಗವಿತೆಗಳನ್ನು ಬರೆದಿದ್ದಾಳೆ. ಹರಿಹರ ಭೇದವನ್ನು ತೊಡೆದು ಹಾಕಿ ಹರಿಹರಸಮನ್ವಯವನ್ನು ಮಾಡಿದ ಕೀರ್ತಿ ಆಕೆಗೆ ಸಲ್ಲುತ್ತದೆ. 'ಈಗ ಲಿಂಗದೇವ ಶಿವನು, ಆತ ರಂಗಧಾಮ ವಿಷ್ಣು.... ಲಿಂಗ ಅಂತರಂಗ ರಂಗನಾಥ' ಎಂದು ಆತ್ಮೋದ್ಧಾರಕ್ಕೆ ಸಮಾಜದ ಉದ್ಧಾರಕ್ಕೆ ದಾರಿ ತೋರಿಸಿದ್ದಾಳೆ; ಹೆಳವನ ಕಟ್ಟೆ ಗಿರಿಯಮ್ಮ.

❐

೯. ಗೋಪಿಕಾ ವಸ್ತ್ರಾಪಹರಣದ – ವಿಮರ್ಶೆ

– ಗೋಪಾಲಕೃಷ್ಣ ಭಟ್ಟ

ಗೋಪಿಕೆಯರ ಸಾಧನೆಯ ಉದ್ದೇಶ ಸ್ಪಷ್ಟವೇ ಇದೆ. ಶ್ರೀಕೃಷ್ಣನಿಗೆ ತಮ್ಮ ಸಂಪೂರ್ಣ ಆತ್ಮಸಮರ್ಪಣೆ. ತಮ್ಮ ಶರೀರದ ಕಣ ಕಣಗಳೂ ಮನಃ ಪ್ರಾಣಗಳೂ ಆತ್ಮಗಳೂ ಕೃಷ್ಣಮಯವಾಗಿದ್ದವು. ಅವರಲ್ಲಿ ಈರ್ಷ್ಯಾದ್ವೇಷಗಳಿರಲಿಲ್ಲ. ಗಟ್ಟಿಯಾಗಿ ಭಗವನ್ನಾಮಗಳನ್ನು ಹಾಡುತ್ತಾ ಹೋಗುತ್ತಿದ್ದರು. ಯಾವುದೇ ಭಯ ಸಂಕೋಚಗಳಿರಲಿಲ್ಲ. ತಾವು ಆಚರಿಸುತ್ತಿದ್ದ ವ್ರತ ಮತ್ತು ತಮ್ಮ ರೀತಿ ನೀತಿಗಳ ಮೇಲೆ ಅವರಿಗೆ ಅಮಿತ ವಿಶ್ವಾಸವಿತ್ತು. ಅವರು ತಮ್ಮ ಕುಲ–ಪರಿವಾರ–ಧರ್ಮ ಇವುಗಳ ಅಭಿಮಾನ ಸಂಕೋಚ ಇತ್ಯಾದಿಗಳನ್ನೂ ತಮ್ಮ ವ್ಯಕ್ತಿತ್ವವನ್ನೂ ಭಗವಂತನ ಚರಣಕಮಲಗಳಲ್ಲಿ ಸರ್ವಥಾ ಸಮರ್ಪಿಸಿಕೊಂಡು ಬಿಟ್ಟಿದ್ದರು. ಅವರ ಸಾಧನೆಯ ಸಿದ್ಧಿಗೆ ಅಡ್ಡಿಯಾಗಿ ಲಜ್ಜೆಯೆಂಬ ಆವರಣವೊಂದು ಉಳಿದುಕೊಂಡಿತ್ತು. ಉಳಿದೆಡೆಗಳಲ್ಲಿ ಲಜ್ಜೆಯು ಭೂಷಣವೇ ಆದರೆ ಭಗವದಭಿಮುಖವಾದ ಪಥದಲ್ಲಿ ಸಾಗುತ್ತಿರುವವರಿಗೆ ಲಜ್ಜೆಯೇ ಅಡ್ಡಿಯಾಗುತ್ತದೆ. ಅಷ್ಟಪಾಶಗಳಲ್ಲಿ ಇದೂ ಒಂದು. ನಿರ್ದಯತೆ, ಭಯ, ಲಜ್ಜೆ, ಜಿಗುಪ್ಸೆ, ಕುಲ, ಶೀಲ ಮತ್ತು ಜಾತಿ, ದುರಭಿಮಾನ ಇವು ಅಷ್ಟ ಪಾಶಗಳು.

ಸಾಧಕನು ಕೇವಲ ತನ್ನ ಶಕ್ತಿ ಸಾಮರ್ಥ್ಯಗಳಿಂದಲೇ ಗುರಿಮುಟ್ಟಲಾರ. ಸಮರ್ಪಣವೂ ಒಂದು ಮುಖ್ಯ ಸಾಧನ. ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಳ್ಳಲು ಭಕ್ತನು ಪ್ರಯತ್ನಿಸುತ್ತಿರಬೇಕು. ಇಂತಹ ಸಮಯದಲ್ಲಿ ಸ್ವಯಂ ಭಗವಂತನೇ ಬಂದು ಸಮರ್ಪಣದ ಸ್ಂಕಲ್ಪವನ್ನೂ, ಸಾಧಕನನ್ನೂ ಸ್ವೀಕರಿಸಿದಾಗಲೇ ಆ ಸಾಧಕನ ಅಂತರಾತ್ಮದ ಸಮರ್ಪಣವು ಪೂರ್ಣವಾಗಿ ಪ್ರಪತ್ತಿಯು ಸಿದ್ಧಿಸುತ್ತದೆ. ಪೂರ್ಣ ಸಮರ್ಪಣೆಗೆ ಸರ್ವಾತ್ಮನಾ ಪ್ರಯತ್ನಿಸುವುದು ಸಾಧಕನ ಕರ್ತವ್ಯ. ಭಗವಂತನು ಅದನ್ನು ಪೂರ್ಣಗೊಳಿಸುತ್ತಾನೆ. ಅದು ಅವನ ಕರ್ತವ್ಯ. ಸ್ತ್ರೀಯರು ಏನೆಲ್ಲ ಪರಿತ್ಯಾಗ ಮಾಡಿದರೂ ತಮ್ಮ ಮಾನವನ್ನು ತ್ಯಾಗ ಮಾಡಲು ಸಿದ್ಧರಿರುವುದಿಲ್ಲ.

ಧನ, ಧರ್ಮ, ಕರ್ಮ ಮುಂತಾದುದೆಲ್ಲವನ್ನೂ ಅವರು ತ್ಯಾಗ ಮಾಡಬಹುದು. ಆದರೂ ಲಜ್ಜೆಯನ್ನು ಬಿಡಲಾರರು. ಯಾವ ಸ್ತ್ರೀಯೂ ಇನ್ನೊಬ್ಬರಿಗಾಗಿ ತನ್ನ ಲಜ್ಜೆಯನ್ನು ಬಿಟ್ಟುಬಿಡುವಳೋ ಅವಳು ನಿಜವಾಗಿಯೂ ಅವನಿಗೆ ಸರ್ವಸಮರ್ಪಣೆ ಮಾಡಿದ್ದಾಳೆ ಎನ್ನಬಹುದು. ಈ ಗೋಪಿಯರು ಶ್ರೀಕೃಷ್ಣನಿಗಾಗಿ ತಮ್ಮ ಲಜ್ಜೆಯನ್ನು ಕೂಡ ತೊರೆದರು. ಇದು ಕಾಮಾತುರರು ಮಾಡಿದ ಲಜ್ಜಾರ್ಪಣೆಯಲ್ಲ. ಭಕ್ತಿಪರವಶರಾದವರ ಲಜ್ಜಾರ್ಪಣೆ. ಕೃಷ್ಣನು ಕೂಡ ಅದನ್ನು ಭಕ್ತರ ಸಮರ್ಪಣೆ ಎಂದೇ ಸ್ವೀಕರಿಸುವನು. ಅವನ ಮಾತಿನಲ್ಲಿ ಹೇಳುವುದಾದರೆ – ಯಾರು ತಮ್ಮ ಬುದ್ಧಿಯನ್ನೂ, ಕಾಮನೆಯನ್ನೂ ನನಗೆ ಸಮರ್ಪಿಸುವರೋ ಅವರ ಕಾಮನೆಗಳು ಕಾಮಕಲಂಕಿತವಿರುವುದಿಲ್ಲ. ಕಾಳನ್ನು ಹುರಿದು ಪುಡಿಮಾಡಿದ ಮೇಲೆ ಅದು ಬೀಜವಾಗಿ ಮೊಳೆಯಲಾರದು. ಅರ್ಥಾತ್ ಯಾರು ಕೃಷ್ಣಕಾಮಿಗಳೋ ಅವರು ಕಾಮಶತ್ರುಗಳು. ಭಕ್ತಿಯೋಗಪರವಾಗಿದ್ದು ಭಗವಂತನಲ್ಲಿ ಸರ್ವ ಸಮರ್ಪಣ ಭಾವವೇ ಭಕ್ತಿಯೋಗದ ಪ್ರಧಾನ ಸಾಧನೆ ಎನ್ನಬಹುದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದಂತೆ.

> **ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿಯತ್**
> **ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್॥**[೧]

ಯಾವ ತಪಸ್ಸನ್ನು ಮಾಡಿದರೂ ಅದರ ಫಲವನ್ನೆಲ್ಲಾ ಭಗವಂತನಿಗೆ ಅರ್ಪಣೆ ಮಾಡುವುದನ್ನು ಕಲಿಯಬೇಕು. ನಾವು ಅವನಿಗೇ ಸಮರ್ಪಿಸಿದರೆ ನಮಗೆ ಏನೇನು ಅವಶ್ಯವಾಗಿರುವುದೋ ಅದನ್ನೆಲ್ಲಾ ಕೊಡುತ್ತಾನೆ. ನಮ್ಮಿಂದ ಭಗವಂತ ಕೇಳಿಸಿಕೊಂಡು ಕೊಡುವುದಿಲ್ಲ. ಕೇಳಿಸಿಕೊಳ್ಳದೆಯೇ ಕೊಡುತ್ತಾನೆ.

ಗೋಪಿಕೆಯರು ಅತ್ಯಂತ ಶ್ರದ್ಧೆಯಿಂದ ಪ್ರಾಮಾಣಿಕತೆಯಿಂದ ತೀವ್ರವಾದ ಸಾಧನೆಯಲ್ಲಿ ತೊಡಗಿದ್ದರು. ಆದರೆ ಅದರಲ್ಲಿ ಒಂದು ಕೊರತೆಯುಂಟಾಗಿತ್ತು. ಪರಂಪರಾಗತವಾದ ಸನಾತನ ಶಾಸ್ತ್ರಮರ್ಯಾದೆಯನ್ನು ಮೀರಿ ಬೆತ್ತಲೆಯಾಗಿ ಯಮುನಾ ನದಿಯಲ್ಲಿ ಸ್ನಾನಕ್ಕಿಳಿದಿದ್ದರು. ಇದು ದೇವಿಯಾದ ಯಮುನೆಗೂ ಜಲಾಭಿಮಾನಿ ದೇವತೆಯಾದ ವರುಣದೇವನಿಗೂ ಅಪರಾಧ ಮಾಡಿದಂತಾಯಿತು. ದೇವಯೋನಿಯು ಮನುಷ್ಯಯೋನಿಗಿಂತ ಶ್ರೇಷ್ಠವು. ದೇವತೆಗಳಿಗೆ ಅನುಕೂಲವಾಗಿ ವರ್ತಿಸುವುದೇ ಮಾನವರಿಗೆ ಶ್ರೇಯಸ್ಸಾಧಕವಾದುದು. ಗೋಪಿಕೆಯರು ಶ್ರೀಕೃಷ್ಣನ ಆಜ್ಞೆಯಂತೆ ಮಾಡಿದ ಪಾಪಕ್ಕೆ ಪ್ರಾಯಶ್ಚಿತ್ತರೂಪವಾಗಿ ಆತನ ಮುಂದೆ

---

೧. ಭಗವದ್ಗೀತೆ ಮೂಲ – ೯. ೨೭

ನಿರಾವರಣವಾಗಿ ನಿಂತು ಅಂಜಲಿಬದ್ಧರಾಗಿ ನಮಸ್ಕರಿಸಿ ತಮ್ಮ ಸಾಧನೆಯಲ್ಲಿ ಒದಗಿದ್ದ ಅಡ್ಡಿಯನ್ನು ನಿವಾರಿಸಿಕೊಂಡು ಸಿದ್ಧ ಸಂಕಲ್ಪರಾದರು.

ಶ್ರೀಕೃಷ್ಣನ ಜೀವನದ ಪ್ರತಿಯೊಂದು ಕ್ಷಣಗಳೂ ತತ್ವವನ್ನು ತಿಳಿಸುವಂಥದ್ದಾಗಿದೆ. ಗೋಪಿಕೆಯರು ಬೆತ್ತಲಾದುದರ ಮೂಲ ತತ್ವ–

೧) ಮನುಷ್ಯ ಆಂತರಂಗಿಕವಾಗಿ, ಬಾಹ್ಯವಾಗಿ ಭಗವಂತನ ಕುರಿತಾಗಿ ಎಲ್ಲವನ್ನೂ ತೆರೆದಾಗ ಯಾವುದೇ ಸಂಶಯವಿಲ್ಲದಿರುವಾಗ ಭಗವಂತನ ಸಾಕ್ಷಾತ್ಕಾರ ಸಾಧ್ಯ.

೨) ಇನ್ನೊಂದು [೧]"ನ ವಿವಸನಸ್ನಾಯಾತ್" (ವಿವಸ್ತ್ರವಾಗಿ ಸ್ನಾನ ಮಾಡಬಾರದು) ಎನ್ನುವ ವೇದಾರ್ಥವನ್ನು ತಿಳಿಸಿದ, ಉಪದೇಶಿಸಿದ. ಇನ್ನು ಯಮುನಾ ನದಿಯ ಕುರಿತಾದ ಗೌರವ ಭಾವನೆಯನ್ನೂ ಹೆಚ್ಚಿಸಿದ.

ಇಲ್ಲಿ ಬಾಹ್ಯ ಶುದ್ಧಿ ಎನ್ನುವುದರ ಅರ್ಥ ಕೇವಲ ಬಟ್ಟೆ ಎನ್ನುವುದರ ಅರ್ಥವಲ್ಲ. ಬಾಹ್ಯರೂಪವಾದ ದೇಹಭಾವ ತೊಲಗಬೇಕು. ಅದರರ್ಥ ಹೆಸರು, ಕೀರ್ತಿ, ಕಾಮ, ದುರಾಸೆ ವೈರ ಇವೆಲ್ಲ ತೊಲಗುವ ಮೂಲಕ ಮುಕ್ತ ಸ್ಥಿತಿ ಇರಬೇಕು ಎಂದರ್ಥ. ಆ ಸ್ಥಿತಿಯನ್ನು ಹುಟ್ಟಿದ ಮಗುವಿನಲ್ಲಿ ಸಾಮಾನ್ಯವಾಗಿ ಕಾಣಬಹುದು ಮತ್ತು ವೃದ್ಧಾಪ್ಯದ ತುರೀಯಾವಸ್ಥೆಯಲ್ಲಿಯೂ ಕಾಣಬಹುದು. ಹೇಗೆಂದರೆ ಹುಟ್ಟಿದಾಕ್ಷಣ ಮಗುವಿಗೆ ಯಾವ ದೇಹಾಭಿಮಾನವೂ ಇರುವುದಿಲ್ಲ. ನಿರ್ಮಲ ಮನಸ್ಸು ಇರುತ್ತದೆ. ಅದಕ್ಕಾಗಿಯೇ ಇರಬಹುದು "ಮಕ್ಕಳು ದೇವರ ಸಮಾನ" ಎನ್ನುವ ಸಾಮಾನ್ಯೋಕ್ತಿಗಳು. ಇದೇ ಅವಸ್ಥೆ ವೃದ್ಧಾಪ್ಯದ ತುರೀಯಾವಸ್ಥೆಯಲ್ಲಿಯೂ ಕೆಲವರಲ್ಲಿ ಕಾಣಬಹುದು. ಆ ಸ್ಥಿತಿಯಲ್ಲಿ ಎಲ್ಲವನ್ನೂ ಕಳೆದುಕೊಂಡು ಭಗವಂತನೊಬ್ಬನೇ ಆಧಾರವಾಗಿರುತ್ತಾನೆ. ಈ ಎರಡೂ ಅವಸ್ಥೆಯಲ್ಲಿ ನಾವೇ ಬಟ್ಟೆ ತೊಡಿಸಬೇಕಾಗುತ್ತದೆ. ದೇಹಾಭಿಮಾನವನ್ನು ಮೂಡಿಸಬೇಕಾಗುತ್ತದೆ. ಇದೇ ಅವಸ್ಥೆಗೆ ನಿರ್ವಾಣ ಸ್ಥಿತಿ ಎಂದು ಕರೆಯುತ್ತಾರೆ. ಗೋಪಿಕೆಯರು ಆಂತರಂಗಿಕವಾಗಿ ಎಲ್ಲವನ್ನೂ ಸಮರ್ಪಿಸಿ ಬಿಟ್ಟಿದ್ದರು. ಎಂದೋ ಭಗವಂತನಲ್ಲಿ ಎಲ್ಲವನ್ನೂ ಬಿಚ್ಚಿದ ಅವರಿಗೆ ದೇಹಾಭಿಮಾನವನ್ನೂ ಕಳಚುವುದು ಕಷ್ಟಕರವಾಗುವುದಿಲ್ಲ.

ಇದೇ ತತ್ವಗಳನ್ನು ಸ್ಮೃತಿಗಳಲ್ಲಿ ಭಕ್ತಿಸೂತ್ರಗಳಲ್ಲಿಯೂ ಕಾಣಬಹುದಾಗಿದೆ.

[೨]ಸಮ್ಮಾನ ಬಹುಮಾನ – ಪ್ರೀತಿ ವಿರಹ ಇತರ
ವಿಚಿಕಿತ್ಸಾ ಮಹಿಮ – ಖ್ಯಾತಿ ತದರ್ಥ ಪ್ರಾಣ ಸ್ಥಾನ–
ತದೀಯತಾ – ಸರ್ವತದ್ಭಾವ॥

---

೧. ತೈತ್ತಿರೀಯ ಬ್ರಾಹ್ಮಣಂ (ಯಜುರ್ವೇದ)
೨. ಶಾಂಡಿಲ್ಯ ಭಕ್ತಿಸೂತ್ರಗಳು ೪೪, ಸ್ವಾಮಿ ಹರ್ಷಾನಂದ ಶ್ರೀರಾಮಕೃಷ್ಣ ಆಶ್ರಮ, ಮೈಸೂರು

4

ಸಮ್ಮಾನ – ವೆಂದರೆ ಗೌರವ ತೋರುವುದು. ಅರ್ಜುನನು ಎದ್ದುನಿಂತು ಶ್ರೀಕೃಷ್ಣನಿಗೆ ಗೌರವ ತೋರುತ್ತಿದ್ದಂತೆ.

ಬಹುಮಾನ – ವೆಂದರೆ ಅತ್ಯಂತ ಗೌರವವನ್ನು ತೋರುವುದು.

ಇಕ್ಷ್ವಾಕುವು ಜಿಂಕೆಗೂ ಪದ್ಮಕ್ಕೂ ಮೋಡಕ್ಕೂ ಗೌರವವನ್ನು ಕೊಡುತ್ತಿದ್ದಂತೆ; ಏಕೆಂದರೆ ಕೃಷ್ಣನ ಕಣ್ಣುಗಳು ಜಿಂಕೆಯ ಕಣ್ಣುಗಳಂತೆ ಕಮಲದಂತೆ ಇದ್ದವು. ಮೋಡವು ಕಪ್ಪಾಗಿದ್ದು ಕೃಷ್ಣನನ್ನೇ ನೆನಪಿಗೆ ತರುತ್ತಿತ್ತು.

ಪ್ರೀತಿಗೆ ಉದಾಹರಣೆ ವಿದುರ. ತನ್ನ ಮನೆಗೆ ಕೃಷ್ಣನ ಆಗಮನದಿಂದ ಉಂಟಾದ ಪ್ರೀತಿಯನ್ನು ಆತನಿಗೆ ತಡೆದುಕೊಳ್ಳಲಾಗಲಿಲ್ಲ.

ವಿರಹಕ್ಕೆ ಗೋಪಿಗಳೇ ಅತ್ಯುತ್ತಮ ಉದಾಹರಣೆ. ಇತರ ವಿಚಿಕಿತ್ಸೆಯೆಂದರೆ ಪರಮಾತ್ಮನ ಹೊರತು ಉಳಿದುವನ್ನೆಲ್ಲ ಸಂ ಶಯದಿಂದ ನೋಡುವುದು. ಉಪಮನ್ಯುವು ಇಂದ್ರನು ಕೊಟ್ಟ ತ್ರೈಲೋಕ್ಯಾಧಿಪತ್ಯವೆಂಬ ವರವನ್ನು ನಿರಾಕರಿಸಿ ಈಶ್ವರನ ಆಜ್ಞೆಯಂತೆ ಕೀಟಜನ್ಮವನ್ನು ಪಡೆಯಲು ಸಿದ್ಧನಾಗಿದ್ದದ್ದು ಇದಕ್ಕೆ ದೃಷ್ಟಾಂತ.

[1]ಮಹಿಮಖ್ಯಾತಿಯೆಂದರೆ ಪರಮಾತ್ಮನ ಮಹಿಮೆಯನ್ನು ಬಣ್ಣಿಸುವುದು. ಜೀವರನ್ನು ಹಿಡಿದು ತರಲು ಪಾಶಸಹಿತವಾಗಿ ಹೊರಟ ತನ್ನ ಕಿಂಕರರನ್ನು ಕುರಿತು ಯಮನು ಹೀಗೆ ಹೇಳುತ್ತಿದ್ದನಂತೆ; 'ಮಧುಸೂದನನಲ್ಲಿ ಶರಣಾದವರನ್ನು ಬಿಟ್ಟುಬಿಡು. ನಾನು ಇತರ ಜೀವಿಗಳಿಗೆ ಒಡೆಯನೇ ಹೊರತು ವಿಷ್ಣುಭಕ್ತರಿಗಲ್ಲ!'

[2]"ತದರ್ಥಪ್ರಾಣಸ್ಥಾನ"ವೆಂದರೆ 'ಅವನಿಗಾಗಿ ಜೀವಿಸುವುದು. ಹನುಮಂತನು ರಾಮಾಯಣದಲ್ಲಿ 'ಪಾವನವಾದ ನಿನ್ನ ಕಥೆಯು ಎಲ್ಲಿಯವರೆಗೆ ಈ ಲೋಕದಲ್ಲಿ ಹರಡಿರುತ್ತದೆಯೋ ಅಲ್ಲಿಯವರೆಗೂ ನಿನ್ನ ಆಜ್ಞೆಯನ್ನು ಪರಿಪಾಲಿಸುತ್ತ ಈ ಲೋಕದಲ್ಲಿ ವಾಸಿಸುತ್ತೇನೆ' ಎಂದು ನುಡಿದಿರುವುದನ್ನು ಇಲ್ಲಿ ಸ್ಮರಿಸಬಹುದು. ಹಾಗೆಯೇ ತಾವು ಕೃತಕೃತ್ಯರಾಗಿದ್ದರೂ ಪರಮಾತ್ಮನ ಆರಾಧನೆಗಾಗಿಯೇ ಪ್ರಾಣಧಾರಣೆ ಮಾಡಿಕೊಂಡಿದ್ದ ನಾರದಾದಿ ಮಹರ್ಷಿಗಳೂ ಇದಕ್ಕೆ ದೃಷ್ಟಾಂತ.

ವಸು – ಉಪರಿಚರನು ತನ್ನ ರಾಜ್ಯ ಧನ ಹೆಂಡತಿವಾಹನ ಮುಂತಾದುವೆಲ್ಲವನ್ನೂ ಭಗವಂತನಿಗೆ ಸೇರಿದವುಗಳೆಂದು ಭಾವಿಸುತ್ತಿದ್ದನು. ಇದು ತದೀಯತಾಭಾವಕ್ಕೆ ದೃಷ್ಟಾಂತ. [3]ಎಲ್ಲ ಜೀವಿಗಳಲ್ಲಿಯೂ ಶ್ರೀಹರಿಯೇ ಇರುವನೆಂಬುದನ್ನು ಅರಿತು ಎಲ್ಲರನ್ನೂ ಪ್ರೀತಿಸಬೇಕೆಂದು ಪ್ರಹ್ಲಾದನೆಂದಿರುತ್ತಾನೆ. ಇದು ಸರ್ವತದ್ಭಾವಕ್ಕೆ ಉದಾಹರಣೆ.

---

೧. ವಿಷ್ಣು ಪುರಾಣ ೩.೭.೧೪
೨. ಮೂಲ ರಾಮಾಯಣ ಉತ್ತರಕಾಂಡ ೧೦೭.೩೧
೩. ವಿಷ್ಣು ಪುರಾಣ ೧.೧೯.೯ ಅದೇ

[೧]ಅಪ್ರಾತಿಕೂಲ್ಯವೆಂದರೆ ಪರಮಾತ್ಮನ ಸಂಕಲ್ಪಕ್ಕೆ ವಿರುದ್ಧವಾಗಿ ಹೋಗದಿರುವುದು. ತನ್ನನ್ನು ಕೊಲ್ಲಬೇಕೆಂದು ಬಂದ ಶ್ರೀಕೃಷ್ಣನನ್ನು ಭೀಷ್ಮನು ಹೀಗೆ ಪ್ರಾರ್ಥಿಸಿಕೊಳ್ಳುತ್ತಾನೆ; 'ದೇವೇಶ, ಜಗನ್ನಿವಾಸ, ಶಾರ್ಙ್ಗಗದಾನಿಪಾಣಿ, ನಿನಗೆ ನಮಸ್ಕಾರ! ಬಾ! ಲೋಕನಾಥ! ನನ್ನನ್ನು ಈ ಅದ್ಭುತ ಯುದ್ಧದಲ್ಲಿ, ರಥದಿಂದ ಬೀಳಿಸಿ ಕೊಂದು ಬಿಡು!'

ಇವುಗಳಲ್ಲೆಲ್ಲ ನಾವು ಕಾಣುವಂಥದ್ದು ಸರ್ವ ಸಮರ್ಪಣೆ. ಪ್ರಸ್ತುತ ದೇಹಾಭಿಮಾನ ಬಿಡಬೇಕೆಂದು ಬರೆ ಬಟ್ಟೆ ಬಿಚ್ಚಿಟ್ಟ ಮಾತ್ರಕ್ಕೆ ದೇಹಾಭಿಮಾನ ಬಿಟ್ಟಂತಲ್ಲ. ಮೊದಲು ಆಂತರಂಗಿಕವಾಗಿ ಶುದ್ಧನಾಗಿ ಅರಿಷಡ್ವೈರಿಗಳೆಂಬ ಬಟ್ಟೆ ಬಿಚ್ಚಬೇಕೆಂಬುದೇ ತತ್ವಾರ್ಥ. ಇನ್ನು ಸಾರ್ವಜನಿಕ ಸ್ಥಳಗಳಲ್ಲಿ ಸ್ತ್ರೀಯರು ಬೆತ್ತಲೆಯಾಗಿ ಸ್ನಾನ ಮಾಡಬಾರದೆಂಬ ಕಟ್ಟುಪಾಡನ್ನು ಗೋಕುಲವಾಸಿಗಳಿಗೆ ಮನಗಾಣಿಸುವುದಕ್ಕಾಗಿ ಕೃಷ್ಣ ಹೀಗೆ ಮಾಡಿರಬೇಕು ಎಂದು ಇದನ್ನು ಸಾಮಾಜಿಕ ದೃಷ್ಟಿಯಿಂದ ಹೇಳಬಹುದಾಗಿದೆ.

ಸಾಮಾಜಿಕ ದೃಷ್ಟಿಯಿಂದ ನೋಡಿದಾಗ ಶ್ರೀಕೃಷ್ಣನ ಈ ವಸ್ತ್ರಾಪಹರಣವು ದೊಡ್ಡ ಅನೀತಿಯೆಂದೇ ಅನ್ನಿಸುತ್ತದೆಯಾದರೂ, ದುಶ್ಯಾಸನನ ದುರುಳತನದಿಂದ ದ್ರೌಪದೀ ದೇವಿಯ ವಸ್ತ್ರಾಪಹರಣದ ಪ್ರಸಂಗ ಬಂದಾಗ ಆಕೆಗೆ ಅಕ್ಷಯ ವಸ್ತುಗಳನ್ನು ಅನುಗ್ರಹಿಸಿ ಆಕೆಯ ಮಾನವನ್ನು ಕಾಪಾಡಿದ ಶ್ರೀಕೃಷ್ಣನು ಹೇಗೆ ಗೋಪಬಾಲಿಕೆಯರ ವಸ್ತ್ರಾಪಹರಣವನ್ನು ತಾನೇ ಮಾಡಬಹುದೇ? ಅಲ್ಲದೇ ಶ್ರೀಕೃಷ್ಣನು ಈ ಲೀಲೆಯನ್ನು ಎಸಗಿದಾಗ ಆತನ ವಯಸ್ಸು ಎಂಟು, ಒಂಬತ್ತು ವರ್ಷಗಳಿಗಿಂತ ಹೆಚ್ಚಿಲ್ಲ. ಆತನು ಗೋಕುಲದಲ್ಲಿ ಇದ್ದುದು ತನ್ನ ಹನ್ನೊಂದನೇ ವಯಸ್ಸಿನವರೆಗೆ ಮಾತ್ರ. ಈ ಸಣ್ಣ ವಯಸ್ಸಿನ ಬಾಲಕನಲ್ಲಿ ದುಷ್ಟವಾದ ಇಂದ್ರಿಯಕಾಮವನ್ನು ಕೆರಳಿಸುವ ಮನಸ್ಸು ಇರಲು ಸಾಧ್ಯವೇ? ಅದರಲ್ಲೂ ಪ್ರಸ್ತುತ ಲೋಕ ಪರಿಸ್ಥಿತಿಯನ್ನು ಆ ಕಾಲಕ್ಕೆ ಹೋಲಿಸಿ ವಿಚಾರಿಸುವುದು ಸಮಂಜಸವೂ ಅಲ್ಲ. ನಮ್ಮ ಸಾಮಾಜಿಕ ಕಾಲುಷ್ಯವನ್ನು ಒಳ್ಳೆಯ ಕಾಲದಲ್ಲಿದ್ದ ಮುಗ್ಧರಾದ ಆ ಗೋಪಬಾಲಿಕೆಯರಲ್ಲಿ ಏಕೆ ಆರೋಪಿಸಬೇಕು? ಇನ್ನು ಶ್ರೀಕೃಷ್ಣನೊಬ್ಬ ಪ್ರಜ್ಞಾವಂತ, ದೇವರು ಎಂದು ಭಾವಿಸಿದಾಗಲೂ ತೊಂದರೆಯಿಲ್ಲ. ಏಕೆಂದರೆ "ಶುದ್ಧ ಭಾವ ಪ್ರಸಾದಿತಃ" "ನಿಷ್ಕಲಃ, ನಿರಂಜನಃ, ನಿರ್ವಿಕಲ್ಪ" ಎಂಬುದಾಗಿ ಶ್ರುತಿ-ಸ್ಮೃತಿಗಳು ಭಾಗವತವು ಕೊಂಡಾಡುತ್ತದೆ. ಆತನು ಭಗವಂತ ಎನ್ನುವ ವಿಷಯ ಗೋಪಬಾಲಿಕೆಯರಿಗೂ ತಿಳಿದಿತ್ತು. ಅವರು ಹಾಡುವ "ಗೋಪಿಕಾ ಗೀತೆ"ಯಲ್ಲಿ ಇದು ಅತ್ಯಂತ ಸ್ಪಷ್ಟವಾಗಿದೆ. ನೀನು ಯಶೋದೆಯ ಪುತ್ರನಾದ ಗೋಪಬಾಲಕನಲ್ಲ.

---

೧. ಮಹಾಭಾರತ ಭೀಷ್ಮಪರ್ವ ೫೯, ೯೬, ೯೭

ಮತ್ತೆ ಯಾರು? ಎಂದರೆ, ಎಲ್ಲ ಜೀವಿಗಳ ಹೃದಯದಲ್ಲಿ ಸಾಕ್ಷಿಯಾಗಿರುವ ಪರಮಾತ್ಮ.

ನ ಖಲು ಗೋಪಿಕಾ ನಂದನೋ ಭವಾನ್
ಅಖಿಲ ದೇಹಿನಾ ಮಂತರಾತ್ಮದೃಕ್
ಸಖ ಉದೇಯಿವಾನ್ ಸಾತ್ವತಾಂ ಕುಲೇ॥

ಎಂದು ಅವರು ಶ್ರೀಕೃಷ್ಣನ ವಿಷಯದಲ್ಲಿ ಉದ್ಘೋಷಿಸುತ್ತಾರೆ.

ಶ್ರೀಕೃಷ್ಣನು ಗೋಪಬಾಲೆಯರ ವಸ್ತ್ರಗಳನ್ನು ತಾನು ಮುಟ್ಟಿ ಆನಂತರ ಅವರಿಗೆ ಹಿಂದಿರುಗಿಸಿದ್ದರಲ್ಲಿ ಭಕ್ತರಿಗೆ ಆಪ್ಯಾಯಮಾನವಾಗಿರುವ ಮತ್ತೊಂದು ಆಶಯವಿದೆ. ಈ ರೀತಿಯಲ್ಲಿ ಶ್ರೀಕೃಷ್ಣನ ಪ್ರತಿಯೊಂದು ಪ್ರಸಂಗವೂ ಆಧಾರ ಮತ್ತು ಆದರ್ಶಭೂತವಾದುದಾಗಿದೆ.

❐

೧೦. ಪತ್ರಿಕಾ ಸ್ವಾತಂತ್ರ್ಯ

– ಆರ್.ಎಸ್. ಪದ್ಮನಾಭ

'ಸ್ವಾತಂತ್ರ್ಯದ ಎಲ್ಲ ದುರುಪಯೋಗಗಳಿದ್ದಾಗ್ಯೂ, ನಿರ್ದೇಶಿತ ಮತ್ತು ಹತ್ತಿಕ್ಕಲ್ಪಟ್ಟ ಪತ್ರಿಕೆಗಳಿಗಿಂತ ಸ್ವತಂತ್ರ ಪತ್ರಿಕೆಗಳ ಅಸ್ತಿತ್ವವೇ ನನಗೆ ಮಾನ್ಯ' ಭಾರತದ ಪ್ರಧಾನಿಯಾಗಿದ್ದ ಪ್ರಜಾತಂತ್ರವಾದಿ ಜವಾಹರಲಾಲ್ ಅವರ ಮಾತಿದು.

'ಜನತೆಯ ನಿಜವಾದ ಆಶೋತ್ತರಗಳನ್ನು ಅರ್ಥ ಮಾಡಿಕೊಂಡು ಅವುಗಳನ್ನು ಪ್ರತಿನಿಧಿಸುವುದು ಹಾಗೂ ಜನರಲ್ಲಿ ರಾಷ್ಟ್ರೀಯ ಹಿತಾಸಕ್ತಿಗಳನ್ನು ಹುಟ್ಟು ಹಾಕುವುದು, ನಿರ್ಭೀತಿಯಿಂದ ಸಾಮಾಜಿಕ ನ್ಯೂನತೆಗಳನ್ನು, ಭ್ರಷ್ಟಾಚಾರಗಳನ್ನು ಬೆಳಕಿಗೆ ತರುವುದು, ಪತ್ರಿಕೆಗಳ ಮುಖ್ಯ ಉದ್ದೇಶವಾಗಿರಬೇಕು' ಎಂದು ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿ ಬರೆದರು.

'ಸಾಮಾಜಿಕ ವ್ಯವಸ್ಥೆ ಮತ್ತು ಶಾಂತಿಯ ದೃಷ್ಟಿಯಿಂದ, ಕಾನೂನು ನಿರ್ಬಂಧ ಹೇರಿರದ ಯಾವುದೇ ವಿಷಯವನ್ನಾದರೂ ಪತ್ರಿಕೆಗಳ ಅಂಕಣಗಳಲ್ಲಿ ಚರ್ಚಿಸುವುದೇ ಪತ್ರಿಕಾ ಸ್ವಾತಂತ್ರ್ಯ.'

ವಿವಾದಾಸ್ಪದ ವಿಷಯಗಳನ್ನು ಚರ್ಚಿಸುವ ವಿಶಾಲ ವ್ಯಾಪ್ತಿ ಮತ್ತು ಅಂತಹ ವಿಚಾರಗಳ ಮುಕ್ತ ವ್ಯಾಖ್ಯಾನ ಪತ್ರಿಕಾ ಸ್ವಾತಂತ್ರ್ಯದ ಮೂಲಭೂತ ಅಂಶಗಳು.

ಪತ್ರಿಕಾ ಸ್ವಾತಂತ್ರ್ಯ ಮತ್ತು ಭಾರತೀಯ ಸಂವಿಧಾನ

ಭಾರತೀಯ ಸಂವಿಧಾನದಲ್ಲಿ 'ಪತ್ರಿಕಾ ಸ್ವಾತಂತ್ರ್ಯ' ಕುರಿತು ಎಲ್ಲಿಯೂ ನೇರವಾಗಿ ಹೇಳಿಲ್ಲ. ಆದರೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಜೆಗಳ ಮೂಲಭೂತ ಹಕ್ಕು ಎಂದು ನಮ್ಮ ಸಂವಿಧಾನವು ಗಣಿಸುತ್ತದೆ. ಪತ್ರಿಕಾ ಸ್ವಾತಂತ್ರ್ಯವೂ ಈ ಅಭಿವ್ಯಕ್ತಿ ಸ್ವಾತಂತ್ರ್ಯದ ಪ್ರಕಾರಗಳಲ್ಲಿ ಒಂದು ಎಂಬುದು ನಿರ್ವಿವಾದ.

ಶಾಂತ ಮತ್ತು ಸುವ್ಯವಸ್ಥೆಯ ಕಾಲದಲ್ಲಿ ಪತ್ರಿಕೆಗಳು ಕೆಲವು ನಿರ್ಬಂಧಗಳಿಗೆ ಒಳಪಟ್ಟು ಸಂಪೂರ್ಣ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಸಂವಿಧಾನ ಅವಕಾಶ ಕಲ್ಪಿಸಿ ಕೊಟ್ಟಿದೆ.

ನಮ್ಮ ಸಂವಿಧಾನದ ೧೯ (೧) (ಅ) ವಿಧಿಯ ಪ್ರಕಾರ ಎಲ್ಲಾ ಭಾರತೀಯ ಪ್ರಜೆಗಳೂ ಭಾಷಣ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಹೊಂದಿರುತ್ತಾರೆ.

ಆದರೆ ಒಂದು ಮಾತು ನಿಜ. ಪತ್ರಿಕಾ ಸ್ವಾತಂತ್ರ್ಯವು ನಮ್ಮ ಸಂವಿಧಾನದಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿಲ್ಲವಾದ್ದರಿಂದ ಅದರ ಅರ್ಥವು ನ್ಯಾಯಾಲಯದ ವ್ಯಾಖ್ಯಾನದ ಮೇಲೇ ಅವಲಂಬಿತವಾಗಿರುತ್ತದೆ.

ಸಂವಿಧಾನದ ೧೯ (೧) (ಅ) ವಿಧಿಯು ನಿರಂಕುಶ ಸ್ವಾತಂತ್ರ್ಯವನ್ನು ನೀಡುವುದಿಲ್ಲ. ಅಂದರೆ ಸ್ವೇಚ್ಛಾ ಸ್ವಾತಂತ್ರ್ಯವಲ್ಲ. ಸಂವಿಧಾನದಲ್ಲೇ ೧೯ (೧) (ಅ) ವಿಧಿಯನ್ನು ನಿಯಂತ್ರಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡಲಾಗಿದೆ. ಅದು, ೧೯ (೨) ವಿಧಿಯು ಮೂಲಭೂತ ಹಕ್ಕುಗಳ ಮೇಲೆ 'ನ್ಯಾಯಬದ್ಧವಾದ ನಿಬಂಧನೆಗಳನ್ನು' ಹೇರಲು ಅವಕಾಶ ಕಲ್ಪಿಸಿದೆ.

ಸರ್ಕಾರ, ೧೯ (೧) (ಅ) ವಿಧಿಯ ನಿಯಂತ್ರಣಕ್ಕೆ ಮಾಡುವ ಯಾವುದೇ ಕಾಯ್ದೆ ಕಾನೂನು ಸಂವಿಧಾನದ ೧೯(೨) ವಿಧಿಯ ಚೌಕಟ್ಟಿನೊಳಗೆ ಸೀಮಿತವಾಗ ಬೇಕು. ಸರ್ಕಾರದ ಯಾವುದೇ ಕಾಯ್ದೆ ಕಾನೂನು ೧೯ (೨) ವಿಧಿಯ ಚೌಕಟ್ಟಿಗೆ ಒಳಪಡದಿದ್ದರೆ ಅಂತಹ ಕಾಯ್ದೆಗಳನ್ನು ಸಂವಿಧಾನ ಬಾಹಿರ ಎಂದು ಸಾರುವ ಹಕ್ಕು ನ್ಯಾಯಾಲಯಕ್ಕಿದೆ.

ಭಾರತೀಯ ಸಂವಿಧಾನದ ೧೯ (೨) ವಿಧಿಯು ಈ ಅಂಶಗಳನ್ನು ಒಳಗೊಂಡಿದೆ. ಸಕಾರಣಯುತ ನಿಬಂಧನೆಗಳನ್ನು ಹೇರಬಹುದು.

೧. ರಾಷ್ಟ್ರದ ಭದ್ರತೆ ದೃಷ್ಟಿಯಿಂದ
೨. ಆಂತರಿಕ ಶಿಸ್ತು ಹಾಗೂ ಶಾಂತಿಯ ಕಾರಣ
೩. ಅಪರಾಧಕ್ಕೆ ಪ್ರಚೋದನೆ ನೀಡುತ್ತದೆಂಬ ಕಾರಣ
೪. ವಿದೇಶಗಳೊಡನೆ ಹೊಂದಿರುವ ಸ್ನೇಹಯುತ ಸಂಬಂಧಗಳ ಕಾರಣ
೫. ಸಭ್ಯತೆ ಹಾಗೂ ನೀತಿಯ ದೃಷ್ಟಿಯಿಂದ
೬. ನ್ಯಾಯಾಲಯ ನಿಂದನೆ ಕಾರಣ
೭. ಮಾನ ನಷ್ಟದ ಕಾರಣ
೮. ಭಾರತದ ಸಾರ್ವಭೌಮತ್ವ ಹಾಗೂ ಸಮಗ್ರತೆ ದೃಷ್ಟಿಯಿಂದ

ಆಂಗ್ಲರ ಆಳ್ವಿಕೆಯಲ್ಲಿ ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ದುರುದ್ದೇಶದಿಂದ ಕರಾಳ ಶಾಸನಗಳನ್ನು ಜಾರಿಗೆ ತಂದಾಗ ಭಾರತದಾದ್ಯಂತ ಆ ಶಾಸನಗಳ ವಿರುದ್ಧ ಉಗ್ರ ಹೋರಾಟವೇ ನಡೆಯಿತು. ಆ ಶಾಸನಗಳನ್ನೆಲ್ಲಾ ನಿರೂಪಿಸುವುದು ಇಲ್ಲಿ ಅಸಾಧ್ಯ ಹಾಗೂ ಅಸಾಧು.

ಮೇಲೆ ನಮೂದಿಸಿರುವ ನ್ಯಾಯಬದ್ಧ ನಿಬಂಧನೆಗಳ ಪ್ರಕಾರ ೧೯(೧)(ಅ) ವಿಧಿಯ ನಿಯಂತ್ರಣ, ಸಂವಿಧಾನಾತ್ಮಕ ಮಾನ್ಯತೆ ಪಡೆದಿದೆ. ಆದರೆ ಸರ್ಕಾರ ಮಾಡಿದ ಶಾಸನಗಳು ಸಾಧುವೆ, ಅಸಾಧುವೆ, ನ್ಯಾಯಬದ್ಧವೆ ಎಂಬುದನ್ನು ನ್ಯಾಯಾಲಯ ನಿರ್ಧರಿಸಬೇಕು. ಹಾಗಾಗಿ ನ್ಯಾಯಾಲಯ ತೀರ್ಮಾನಗಳ ಅಧ್ಯಯನ ಅತ್ಯಾವಶ್ಯಕ.

ರೊಮೇಶ್ ಥಾಪರ್ ಮತ್ತು ಮದ್ರಾಸು ಸರ್ಕಾರ, ಬ್ರಿಜ್ ಭೂಷಣ್ ಹಾಗೂ ದೆಹಲಿ ಸರ್ಕಾರ, ಸಕಾಳ್ ಪತ್ರಿಕಾ ಮೊಕದ್ದಮೆಗಳು, ಪತ್ರಿಕಾ ಸ್ವಾತಂತ್ರ್ಯವನ್ನು ಎತ್ತಿ ಹಿಡಿದಿವೆ ಎಂಬುದು ನಿರ್ವಿವಾದ.

ಆದರೆ ಭಾರತದ ನಿಜಸ್ಥಿತಿ ಬೇರೆಯೇ ಆಗಿದೆ. ವೃತ್ತಪತ್ರಿಕೆಗಳು ಸರ್ಕಾರದ ಹಂಗಿನಲ್ಲಿ, ಕೃಪಾ ಕಟಾಕ್ಷದಲ್ಲಿ ಕೆಲಸ ನಿರ್ವಹಿಸಬೇಕಾಗಿವೆ. ಸರ್ಕಾರ ವಿರೋಧಿಸಿ ಪತ್ರಿಕೆ ನಡೆಸುವುದು ಪ್ರವಾಹದ ವಿರುದ್ಧ ಈಜಿದಂತೆ.

ಸರ್ಕಾರ ಸುಲಭವಾಗಿ ಪತ್ರಿಕಾ ಸ್ವಾತಂತ್ರ್ಯ ಹತ್ತಿಕ್ಕಲು ಅಸ್ತ್ರಗಳನ್ನು ಹೊಂದಿದೆ. ಐ.ಪಿ.ಸಿ.ಸಿ.ಆರ್.ಪಿ.ಸಿ. ಕಚೇರಿ ಗುಪ್ತತೆ ಕಾಪಾಡುವ ಕಾಯ್ದೆ, ಭಾರತ ಭದ್ರತಾ ಕಾಯ್ದೆ, ಮೀಸಾ, ಟಾಡಾ, ಒಂದೆಡೆಯಾದರೆ ಜಾಹಿರಾತು ಹಂಚಿಕೆಯಲ್ಲಿ ರಾಜಕೀಯ ಮುದ್ರಣ ಕಾಗದ ಹಂಚಿಕೆಯಲ್ಲಿ ರಾಜಕೀಯ, ಪ್ರಜಾ ತಾಂತ್ರಿಕ ಸಂಸ್ಥೆಗಳ ಮುನ್ನಡೆಗೆ ಅಡೆತಡೆ, ಭಯೋತ್ಪಾದನೆ, ರಾಜಕೀಯ ಮತ್ತು ಆರ್ಥಿಕ ಒತ್ತಡಗಳು ಇನ್ನೊಂದೆಡೆ ಪತ್ರಿಕಾ ಸ್ವಾತಂತ್ರ್ಯವನ್ನು ಮೊಟಕುಗೊಳಿಸುತ್ತದೆ. ಆದ್ದರಿಂದಲೇ, 'ಭಾರತೀಯ ಪತ್ರಿಕಾ ಪ್ರಪಂಚ ಸ್ವತಂತ್ರವಾಗಿದೆ, ಆದರೆ ಮುಕ್ತವಾಗಿಲ್ಲ' ಎಂಬ ನೂರ್ ಅನಿ ಅವರ ಮಾತು ಅಪ್ಪಟ ಸತ್ಯ.

ಮಾನಹಾನಿ ಕಾನೂನು

೧. ಗ್ರಂಥಸ್ವಾಮ್ಯ ಶಾಸನ (೧೯೫೭)

೨. ಅಧಿಕೃತ ರಹಸ್ಯಗಳ ಶಾಸನ (೧೯೨೩)

೩. ಭಾರತದ ದಂಡ ಶಾಸನದಲ್ಲಿ ಮಾನನಷ್ಟಕ್ಕೆ ಸಂಬಂಧಿಸಿದ ಪ್ರಕರಣಗಳು

ಭಾರತೀಯ ದಂಡ ಶಾಸನದ ಕೆಲವು ಭಾಗಗಳು ಪತ್ರಿಕಾ ಸ್ವಾತಂತ್ರ್ಯಕ್ಕೆ ಸಂಬಂಧಪಟ್ಟಿವೆ.

೧. ರಾಷ್ಟ್ರದ ವಿರುದ್ಧ ಅಪರಾಧಗಳ ಅಧ್ಯಾಯದಲ್ಲಿ ಪ್ರಕರಣ ೧೨೪(ಅ)ನಲ್ಲಿ ರಾಷ್ಟ್ರ ದ್ರೋಹಕ್ಕೆ ಸಂಬಂಧಿಸಿದ ಕೃತಿಯನ್ನು ಹೇಳಲಾಗಿದೆ.

'ಯಾರೇ ಆಗಲಿ, ಮಾತು, ಬರವಣಿಗೆ, ಸಂಜ್ಞೆಗಳು ಅಥವಾ ಪ್ರಾತಿನಿಧಿಕಗಳಿಂದ ಕಾನೂನು ಬದ್ಧವಾಗಿ ಸ್ಥಾಪಿತವಾದ ಭಾರತ ಸರ್ಕಾರದ ವಿರುದ್ಧ ಅವಿಶ್ವಾಸ ಉಂಟಾಗುವಂತೆ ಪ್ರಚೋದಿಸುವುದು ಅಥವಾ ಸರ್ಕಾರದ

ಬಗೆಗೆ ದ್ವೇಷ ಮತ್ತು ನಿಂದನೆಯುಂಟಾಗುವಂತೆ ಮಾಡುವುದು ಶಿಕ್ಷಾರ್ಹ'. ಇದು ಸಂವಿಧಾನ ಬದ್ಧ ಎಂದು ಕೇದಾರನಾಥ ಮೊಕದ್ದಮೆಯಲ್ಲಿ ವರಿಷ್ಠ ನ್ಯಾಯಾಲಯ ತೀರ್ಪಿತ್ತಿದೆ.

೨. ಪ್ರಕರಣ ೧೫೩(ಅ) ರೀತ್ಯಾ ಮಾತು, ಬರವಣಿಗೆ ಹಾಗೂ ಪ್ರತಿನಿಧಿಕಗಳ ಮೂಲಕ ವಿವಿಧ ಗುಂಪುಗಳ ನಡುವೆ, ಜಾತಿ, ಮತ, ಕುಲ, ಹುಟ್ಟಿದ ಸ್ಥಳ ಇಲ್ಲವೇ ಭಾಷೆ ಕುರಿತು ದ್ವೇಷಭಾವನೆಯನ್ನು ವರ್ಧಿಸಲು ಪ್ರೋತ್ಸಾಹಿಸುವುದು, ಶಾಂತಿಗೆ ಧಕ್ಕೆ ಉಂಟು ಮಾಡುವುದು ಶಿಕ್ಷಾರ್ಹ ಅಪರಾಧ.

೩. ಪ್ರಕರಣ ೨೬೨ (ಜಿ) ಪ್ರಕಾರ ಅಸಭ್ಯ ಅಥವಾ ಅಶ್ಲೀಲವಾದ ಪುಸ್ತಕ, ಹಸ್ತಪ್ರತಿ, ಬರಹಗಳು, ಚಿತ್ರಗಳು, ಸಿನಿಮಾ ಪ್ರಕಟಿಸುವುದು ಅಪರಾಧವೇ.

ಪ್ರಕರಣ ೪೯೯ರಲ್ಲಿ ಮಾನನಷ್ಟಕ್ಕೆ ಸಂಬಂಧಿಸಿದ ಅಪರಾಧಗಳನ್ನು ಉಲ್ಲೇಖಿಸಲಾಗಿದೆ. ಮಾತು, ಬರಹ, ಸಾಂಜ್ಞೆ ಅಥವಾ ಕಣ್ಣಿಗೆ ಕಾಣುವ ಪ್ರಾತಿನಿಧಿಕಗಳಿಂದ ಯಾರಿಗಾದರೂ ಮಾನನಷ್ಟ ಉಂಟಾಗುವಂತೆ ಆಪಾದನೆ ಮಾಡುವುದು, ಪ್ರಕಟಿಸುವುದು ಶಿಕ್ಷಾರ್ಹ ಅಪರಾಧ.

ಸತ್ತ ಮನುಷ್ಯನ ಚಾರಿತ್ರ್ಯದ ಬಗೆಗೆ ಆಪಾದಿಸುವುದೂ ಅಪರಾಧವೇ. ಒಂದು ಸಂಸ್ಥೆ ಅಥವಾ ಕಂಪೆನಿ ವಿರುದ್ಧ ಮಾನನಷ್ಟಕರ ಆಪಾದನೆ ಮಾಡುವುದೂ ಅಪರಾಧ.

ಯಾವ ಆಪಾದನೆಯಿಂದ ವ್ಯಕ್ತಿಯ, ಸಂಸ್ಥೆಯ, ಹೆಸರನ್ನು ಮೂರನೆಯವರ ದೃಷ್ಟಿಯಲ್ಲಿ ಕೆಡುವಂತೆ ಮಾಡುವುದು ಅಥವಾ ಸ್ಥಾನಮಾನಕ್ಕೆ ಧಕ್ಕೆಯುಂಟು ಮಾಡುವುದು, ಹಾಗೂ ವ್ಯಕ್ತಿಯನ್ನು ಎಲ್ಲರೂ ಕೀಳಾಗಿ ಕಾಣುವ, ರೋಗದಿಂದ ನರಳುತ್ತಿದ್ದಾನೆಂದು ಆಪಾದಿಸುವುದು ಶಿಕ್ಷಾರ್ಹ ಅಪರಾಧ.

ಮಾನಹಾನಿಯಲ್ಲಿ ಎರಡು ವಿಧ. ಅವು,

೧. ಸ್ಥಿರ ಮಾನಹಾನಿ

೨. ಅಸ್ಥಿರ ಮಾನಹಾನಿ

ಇದರ ಮೂರನೆಯ ಬಗೆ ೩. ಇನ್ನುಯೆಂಡೊ

ನ್ಯಾಯಾಲಯದಲ್ಲಿ ಮಾನಹಾನಿ ಮೊಕದ್ದಮೆ ಹೂಡಲು ಮಾನನಷ್ಟ ಆದವನಿಗೇ ಅಧಿಕಾರ ಇನ್ನಾರಿಗೂ ಇಲ್ಲ. ವಾದಿ ಮೊಕದ್ದಮೆ ಹೂಡಲು ಮೂರು ಅಂಶಗಳನ್ನು ನ್ಯಾಯಾಲಯದ ಮುಂದೆ ಸ್ಥಿರಪಡಿಸಿದರೆ ಮಾತ್ರ ಮೊಕದ್ದಮೆ ದಾಖಲಾಗುತ್ತದೆ.

ಈ ಮೂರು ಅಂಶಗಳು ಹೀಗಿವೆ :

೧. ಇದು ಮಾನಹಾನಿ ಹೇಳಿಕೆ

೨. ಮಾನಹಾನಿ ಹೇಳಿಕೆ ನನಗೆ ಸಂಬಂಧಿಸಿದೆ.

೩. ಪ್ರಕಟಣೆ ಮಾಡಲಾಗಿದೆ.

ಆನಂತರ 'ಬರ್ಡನ್ ಆಫ್ ಪ್ರೂಫ್' ಫಿರ್ಯಾದಿಯ ಜವಾಬ್ದಾರಿ.

ಮಾನಹಾನಿ ರಕ್ಷಣೆಗಳು :

೧. ಸತ್ಯ, ಸತ್ಯವಾದ ಹೇಳಿಕೆ

೨. ಯುಕ್ತ ವಿಮರ್ಶೆ ಅಥವಾ ಸದುದ್ದೇಶ ಟೀಕೆ

೩. ಸವಲತ್ತುಗಳು

೧. ತಾನು ಹೇಳುತ್ತಿರುವುದು ಸತ್ಯ ಮತ್ತು ಸಾರ್ವಜನಿಕ ಒಳಿತಿಗಾಗಿ ಪ್ರಕಟಿಸಬೇಕಾಯಿತು.

೨. ಒಬ್ಬ ಸರ್ಕಾರಿ ಅಧಿಕಾರಿಯ ಅಧಿಕಾರ ಕ್ಷೇತ್ರದಲ್ಲಿನ ನಡವಳಿಕೆಯನ್ನು ಸದುದ್ದೇಶದಿಂದ ಟೀಕಿಸಿದ್ದೇನೆ.

೩. ನ್ಯಾಯಾಲಯದ ವಿಚಾರಣೆಯನ್ನು ಪ್ರಾಮಾಣಿಕವಾಗಿ ವರದಿ ಮಾಡಿದ್ದೇನೆ

೪. ನ್ಯಾಯಾಲಯದ ತೀರ್ಮಾನವನ್ನು ಕುರಿತು ಸದುದ್ದೇಶದಿಂದ ಅಭಿಪ್ರಾಯ ವ್ಯಕ್ತಪಡಿಸಿದ್ದೇನೆ.

೫. ಇನ್ನೊಬ್ಬರ ಮೇಲೆ ಕಾನೂನು ಬದ್ಧ ಅಧಿಕಾರವಿರುವುದೋ ಅಂತಹವರ ಹತ್ತಿರ ಸದುದ್ದೇಶದಿಂದ ಅವರ ಕೈ ಕೆಳಗಿನವರ ಬಗೆಗೆ ದೂರುವುದು.

೬. ತನ್ನ ಹಿತ ಅಥವಾ ಪರರ ಹಿತ ಹಾಗೂ ಸಾರ್ವಜನಿಕ ಒಳಿತಿಗಾಗಿ ಸದುದ್ದೇಶದಿಂದ ಇನ್ನೊಬ್ಬನ ಚಾರಿತ್ರ್ಯವನ್ನು ಕುರಿತು ಎಚ್ಚರಿಸುವುದು.

ಮಾನ ನಷ್ಟಕರ ವಿಚಾರಗಳನ್ನೊಳಗೊಂಡ ವಸ್ತುಗಳನ್ನು ಮಾರಾಟ ಮಾಡುವುದೂ ಮಾನಹಾನಿ ಅಪರಾಧವಾಗುತ್ತದೆ (ಪ್ರಕರಣ ೫೦೨).

❑

೧೧. ದಲಿತ ಮಹಿಳೆ-ಶಿಕ್ಷಣ-ಸಬಲೀಕರಣ

- ಶಾಂತಮ್ಮ

ಭಾರತೀಯ ಸಮಾಜದಲ್ಲಿ ಜಾತಿ ಪದ್ಧತಿ ಪ್ರಮುಖ ಪಿಡುಗು. ಸಾಮಾಜಿಕ ಸಂರಚನೆಯಲ್ಲಿ ಜಾತಿವ್ಯವಸ್ಥೆ ಪ್ರಮುಖ ಪಾತ್ರ ವಹಿಸಿದೆ. ಇದು ಏಣಿ-ಶ್ರೇಣಿಯಿಂದ ಕೂಡಿದ ಸಮಾಜ. ಇಂತಹ ಸಮಾಜದಲ್ಲಿ ತುಟ್ಟತುದಿಯಲ್ಲಿ ಬ್ರಾಹ್ಮಣರಿದ್ದರೆ, ಕೆಳವುಟ್ಟದಲ್ಲಿ ಶೂದ್ರರಿದ್ದಾರೆ. ಸವಾಜದಲ್ಲಿ ಮೇಲು-ಕೀಳೆಂಬ ಭಾವನೆಯಿರುವುದರಿಂದ ಶೋಷಣೆಗಳು ಹೆಚ್ಚಾಗುತ್ತವೆ. ಶೋಷಿತ ವರ್ಗಗಳಲ್ಲಿ ದಲಿತ ಮಹಿಳೆ ಒಬ್ಬಳಾಗಿದ್ದು, ಇಡೀ ಸಮಾಜದ ಶೋಷಣೆಯ ಸರಕಾಗಿದ್ದಾಳೆ. ಈ ಹಿನ್ನೆಲೆಯಲ್ಲಿ ದಲಿತ ಮಹಿಳೆಯರಲ್ಲಿ ಜಾಗೃತಿ ಮೂಡಿಸಿ ಸಬಲೀಕರಣ ಸಾಧಿಸಲು ಶಿಕ್ಷಣದ ಮಹತ್ವವೇನು? ಎಂಬುದರ ಬಗ್ಗೆ ಈ ಲೇಖನ ಬೆಳಕು ಚೆಲ್ಲುತ್ತದೆ.

ದಲಿತ ಪರಂಪರೆಗೆ ಸುದೀರ್ಘವಾದ ಚರಿತ್ರೆಯಿದೆ. ಕಾಲದ ಅನೇಕ ಘಟ್ಟಗಳಲ್ಲಿ ತನ್ನ ಸಂಸ್ಕೃತಿಯ ವಿಕಾಸವನ್ನು ಸರಿದೂರದಲ್ಲಿ ನಿರ್ವಹಿಸಿಕೊಳ್ಳುತ್ತಲೇ ಬಂದಿದೆ. ಜಗತ್ತಿನ ಉದ್ದಕ್ಕೂ ನೊಂದ ಅಸಹಾಯಕ ಸಮುದಾಯ ಇವರಾಗಿದ್ದಾರೆ. ಈ ಹಿನ್ನೆಲೆಯಲ್ಲಿಯೇ ಭಾರತದ ಮೇಲುಜಾತಿಗಳು ತಮ್ಮ ಶೋಷಣೆಯ ಹಕ್ಕುದಾರಿಕೆಯನ್ನು ಇಂದಿಗೂ ಪೂರ್ಣವಾಗಿ ನಿರಾಕರಿಸಲು ಸಾಧ್ಯವಾಗಿಲ್ಲ. ಹಾಗೆಯೇ ಎಲ್ಲ ಕೆಳಜಾತಿಗಳೂ ಕೂಡ ರಾಜಕೀಯ ಹಾಗೂ ಆಧುನಿಕ ರೂಪಾಂತರಗಳಿಗೆ ತಮ್ಮ ತಮ್ಮ ಸಾಂಸ್ಕೃತಿಕ ಚೌಕಟ್ಟಿನಿಂದಲೇ ಮುಖಾಮುಖಿ ಯಾಗುತ್ತಿವೆ. ಇಡೀ ಭಾರತವೇ ಇವತ್ತು ಜಗತ್ತಿನ ಅತಿ ದೊಡ್ಡ ರೂಪಾಂತರ ಕೇಂದ್ರ, ಇಲ್ಲಿ ಆಗುತ್ತಿರುವಷ್ಟು ವೈರುಧ್ಯಗಳು, ಬಹುರೂಪಗಳು, ಬದಲಾವಣೆಗಳು, ಹೋರಾಟಗಳು, ಮಾರಾಟಗಳು; ರಾಜಕೀಯ ಧೂರ್ತತೆಗಳು ಸಮುದಾಯಗಳ ಸೂಕ್ಷ್ಮ ವೈಚಾರಿಕ ವಿಕಾಸಗಳು ಜಗತ್ತಿನ ಬೇರೆಲ್ಲೂ ಘಟಿಸಲು ಸಾಧ್ಯವಿಲ್ಲ.

ಹೆಣ್ಣಿನ ಗತದ ಶೋಧನೆ ಮಾಡಿದರೆ ಹೆಣ್ಣು ಯಾವಾಗ ಶಿಕ್ಷಣ ಪಡೆಯುವುದರಿಂದ ಹೊರಗುಳಿದಳೋ, ಆ ಘಳಿಗೆಯಿಂದಲೇ ಅವಳ ಅಧೀನತೆಯ ಇತಿಹಾಸ ಪ್ರಾರಂಭವಾಗುತ್ತದೆ. ಈ ನಿಜವನ್ನು ನಾವು ಅರಿಯಬೇಕಾದರೆ ಮಹಿಳಾ ಶಿಕ್ಷಣದ ಪ್ರಶ್ನೆಯನ್ನು ವಸಾಹತು ಸಂದರ್ಭದಲ್ಲಿ ಇಟ್ಟು ನೋಡಬೇಕಾಗುತ್ತದೆ. ವಸಾಹತುಶಾಹಿ ತಂದ ಕೆಲವು ಶೈಕ್ಷಣಿಕ ಬದಲಾವಣೆಗಳು ನಮ್ಮನ್ನು ತಲ್ಲಣಗೊಳಿಸಿದರೆ ಮತ್ತೆ ಕೆಲವು ನಮ್ಮಲ್ಲಿದ್ದ ಅನಿಷ್ಟಗಳಿಂದ ಬಿಡುಗಡೆ ಪಡೆಯಲು ದಾರಿಯಾದವು. ಬಾಲ್ಯವಿವಾಹ, ಬಹುಪತ್ನಿತ್ವ, ದೇವದಾಸಿ, ವೇಶ್ಯಾವಾಟಿಕೆಯಂತಹ ಅನಿಷ್ಟತೆಗಳನ್ನು ಕಿತ್ತೊಗೆಯಲು ಸಹಾಯಕಾರಿಯಾಯಿತು. ಶಿಕ್ಷಣದ ಪರಿಧಿಯಿಂದ ಹೊರಗಿಟ್ಟಿದ್ದ ಮಹಿಳೆ ಶಿಕ್ಷಣ ವೃತ್ತದೊಳಗೆ ಬಂದಳು.

ಭಾರತೀಯ ಹಿಂದೂ ಸಮಾಜದಲ್ಲಿ ಸ್ತ್ರಿಯರಿಗೆ ಶಿಕ್ಷಣ ಪಡೆಯುವ ಅವಕಾಶವಿರಲಿಲ್ಲ. ಹೆಚ್ಚಿನದಾಗಿ ಮಹಿಳೆಯರು ಅನಕ್ಷರಸ್ಥರಾಗಿದ್ದರು. ಅದರಲ್ಲಿಯೂ ಅಂದಿನ ದಿನಗಳಲ್ಲಿ ದಲಿತ ಸ್ತ್ರೀಯರಂತೂ ಶಿಕ್ಷಣದಿಂದ ದೂರವೇ ಉಳಿದಿದ್ದರು. ಇದಕ್ಕೆ ಕಾರಣ ಭಾರತೀಯ ಸಮಾಜದಲ್ಲಿದ್ದ ವೈರುಧ್ಯಗಳು. ಆದರೂ ವೇದಗಳ ಕಾಲದಲ್ಲಿ ಮಹಿಳೆಗೆ ಉನ್ನತ ಸ್ಥಾನವಿತ್ತು. ಆ ದಿನಗಳಲ್ಲಿ ಪುರುಷ ಸಮಾನ ಶಿಕ್ಷಣ, ಉಪನಯನ, ವೇದಾಧ್ಯಯನಕ್ಕೆ ಅವಕಾಶವಿತ್ತು. ಆದರೆ ಕೆಳಜಾತಿಯ ಸ್ತ್ರೀಯರಿಗೆ ಈ ರೀತಿಯ ಆಚರಣೆಗಳು ಇರಲಿಲ್ಲ. ಪ್ರಾಚೀನ ಕಾಲದ ಸ್ತ್ರೀಯರು ಶಿಕ್ಷಣ ಪಡೆದಿದ್ದರು ಎಂಬುದಕ್ಕೆ ಮನುಸ್ಮೃತಿಯಲ್ಲಿ ಸಾಧಾರಣ ಪಾಂಡಿತ್ಯವುಳ್ಳ ಹಲವರ ಹೆಸರು ಉಲ್ಲೇಖಗೊಂಡಿದೆ. ಅವರಲ್ಲಿ ಪ್ರಮುಖರು ಸುಲಭಾ, ಮೈತ್ರೇಯಿ, ಅಪಲಾ, ಗಾರ್ಗಿ, ಲೋಪಮುದ್ರಾ, ವಿಶ್ವವಾರಾ, ಘೋಷಾ, ಯಮಿ, ಪುಲೋಮಿ, ನೋಧಾ ಮುಂತಾದವರು.

ಮಧ್ಯಕಾಲೀನ ಭಾರತದಲ್ಲಿ ಜಾತಿಯ ಪ್ರಾಬಲ್ಯತೆ ಹೇಳತೀರದಷ್ಟು ದಲಿತರು ಮಾತ್ರ ಈ ವ್ಯವಸ್ಥೆಯ ಸರಪಳಿಯಲ್ಲಿ ಬಂಧಿಯಾಗಿದ್ದರು. ಮನುಷ್ಯ ಹುಟ್ಟುತ್ತಾ ಸ್ವತಂತ್ರ, ಆದರೆ ಬೆಳೆಯುತ್ತಾ ಸಾಮಾಜಿಕ ವೈರುಧ್ಯಗಳ ಸರಪಳಿಯಲ್ಲಿ ಸಿಲುಕಿಕೊಳ್ಳುತ್ತಾನೆ ಎಂದು ಅಭಿಪ್ರಾಯಪಟ್ಟಿರುವುದು ವಾಸ್ತವಕ್ಕೆ ಹಿಡಿದ ಕೈಗನ್ನಡಿ. ಹಾಗಾಗಿ ದಲಿತ ಮಹಿಳೆಯರ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಶೋಷಣೆ ಮುಗಿಲು ಮುಟ್ಟಿತ್ತು. ಮಧ್ಯಕಾಲೀನ ಅವಧಿಯಲ್ಲಿ ಸ್ತ್ರೀಯರ ಸ್ಥಾನಮಾನಗಳಲ್ಲಿ ಅಲ್ಪ ಪ್ರಮಾಣದಲ್ಲಿ ಬದಲಾವಣೆಗಳು ಉಂಟಾದವು. ಅಂದರೆ ಬಾಲ್ಯವಿವಾಹ, ಸತಿಪದ್ಧತಿ, ದೇವದಾಸಿ ಪದ್ಧತಿ, ವಿಧವಾವಿವಾಹ ಇವುಗಳ ವಿರುದ್ಧ ಹೋರಾಟ ಮಾಡುವ ಯಶೋಗಾಥೆ ಆರಂಭವಾಯಿತು.

ಭಕ್ತಿ ಪಂಥದ ಚಳವಳಿ ಸ್ತ್ರೀಯರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಜೀವನಕ್ಕೆ ಹೊಸ ಚಾಲನೆಯನ್ನು ನೀಡಿತು. ಶ್ರೀರಾಮಾನುಜಾಚಾರ್ಯ, ಗುರುನಾನಕ್, ಕಬೀರ್, ಮೀರಾಬಾಯಿ, ತುಳಸೀದಾಸ್ ಮುಂತಾದವರು ಸ್ತ್ರೀಯರ ಧಾರ್ಮಿಕ ಆಚರಣೆಗಳಿಗೆ ಮುಕ್ತ ಅವಕಾಶ ನೀಡಿದ್ದರು. ಇದರಿಂದಾಗಿ ಮಹಿಳೆಯರ ಸಾಮಾಜಿಕ ಸ್ಥಿತಿ ಸುಧಾರಿಸಿ ಸ್ತ್ರೀಯರ ಶಿಕ್ಷಣದ ಮೇಲೆ ವಿಧಿಸಿದ್ದ ಕಟ್ಟುಪಾಡುಗಳು ಸಡಿಲಗೊಂಡವು.

ಆಧುನಿಕ ಭಾರತದಲ್ಲಿ ದಲಿತ ಮಹಿಳೆಯರ ಸ್ಥಾನಮಾನಗಳಲ್ಲಿ ಅನೇಕ ಬದಲಾವಣೆಗಳಾದವು. ಇದಕ್ಕೆ ಕಾರಣ ಸಮಾಜಸುಧಾರಕರ ಆಶೋತ್ತರ ಮತ್ತು ಆಂದೋಲನಗಳು (ಅಂತಹ ಮಹನೀಯರುಗಳೆಂದರೆ) ಮಹಾತ್ಮ ಜ್ಯೋತಿಬಾಪುಲೆ ಈಶ್ವರಚಂದ್ರ ವಿದ್ಯಾಸಾಗರ, ಮಹರ್ಷಿಕರ್ವೆ, ಸಯ್ಯಾಜಿರಾವ್‌ಗಾಯಕವಾಡ್, ಶಾಹುಮಹಾರಾಜ್, ಬಸವಣ್ಣ, ಬುದ್ಧ, ಗಾಂಧಿ, ಲೋಹಿಯಾ, ಅಂಬೇಡ್ಕರ್ ಮುಂತಾದ ಗಣ್ಯರ ಶ್ರಮದ ಫಲದಿಂದ ಸ್ತ್ರೀಯರ ಶಿಕ್ಷಣಕ್ಕೆ ಉತ್ತಮ ಅವಕಾಶಗಳು ಲಭಿಸಿದವು.

ಶೈಕ್ಷಣಿಕ ದೌರ್ಬಲ್ಯವು ಅತೀ ಮಹತ್ವದ ದೌರ್ಬಲ್ಯ. ಅಂದಿನ ದಿನಗಳಲ್ಲಿ ದಲಿತ ಮಹಿಳೆಗೆ ಶಿಕ್ಷಣದ ಅವಕಾಶ ದೊರೆಯುತ್ತಿರಲಿಲ್ಲ. ಅಲ್ಲದೆ ಅವರಿಗೆ ಶಾಲಾ-ಕಾಲೇಜುಗಳಿಗೆ ಪ್ರವೇಶವಿರಲಿಲ್ಲ. ಆದರೆ ಬ್ರಿಟಿಷರ ಕಾಲದಲ್ಲಿ ಸಾರ್ವತ್ರಿಕವಾಗಿ ಏಕರೂಪದ ಶಿಕ್ಷಣ ಜಾರಿಯಾಯಿತು. ಬಹುತೇಕ ದಲಿತರಿಗೆ ಈ ಅವಕಾಶವನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಆದ್ದರಿಂದಲೇ ಇಂದಿಗೂ ಕೂಡ ಈ ಜನರು ಅನಕ್ಷರಸ್ಥರಾಗಿಯೇ ಉಳಿದಿದ್ದಾರೆ. ಆಗಿನ ಭಾರತೀಯ ಸಾಮಾಜಿಕ ಹಿನ್ನೆಲೆಯಲ್ಲಿ ಶಿಕ್ಷಣ ಮತ್ತು ಉದ್ಯೋಗ ಪಡೆಯುವುದು ಕ್ರಾಂತಿಕಾರಕ ಬೆಳೆವಣಿಗೆಯಾಗಿತ್ತು. ಇದು ವಿದ್ಯಾಕ್ಷೇತ್ರದಲ್ಲಿ ಪುರುಷ-ಮಹಿಳೆ ಸರಿಸಮಾನರು ಎಂಬ ಪ್ಲೇಟೋರವರ ಉಕ್ತಿಗೆ ತದ್ವಿರುದ್ಧವಾದ ಸಂಗತಿಯಾಗಿತ್ತು. ಆದರೆ ಮಹಾತ್ಮ ಗಾಂಧೀಜಿಯವರು ಮಾತ್ರ ಮಹಿಳಾ ಶಿಕ್ಷಣದ ಬಗ್ಗೆ ಸದಭಿಪ್ರಾಯ ಹೊಂದಿದ್ದರು. ಸ್ತ್ರೀಯರಿಗೆ ಶಿಕ್ಷಣ ಒಂದು ಪ್ರಮುಖ ಹಕ್ಕು ಎಂದಿದ್ದರು. "ಎಲ್ಲ ಜಾತಿಯ ಸ್ತ್ರೀಯರ ಶಾರೀರಿಕ, ಮಾನಸಿಕ, ಬೌದ್ಧಿಕ ಬೆಳೆವಣಿಗೆಯಾಗಿ ಅವರು ಇನ್ನೊಬ್ಬರ ಮೇಲೆ ಅವಲಂಬಿತ ಬದುಕನ್ನು ನಡೆಸುವ ಸ್ಥಿತಿಯು ಎದುರಾಗದೇ ಮಹಿಳೆ ಸ್ವಾವಲಂಬಿಯಾಗಿ, ಸಬಲೆಯಾಗಲು ಶಿಕ್ಷಣ ಏಕಮೇವ ಅಸ್ತ್ರ" ಎನ್ನುವ ಗಾಂಧಿಜಿಯವರ ಆಶಯ ಇಂದಿನ ದಲಿತ ಮಹಿಳೆಯರ ಸಬಲೀಕರಣಕ್ಕೆ ತೋರಿದ ಹೆದ್ದಾರಿ.

ಒಂದು ರಾಷ್ಟ್ರದ ನೀಲಿನಕ್ಷೆಯಾದ ಶ್ರೇಷ್ಠ ಸಂವಿಧಾನವನ್ನು ರಾಷ್ಟ್ರಕ್ಕೆ ಸಮರ್ಪಿತಗೊಳಿಸಿದ ಡಾ. ಬಾಬಾಸಾಹೇಬ್ ಅಂಬೇಡ್ಕರ್‌ರವರು ರಾಷ್ಟ್ರದ ಅಖಂಡತೆಯನ್ನು ಎತ್ತಿಹಿಡಿದದ್ದು ಮಾತ್ರವಲ್ಲದೇ, ಮಹಿಳೆಯರನ್ನು ಸಮಾಜದಲ್ಲಿ ಸಮಾನ ಸ್ಥಾನದಲ್ಲಿ ಪ್ರತಿಷ್ಠಾಪಿಸುವ ಮೂಲಕ ಮಾನವ ಜೀವನದ ಪರಿಪೂರ್ಣತೆಯನ್ನು ಪರಮಾರ್ಥ ಸಿದ್ಧಿಪಥವನ್ನು ಸಿದ್ಧಪಡಿಸಿದರು. ವೈಚಾರಿಕ ಚಿಂತನೆಯ ಹಿನ್ನೆಯಲ್ಲಿ "ಸ್ತ್ರೀ ಸಂಗವಿಲ್ಲದೆ ಮಾನವ ಬದುಕೇ ಅಪರಿಪೂರ್ಣ" ಎಂದಿದ್ದಾರೆ. ಈ ಅಂಶಗಳನ್ನು ಕೆಳಗಿನಂತೆ ಮೌಲ್ವೀಕರಿಸಿದ್ದಾರೆ.

ಮಹಿಳೆಯರನ್ನು ತುಚ್ಛೀಕರಿಸಿದರೆ ಅಥವಾ ಶೋಷಣೆಗೆ ಒಳಪಡಿಸಿದರೆ ಇಡೀ ಮಾನವ ಜನಾಂಗವನ್ನೇ ಒಂದರ್ಥದಲ್ಲಿ ಘನಹೀನ ಸ್ಥಿತಿಗೆ ತಳ್ಳಿದಂತಾಗುತ್ತದೆ. ಕಾನೂನುಗಳ ಮೂಲಕ ಮಹಿಳೆಯರನ್ನು ಮಾನವೀಯ ಸ್ತರದಲ್ಲಿ ಗೌರವಿಸಿದ ಅಂಬೇಡ್ಕರ್ ಚಿಂತನೆ ಹಾಗೂ ಆ ಬಗೆಗಿನ ಅವರ ದೂರಗಾಮಿ ಸತ್ಯಶೋಧನೆ ಮತ್ತು ಅವರ ಪ್ರತಿಪಾದನೆ ಮಾತ್ರವಲ್ಲದೆ ಅವರ ಪ್ರತಿಷ್ಠಾಪನೆಗೆ ಸಮಸ್ತ ಮಾನವ ಜನಾಂಕ ಮನನ ಮಾಡಬೇಕಾದ ಹಾಗೂ ಗೌರವದಿಂದ ಸತ್ಯಶೋಧನೆಗೆ ತೊಡಗಿಸಿಕೊಳ್ಳಬೇಕಾದ ಅನಿವಾರ್ಯವಿದೆ.

ಇಡೀ ಮಹಿಳಾ ಸಮುದಾಯವನ್ನೇ ದಲಿತರಂತೆ ತುಚ್ಛೀಕರಿಸಲು ಕಾರಣವಾದ ಸಾಮಾಜಿಕ ಸಮಸ್ಯೆಗಳನ್ನು ನಿವಾರಿಸಿ ಪುರುಷನಂತೆ ಸ್ತ್ರೀಯರಿಗೂ ನಾಗರಿಕ ಹಕ್ಕುಗಳ ಚಲಾವಣೆಗೆ ಅವಕಾಶ ನೀಡಿ, ಸ್ತ್ರೀ ಸಮೂಹಕ್ಕೆ ರಾಜಕೀಯ ಆರ್ಥಿಕ ಸಹಭಾಗಿತ್ವಕ್ಕೆ ಬುನಾದಿ ಹಾಕಿದ ಅಂಬೇಡ್ಕರ್ ನಿಟ್ಟಿನಲ್ಲಿ ಸಮಾಜೋದ್ಧಾರಕ್ಕೆ ತಮ್ಮನ್ನರ್ಪಿಸಿಕೊಂಡಿದ್ದ ಇತರ ಮಹನೀಯರೆಂದರೆ; ಸಾವಿತ್ರಿಬಾಯಿ ಫುಲೆ, ತಾರಾದತ್, ಪಂಡಿತ್ ರಮಾಬಾಯಿ, ಸ್ವರ್ಣಕುಮಾರಿದೇವಿ ಕಾಮಿನಿರೈ, ಆನಿಬೆಸೆಂಟ್, ಗಾನಕೋಗಿಲೆ ಸರೋಜಿನಿದೇವಿನಾಯ್ಡು, ಕಮಲಾಚಟ್ಟೋಪಾಧ್ಯಾಯ ಇವರೆಲ್ಲರೂ ರಾಜಕೀಯ ಹಾಗೂ ಶೈಕ್ಷಣಿಕ ಹಕ್ಕುಗಳಿಗಾಗಿ ಪಾರಮಾರ್ಥಿಕವಾಗಿ ಪರಿಶ್ರಮಿಸಿದರು.

ದಲಿತ ಸಮುದಾಯಗಳ ಆಧುನೀಕರಣ, ರಾಷ್ಟ್ರೀಕರಣ, ದೇಶೀಕರಣ ಹಾಗೂ ಜಾಗತೀಕರಣಗಳು ಸವಾಲು ಮತ್ತು ಸಾಧ್ಯತೆಗಳೆರಡನ್ನೂ ಒಡ್ಡುತ್ತಿವೆ. ಭಾರತದ ಇಂದಿನ ಸಂದರ್ಭದಲ್ಲಿ ದಲಿತ ಚಿಂತನೆಗಳು, ಅಧ್ಯಯನ ಶೈಲಿಗಳು, ಕ್ರಮಗಳು, ನಿರೂಪಣೆಗಳು ಭಿನ್ನಕಥನಗಳಾಗಿ ಬೌದ್ಧಿಕ ವಲಯಗಳಲ್ಲಿ ಸೇರ್ಪಡೆಯಾಗುತ್ತಿವೆ. ಇದರಿಂದಾಗಿ ಜಾಗತೀಕರಣದ ಈ ವಿದ್ಯಮಾನದಲ್ಲಿ ಅಂತರರಾಷ್ಟ್ರೀಯ ವಲಯದಲ್ಲೂ ದಲಿತ ಸಂಸ್ಕೃತಿಗಳ ಅಧ್ಯಯನಗಳು ಶೈಕ್ಷಣಿಕ ಮಟ್ಟದಲ್ಲಿ ಹೊಸ ಆಕೃತಿಗಳನ್ನು ನಿರ್ಮಿಸುತ್ತಿವೆ. ದಲಿತ, ಅಲ್ಪಸಂಖ್ಯಾತ, ಆದಿವಾಸಿ ಹಾಗೂ ಬುಡಕಟ್ಟು ಮಹಿಳಾ ಸಂಸ್ಕೃತಿಗಳೆಲ್ಲದರ ಪ್ರಶ್ನೆಗಳು ನಮ್ಮ ನಮ್ಮ ವಸ್ತುಸ್ಥಿತಿಯ ವಿಧಾನವನ್ನೇ ಬದಲಿಸಬೇಕೆಂದು ಒತ್ತಾಯಿಸುತ್ತಿವೆ.

ಈ ಎಲ್ಲಾ ಬದಲಾವಣೆಗಳ ಫಲಶ್ರುತಿಯಾಗಿ ಸ್ತ್ರೀಯರ ಶಿಕ್ಷಣಕ್ಕೆ ಎಲ್ಲಾ ಹಂತದಲ್ಲಿಯೂ ಅಂದರೆ ಖಾಸಗಿ ಮತ್ತು ಸರ್ಕಾರಿ ವಲಯಗಳೆರಡರಲ್ಲಿಯೂ ಹೆಚ್ಚು ಪ್ರೋತ್ಸಾಹ ನೀಡಲು ವ್ಯವಸ್ಥೆ ಸ್ಪಂದಿಸಬೇಕಿದೆ. ಶಿಕ್ಷಣ ಮಹಿಳೆಯ ಉನ್ನತಿಗೆ ಕಾರಣ. ಅಂತೆಯೇ ಸಮಾಜದಲ್ಲಿ ಉನ್ನತಿಗೂ ಕಾರಣ. ದಲಿತ ಮತ್ತು ಇತರೇ ಹಿಂದುಳಿದ ವರ್ಗದ ಮಹಿಳೆಯರ ಸಬಲೀಕರಣಕ್ಕೆ ಆಮೂಲಾಗ್ರ ಔಷಧ ಶಿಕ್ಷಣ. ಸಮಾಜದಲ್ಲಿ ಶೋಷಣೆ ಅಂತ್ಯವಾಗಬೇಕಾಗಿದ್ದಲ್ಲಿ ಜಾತಿ ಸಮಸ್ಯೆಗೆ ಆದ್ಯತೆ ನೀಡಬೇಕು. ಸರ್ಕಾರಗಳು ಈ ನಿಟ್ಟಿನಲ್ಲಿ ಚಿಂತಿಸಿದರೆ ಸ್ತುತ್ಯಾರ್ಹ.

ಆಧಾರ ಗ್ರಂಥಗಳು

೧) Aruna goel, "Education and socio-Economic perspectives of women Development and Empowerment" New Delhi-2004

೨) ಡಾ. ಬಾಬುರಾವ್ ಮುಡಬಿ – "ಮಹಿಳಾ ಸಬಲೀಕರಣ ಅಂಬೇಡ್ಕರ್ ದೃಷ್ಟಿಕೋನ" ಲಕ್ಷ್ಮಿ ಪ್ರಕಾಶನ – ಬೆಂಗಳೂರು – ೨೦೦೦

೩) "Dalit women" - G.K. Ghosh.
A.P.H. Publishing corporation- New Delhi, 1997

೪) ಡಾ. ಪಿ. ಮಹಾದೇವಯ್ಯ – "ದಲಿತರು ಮತ್ತು ಪರ್ಯಾಯ ರಾಜಕಾರಣ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ – ೨೦೦೫

೫) ಮೊಗಳ್ಳಿ ಗಣೇಶ್ ; "ದಲಿತರು ಮತ್ತು ಜಾಗತೀಕರಣ" ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ, ೧೯೯೯

ಈ ಸಂಚಿಕೆಯ ಬರಹಗಾರರು

ಡಾ. ನಿರ್ಮಲ್‌ರಾಜು
ಇತಿಹಾಸ ಪ್ರಾಧ್ಯಾಪಕರು
ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು – ೫

ಶಿವಾನಾಯಕ್ ಕೆ.

ಡಾ. ಜಿ.ಟಿ. ರಾಮಚಂದ್ರಪ್ಪ
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ
ಮಾನಸಗಂಗೋತ್ರಿ – ಮೈಸೂರು – ೬

ಪಿ. ಮಹದೇವಮ್ಮ
ಸಂಶೋಧಕರು
ಇತಿಹಾಸ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ರಾಜೇಶ್
ಸಂಶೋಧಕರು
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಭಾಷಾವಿಜ್ಞಾನ ಅಧ್ಯಯನ ವಿಭಾಗ
ಮಾನಸಗಂಗೋತ್ರಿ, ಮೈಸೂರು–೫

ಎಂ. ರಾಚಪ್ಪಾಜಿ
ಸಂಶೋಧಕರು
ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ
ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು – ೬

ಜೆ. ಲೋಹಿತ್
ಅತಿಥಿ ಉಪನ್ಯಾಸಕರು
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ
ಮಹಾರಾಜ ಕಾಲೇಜು, ಮೈಸೂರು – ೫

ಬಸವರಾಜ ಕೋಡಗುಂಟಿ
ದ್ರಾವಿಡ ವಿಶ್ವವಿದ್ಯಾಲಯ
ಕುಪ್ಪಮ್-೫೧೭೪೨೫
ಆಂಧ್ರ ಪ್ರದೇಶ

ಪ್ರೊ. ಎ.ಎಸ್. ಶೇಷಗಿರಿರಾವ್
ಪ್ರಾಧ್ಯಾಪಕರು,
ತತ್ವಶಾಸ್ತ್ರ ವಿಭಾಗ
ಮಾನಸಗಂಗೋತ್ರಿ, ಮೈಸೂರು – ೬

ಗೋಪಾಲಕೃಷ್ಣ ಭಟ್ಟ
ಸಂಸ್ಕೃತ ಪ್ರಾಧ್ಯಾಪಕರು
ಶಾನೇಪಾಲ, ಇಡಗುಂದಿ
ಯಲ್ಲಾಪುರ – ೫೮೧೩೩೭

ಆರ್.ಎನ್. ಪದ್ಮನಾಭ
ನಿವೃತ್ತ ಪ್ರಾಧ್ಯಾಪಕರು
ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಮಹಾರಾಜ ಕಾಲೇಜು
ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-೫

ಶಾಂತಮ್ಮ
ರಾಜ್ಯಶಾಸ್ತ್ರ ಉಪನ್ಯಾಸಕರು
ಸ.ಪ.ಪೂ. ಕಾಲೇಜು
ಸಂತೇಮರಳ್ಳಿ

ರೆ.ನ.946 - ಎಂ.ಯು.ಪಿ.ಬಿ.300ಪ್ರತಿಗಳು - 13-1-2011